Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 | ಸಂಚಿಕೆ–52 | ಡಿಸೆಂಬರ್ 25–31, 2023 | ಪುಟ 16 | ರೂ. 10/–
Volume-17 | Issue-52 | December 25-31, 2023 | Pages:16 | Price : 10/-



ದಕ್ಷಿಣ ಕನ್ನಡ : ಜನಪರ ಅಭಿವೃದ್ಧಿಯ ಪರ್ಯಾಯಕ್ಕಾಗಿ ಜನಾಂದೋಲನ



ಕ್ರಿಮಿನಲ್ ಕಾನೂನುಗಳಲ್ಲಿ ಅಪಾಯಕಾರಿ ಸುಧಾರಣೆಗಳು ಜನರನ್ನು ಕಷ್ಟಕ್ಕೆ ದೂಡುವ ಕಸರತ್ತು

ಸಂಸತ್ತಿನ ನಾಶದ ಯತ್ನ : ಸಂಸದರ ಅಮಾನತಿನ ಅಪಶಕುನ

ಜನತೆಯ ಬದುಕಿಗಾಗಿ ಸಾಂಸ್ಕೃತಿಕ ಮಧ್ಯಪ್ರವೇಶಕ್ಕೆ ಸನ್ನದ್ಧತೆ: ಸಮುದಾಯದ ಯಶಸ್ವಿ ಸಮ್ಮೇಳನ

ಸಂಸತ್ತಿನ ಆವರಣದಲ್ಲಿ ಬಣ್ಣದ ಹೊಗೆ

ಭದ್ರತಾ ವೈಫಲ್ಯದ ಜೊತೆಗೆ ಸಮಾಜದಲ್ಲಿನ ಸಂಕಷ್ಟಗಳ ಕಡೆ ಗಮನ ಸೆಳೆಯುತ್ತದೆ







2023ರ ಡಿಸೆಂಬರ್ 13 ರಂದು ಹೊಸ ಸಂಸತ್ತಿನಲ್ಲಿ ಅಧಿವೇಶನ ನಡೆಯುತ್ತಿರುವಾಗ ಇಬ್ಬರು ಯುವಕರು ಹಠಾತ್ತನೆ ಅದರೊಳಗೆ ಜಿಗಿಯುತ್ತಾರೆ, ಶೂಗಳಲ್ಲಿ ಬಚ್ಚಿಟ್ಟುಕೊಂಡು ತಂದಿದ್ದ ಡಬ್ಬಿಗಳನ್ನು ತೆರೆದು ಹಾನಿಕಾರಕವಲ್ಲದ ಬಣ್ಣದ ಹೊಗೆ ಎರಚಿ, ಆಸನಗಳು ಮತ್ತು ಟೇಬಲ್‌ಗಳ ಮೇಲೆ ನೆಗೆಯುತ್ತಾರೆ. ಈ ಹಠಾತ್ ಘಟನೆಯು ಎಲ್ಲರನ್ನೂ ಅಚ್ಚರಿಗೆ ದೂಡಿತು. ಅವರಲ್ಲಿ ಹೆಚ್ಚಿನವರು ಆ ಯುವಕರನ್ನು ಹೊರದಬ್ಬಲು ನಿರ್ಧರಿಸಿದರು. ಕೆಲವರು ಅವರ ಮೇಲೆ ದಾಳಿ ಮಾಡಿದರು. ಮತ್ತೆ ಕೆಲವರು ಇವೆಲ್ಲವನ್ನೂ ನೋಡುತ್ತಾ ನಿಂತರು. ಸಂಸತ್ತಿನ ಹೊರಗೆ, ಯುವಜನರ ನಿರುದ್ಯೋಗದ ಬಗ್ಗೆ ಘೋಷಣೆಗಳನ್ನು ಕೂಗುತ್ತಿದ್ದ ಮಹಿಳಾ ಪ್ರತಿಭಟನಾಕಾರ್ತಿ ನೀಲಂ ಆಜಾದ್ (37) ಅವರನ್ನು ಭದ್ರತಾ ಸಿಬ್ಬಂದಿ ಎಳೆದೊಯ್ದರು. ಬಿಜೆಪಿಯ ಐಟಿ ವಿಭಾಗದ ಉಸ್ತುವಾರಿ ಅಮಿತ್ ಮಾಳವಿಯಾ, ಭದ್ರತಾ ಉಲ್ಲಂಘನೆಯಲ್ಲಿ ಭಾಗಿಯಾದ ನೀಲಂ ವರ್ಮಾ ಅವರನ್ನು ಕೇವಲ 'ಆಂದೋಲನ ಜೀವಿ' ಎಂದು ಕರೆದರು. 'ಆಂದೋಲನ ಜೀವಿ' ಎಂಬ ಪದವು, ಜನರಲ್ಲಿ ಭಯ ಹುಟ್ಟಿಸಲು ಆಂಕರ್‌ಗಳು, ವರದಿಗಾರರು ಮತ್ತು ಬಿಜೆಪಿ ಪಕ್ಷದ ರಾಷ್ಟ್ರೀಯ ಮಾಧ್ಯಮ ನಿರ್ವಾಹಕರು ಬಳಕೆ ಮಾಡಿಕೊಳ್ಳಲು ಈಗ ಸಹಾಯಕವಾಗಿದೆ.

ಘಟನೆಗೆ ಸಂಬಂಧಿಸಿದಂತೆ ತಕ್ಷಣದ ಪ್ರತಿಕ್ರಿಯೆಗಳು ವಿಭಿನ್ನವಾಗಿದ್ದವು. ಸಂಸದರು ಇದನ್ನು ಗಂಭೀರ ಭದ್ರತಾ ಉಲ್ಲಂಘನೆ ಎಂದು ಕರೆದರು. ಆಡಳಿತ ಪಕ್ಷದವರು ಇದನ್ನು ಕಾಣದ 'ರಾಷ್ಟ್ರದ ಶತ್ರುಗಳಿಂದ' ಆಯೋಜಿಸಲಾಗಿರುವ ಗಂಭೀರವಾದ ಪಿತೂರಿ ಎಂದು ಪರಿಗಣಿಸುವ ಮೂಲಕ ಪ್ರತಿಕ್ರಿಯಿಸಿತು, ಬಹುಶಃ ಇವೆಲ್ಲವೂ ಸಂಪೂರ್ಣವಾಗಿ ಸ್ವಯಂಪ್ರೇರಿತವಾಗಿಲ್ಲ.

ಆಳುವವರು ಮತ್ತು 'ಗೋದಿ ಮಾಧ್ಯಮ'ಗಳು ಎಲ್ಲವನ್ನೂ ವಿಧ್ವಂಸಕರೊಂದಿಗೆ ಸಂಪರ್ಕ ಕಲ್ಪಿಸಲು ಪ್ರಯತ್ನಿಸುತ್ತಿವೆ. ಮಾವೋವಾದಿಗಳು, ನಕ್ಸಲರು ಮತ್ತು ಪ್ರತಿಪಕ್ಷಗಳ ಮೇಲೆ ಆರೋಪ ಹೊರಿಸಲು ಇವು ನೋಡುತ್ತಿವೆ.

ಇನ್ನೂ ಕೆಲವರು ಈ ಘಟನೆಯನ್ನು ಬೇರೆಯದೇ ರೀತಿಯಲ್ಲಿ ನೋಡುತ್ತಾರೆ. "ಅಂತಹ ಕ್ರೋಧವನ್ನು ನಿಭಾಯಿಸಲು ಆಡಳಿತ ಪಕ್ಷವು ಸುಸಜ್ಜಿತವಾಗಿದೆ ಎಂದು ತೋರುತ್ತದೆ. ಇತ್ತೀಚಿನ ದಿನಗಳಲ್ಲಿ ಕ್ರಾಂತಿಕಾರಿಗಳನ್ನು ಶಿಕ್ಷಿಸಲು ಬ್ರಿಟಿಷರು ಬಳಸುತ್ತಿದ್ದ ಹಳೆಯ ಕ್ರಿಮಿನಲ್ ಕಾನೂನುಗಳ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ ಮತ್ತು ಅದನ್ನು ದಾರಾಳವಾಗಿ ಬಳಸಲಾಗುತ್ತಿದೆ. ಸತ್ಯವೇನೆಂದರೆ, ಪ್ರಪಂಚದಾದ್ಯಂತ, ಒಂದು ನಿರ್ದಿಷ್ಟ ರೀತಿಯ ಬಂಡಾಯವು ಯುವಜನರಲ್ಲಿ ಮೊದಲು ಕಾಣಿಸಿಕೊಳ್ಳುತ್ತದೆ ಮತ್ತು ಸಮಯವು ಪಕ್ವವಾಗಿದ್ದರೆ ಶೀಘ್ರದಲ್ಲೇ ಅಲೆಯಾಗಬಹುದು" ಎನ್ನುತ್ತಾರೆ 'ದಿ ವೈರ್' ಮಾಧ್ಯಮದ ಅಂಕಣಕಾರ್ತಿ ಮೃಣಾಲ್ ಪಾಂಡೆ ಅವರು.

ಬಿಗಿ ಭದ್ರತೆಯ ನಡುವೆಯೂ
ಒಳ ನುಸುಳಲು ಅವಕಾಶ ಸಿಕ್ಕಿದ್ದು ಹೇಗೆ?

22 ವರ್ಷಗಳ ಹಿಂದೆ ಸಂಸತ್ತಿನ ಮೇಲೆ ದಾಳಿ ನಡೆದಾಗ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದರು ಮತ್ತು ಎಲ್. ಕೆ. ಅಡ್ವಾಣಿ ಗೃಹ ಸಚಿವರಾಗಿದ್ದರು. ಈ ಭಯೋತ್ಪಾದಕ ದಾಳಿಯ ವಾರ್ಷಿಕೋತ್ಸವ ದಿನದ ಸಂದರ್ಭದಲ್ಲಿ ದಾಳಿ ನಡೆಸಲಾಗುವುದು ಎಂದು ಖಲಿಸ್ತಾನಿ ಭಯೋತ್ಪಾದಕ ಗುರುಪತ್‌ವಂತ್‌ಸಿಂಗ್ ಪನ್ನು ಇತ್ತೀಚೆಗೆ ಎಚ್ಚರಿಕೆ ನೀಡಿದ್ದ. ಈ ಹಿನ್ನಲೆಯಲ್ಲಿ ಸಂಸತ್ತಿಗೆ ಬಾರೀ ಭದ್ರತೆ ಒದಗಿಸಲಾಗಿತ್ತು. ಒಳ ಪ್ರವೇಶಿಸುವ ಪ್ರತಿಯೊಬ್ಬರನ್ನು ನಾಲ್ಕೈದು ಬಾರಿ ತಪಾಷಣೆ ಮಾಡಲಾಗುತ್ತಿತ್ತು. ಇಷ್ಟೆಲ್ಲಾ ಭದ್ರತೆ ಇದ್ದಾಗಲೂ ಮೋದಿ ಮತ್ತು ಅಮಿತ್ ಶಾ ನೇತೃತ್ವದ ಸರ್ಕಾರದ ಅವಧಿಯಲ್ಲಿ ಇಂತಹ ಘಟನೆ ನಡೆದಿದೆ. ಅದೂ ಕೂಡ ಆಡಳಿತ ಪಕ್ಷದ ಬಿಜೆಪಿ ಸಂಸದ ಪ್ರತಾಪ್ ಸಿಂಹ ಅವರಿಂದ ಎರಡು ಪ್ರವೇಶ ಪತ್ರ ಪಡೆದು!!

ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣೆಯ ಬಗ್ಗೆ ಮಾತನಾಡುವ ಬಿಜೆಪಿಯ ಉನ್ನತ ನಾಯಕರು ಈ ವಿಷಯದಲ್ಲಿ ನಿಗೂಢ ಮೌನವನ್ನು ತಾಳಿದ್ದಾರೆ. ಪ್ರಧಾನಿ ಪ್ರತಿಕ್ರಿಯೆ ನೀಡಲಿಲ್ಲ. ಗೃಹ ಸಚಿವರು ಸದನದಲ್ಲಿ ಸಮಗ್ರ ಹೇಳಿಕೆ ನೀಡಿಲ್ಲ. ಸಾಗರ್ ಶರ್ಮಾ, ಮೈಸೂರು–ಕೊಡಗು ಬಿಜೆಪಿ ಸಂಸದ ಪ್ರತಾಪಸಿಂಹ ಅವರ ಶಿಫಾರಸಿನ ಮೇರೆಗೆ ಒಳಗೆ ಬಂದಿದ್ದಕ್ಕೆ ಆಡಳಿತ ಪಕ್ಷ ಜವಾಬ್ದಾರಿ ವಹಿಸಿಲ್ಲ. ಆ ಸಂಸದ ಅಸಲಿಗೆ ಸಾಗರ್ ಶರ್ಮಾ ಅವರ ಪ್ರತಿಯೊಂದು ನಡೆಯನ್ನೂ ಏಕೆ ಅನುಮತಿಸಿದರು? ಭದ್ರತಾ ಸಿಬ್ಬಂದಿಗೆ ಅವರನ್ನು ತಡೆಯಲು ಏಕೆ ಸಾಧ್ಯವಾಗಲಿಲ್ಲ? ಆ ಸಮಯದಲ್ಲಿ ಗಲಭೆಗೆ ಹೊರಗೆ ಏಕೆ ಅವಕಾಶ ನೀಡಲಾಯಿತು? ಇವುಗಳಲ್ಲಿ ಯಾವುದಕ್ಕೂ ಉತ್ತರವಿಲ್ಲ. ಬಂಧಿತರು ನಿರುದ್ಯೋಗದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದರು ಮತ್ತು ಸರ್ವಾಧಿಕಾರದ ಅಂತ್ಯಕ್ಕಾಗಿ ಘೋಷಣೆಗಳನ್ನು ಕೂಗುತ್ತಿದ್ದರು ಎಂದು ವರದಿಗಳಿವೆ. ಅವರೆಲ್ಲ ಒಂದಾದರೆ ಇಷ್ಟು ಸುಲಭವಾಗಿ ಅವಕಾಶ ಸಿಕ್ಕಿದ್ದು ಹೇಗೆ? ಇದನ್ನು ಪಾರದರ್ಶಕವಾಗಿ ಬಗೆಹರಿಸದೆ ಈಗ ಕಾಂಗ್ರೆಸ್–ಕಮ್ಯುನಿಸ್ಟ್ ಮೈತ್ರಿಕೂಟಕ್ಕೆ ಸೇರಿದವರು ಎಂಬ ಹಾಡನ್ನು ಹಾಡುತ್ತಿದ್ದಾರೆ. ಬಿಜೆಪಿ ಸಂಸದರೇ ಅವರನ್ನು ಕಳುಹಿಸಿದ್ದರೆ ಬೇರೆ ಪಕ್ಷಗಳನ್ನು ದೂಷಿಸುವುದು ಹೇಗೆ? ಹೇಗಾದರೂ ಮಾಡಿ ಸರಕಾರ ಮತ್ತು ಭದ್ರತಾ ಇಲಾಖೆ ರಕ್ಷಣೆ ನೀಡಬೇಕಲ್ಲವೇ? ಸಂಸತ್ತಿನಲ್ಲಿ ಇಂತಹ ಅನಾಹುತದ ಹೊಣೆಗಾರಿಕೆಯನ್ನು ತೆಗೆದುಕೊಳ್ಳದ ಗೃಹ ಸಚಿವರು ಟಿವಿ ಚರ್ಚೆಗಳಲ್ಲಿ ಪ್ರತಿಪಕ್ಷಗಳನ್ನು ದೂಷಿಸಿದರು. ಇದನ್ನು ಗಂಭೀರ ಭದ್ರತಾ ಉಲ್ಲಂಘನೆ ಎಂದು ಪರಿಗಣಿಸಬೇಕಾದ ಸ್ಪೀಕರ್ ಓಂ ಬಿರ್ಲಾ, ಎಲ್ಲವನ್ನೂ ನಾನೇ ಮಾಡುತ್ತೇನೆ ಎಂದು ಬಿಂಬಿಸುತ್ತಿದ್ದಾರೆ. ಇವೆಲ್ಲವೂ ಬಿಜೆಪಿಯ ಮಹಾ ತಂತ್ರದ ಭಾಗವಾಗಿ ಕಂಡರೆ ಅದು ತಪ್ಪೇನಲ್ಲ. ರೈತ ಚಳವಳಿಯ ಸಂದರ್ಭದಲ್ಲೂ ಪಂಜಾಬಿ ನಟನೊಬ್ಬ ಕೆಂಪು ಕೋಟೆಯ ಮೇಲೆ ಏನೋ ಮಾಡಿದ ಆರೋಪ ಕೇಳಿಬಂದಿದ್ದು, ಆತನಿಗೆ ಏಕೆ ಅವಕಾಶ ನೀಡಲಾಯಿತು ಎಂಬುದಕ್ಕೆ ಉತ್ತರವಿಲ್ಲ. ಈಗ ಲೋಕಸಭೆ ಚುನಾವಣೆ ಕೂಡ ಫೆಬ್ರವರಿಯಲ್ಲಿ ಸ್ವಲ್ಪ ಮುಂಚಿತವಾಗಿ ನಡೆಯಬೇಕೆಂದು ಬಯಸಿದೆ ಮತ್ತು ಅದಕ್ಕೂ ಮೊದಲು, ಚುನಾವಣಾ ಆಯೋಗದ ನೇಮಕಾತಿ ತತ್ವಗಳ ಸಾಂವಿಧಾನಿಕ ತಿದ್ದುಪಡಿಯನ್ನು ರಾಜಕೀಯ ಉದ್ದೇಶದಿಂದ ಮಾಡಲಾಗುತ್ತದೆ.

ಎಲ್ಲರೂ ನಿರುದ್ಯೋಗಿಗಳು

ಆರು ಮಂದಿಯಲ್ಲಿ ಸಾಗರ್ ಶರ್ಮಾ ಮತ್ತು ಮನೋರಂಜನ್ ಡಿ ಎಂಬಿಬ್ಬರು ಸಂಸತ್ತಿನ ಆವರಣವನ್ನು ಪ್ರವೇಶಿಸಿದರು. ನೀಲಂ ಆಜಾದ್ ಮತ್ತು ಅಮೋಲ್ ಶಿಂಧೆ ಅವರು ಸಂಸತ್ತಿನ ಹೊರಗೆ ಘೋಷಣೆಗಳನ್ನು ಕೂಗುತ್ತಿದ್ದರು. ಅವರ ಸಹಚರರಾದ ಇನ್ನಿಬ್ಬರು ಲಲಿತ್ ಝಾ ಮತ್ತು ವಿಕ್ಕಿ ಶರ್ಮಾ. ಇವರೆಲ್ಲರೂ ಭಾರತದ ಬೇರೆ ಬೇರೆ ಪ್ರದೇಶಗಳಿಗೆ ಸೇರಿದವರು. ಸಾಮಾನ್ಯ ಕುಟುಂಬಗಳಿಗೆ ಸೇರಿದ ಇವರು ವಿದ್ಯಾವಂತರು. ಹಲವಾರು ಪ್ರಯತ್ನಗಳ ಹೊರತಾಗಿಯೂ ಉದ್ಯೋಗವಿಲ್ಲದೆ ನಿರಾಶೆಗೊಂಡವರು.

ಮೈಸೂರಿನ ಮನೋರಂಜನ್ ಡಿ (33) ಎಂಜಿನಿಯರಿಂಗ್ ಪದವೀಧರರಾಗಿದ್ದು, ಐಟಿ ಸಂಸ್ಥೆಯಲ್ಲಿ ಕೆಲಸ ಕಳೆದುಕೊಂಡು ಈಗ ತಮ್ಮ ತಂದೆಗೆ ಕೃಷಿಯಲ್ಲಿ ಸಹಾಯ ಮಾಡುತ್ತಿದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿಯೊಂದು ಉಲ್ಲೇಖಿಸಿದೆ. ಬಡಗಿಯೊಬ್ಬರ ಮಗ ಸಾಗರ್ ಶರ್ಮಾ (25) ಆರ್ಥಿಕ ಮುಗ್ಗಟ್ಟಿನಿಂದ 12 ನೇ ತರಗತಿಯ ನಂತರ ತನ್ನ ಅಧ್ಯಯನವನ್ನು ನಿಲ್ಲಿಸಿದ ನಂತರ ಬಾಡಿಗೆಗೆ ಆಟೋರಿಕ್ಷಾ ಓಡಿಸಿದರೆ, ಮಹಾರಾಷ್ಟ್ರದ ಲಾತೂರ್‌ನ ಅಮೋಲ್ ಶಿಂಧೆ (25) ಸೇನೆಯಲ್ಲಿ ಕೆಲಸ ಪಡೆಯುವ, ಈಗ ಅಗ್ನಿವೀರ್ ಯೋಜನೆಯಡಿ ಸೇರುವ ಅನೇಕ ಪ್ರಯತ್ನಗಳಲ್ಲಿ ವಿಫಲರಾಗಿದ್ದರು. ಹರಿಯಾಣದ ಜಿಂದ್‌ನ ಆಜಾದ್ (37) ಅವರು ಹೆಚ್ಚಿನ ಪದವಿಗಳನ್ನು ಹೊಂದಿದ್ದಾರೆ. ಎಂ.ಎ., ಎಂ.ಎಡ್. ಎಂ.ಫಿಲ್. ಮತ್ತು ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಸಹ

ಪುಟ 4 ಕ್ಕೆ

ಸಂಘಪರಿವಾರ ಮತ್ತು ಬಾಂಬ್ ಸ್ಫೋಟಗಳು

ಭಾರತದ ರಾಜಕೀಯದ ಮಟ್ಟಿಗೆ ಹೇಳುವುದಾದರೆ, ಬಿಜೆಪಿ ಪಕ್ಷದವರು ಮತ್ತು ಆರೆಸ್ಸೆಸ್ ಕಾರ್ಯಕರ್ತರು ಬಾಂಬ್ ಸಿಡಿಸುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಮೊದಲಿಗೆ, ಮಹಾತ್ಮ ಗಾಂಧೀಜಿಗೆ ಗುಂಡು ಹಾರಿಸಿದ್ದು ಇಸ್ಮಾಯಿಲ್ ಎಂದು ಸುಳ್ಳು ಸುದ್ದಿ ಹರಡಿ, ಕೊಲೆಯ ಆರೋಪವನ್ನು ಮುಸಲ್ಮಾನರ ಮೇಲೆ ಹೊರಿಸುವ ಪ್ರಯತ್ನ ಮಾಡಿದ್ದರು. ನಂತರ ಗೋಡ್ಸೆ ಎಂಬ ಸತ್ಯ ಹೊರಬಿತ್ತು. ಗೋಡ್ಸೆ ಸಂಘ ಪರಿವಾರದ ಸಂಘಟನೆಗೆ ಸೇರಿದವರು ಎಂಬುದೂ ಗೊತ್ತಿರುವ ಸಂಗತಿ. ಈಗ ಅವರು ಗೋಡ್ಸೆಯ ಪ್ರತಿಮೆ ಸ್ಥಾಪನೆ ಮಾಡಿ ದೇವಸ್ಥಾನ ಕಟ್ಟಲು ಹೊರಟಿದ್ದಾರೆ.

2013 ರಲ್ಲಿ ಎನ್.ಐ.ಎ. ಸೆಪ್ಟೆಂಬರ್ 2006 ರ ಮಾಲೆಗಾಂವ್ ಸ್ಫೋಟದ ಘಟನೆಯ ಬಗ್ಗೆ ಕೆಳಗಿನ ವಿವರಗಳನ್ನು ವರದಿ ಮಾಡಿದೆ. ಬಲಪಂಥೀಯ ಸಂಘಟನೆ 'ಅಭಿನವ್ ಭಾರತ್'ಗೆ ಸೇರಿದ ಲೋಕೇಶ್ ಶರ್ಮಾ, ಧನ್‌ಸಿಂಗ್, ಮನೋಹರ್ ಸಿಂಗ್ ಮತ್ತು ರಾಜೇಂದ್ರ ಚೌಧರಿ ಅವರನ್ನೂ ಬಂಧಿಸಲಾಗಿದೆ ಎಂದು ಅದು ಹೇಳಿದೆ.

2008ರಲ್ಲಿ ಇದೇ ಮಾಲೆಗಾಂವ್‌ನಲ್ಲಿ ನಡೆದ ಘಟನೆಯಲ್ಲಿ 10ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದರು. ಇದಕ್ಕೆ ಸಂಬಂಧಿಸಿದಂತೆ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ಅವರನ್ನು ಬಂಧಿಸಲಾಗಿತ್ತು. ಅನಾರೋಗ್ಯದ ಕಾರಣ ಅವರಿಗೆ 2017 ರಲ್ಲಿ ಜಾಮೀನು ನೀಡಲಾಗಿತ್ತು. ಅವರು 2019 ರಿಂದ ಸಂಸತ್ ಸದಸ್ಯರಾಗಿದ್ದಾರೆ. ಗಾಂಧೀಜಿಗೆ ಗುಂಡು ಹಾರಿಸಿದ ಗೋಡ್ಸೆ ತಾನೊಬ್ಬ ಮಹಾನ್ ದೇಶಭಕ್ತ ಎಂದು ಹೇಳಿಕೊಂಡಿದ್ದ. ಈ ಬಗೆಗೆ ತೀವ್ರ ಟೀಕೆಗಳನ್ನು ಎದುರಿಸಬೇಕಾಯಿತು. ಪ್ರಜ್ಞಾ ಸಿಂಗ್ ಈಗಲೂ ಮಧ್ಯಪ್ರದೇಶದಲ್ಲಿ ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಹಲವು ಭಾಷಣಗಳನ್ನು ಮಾಡುತ್ತಿದ್ದಾರೆ.

ಸಂಪಾದಕೀಯ

ಜಾತಿ ಗಣತಿ ಸ್ವೀಕಾರಕ್ಕೆ ಸರ್ಕಾರ ಬದ್ಧವಾಗಲಿ

ಜಾತಿ ಒಂದು ವಾಸ್ತವ. ಅದೊಂದು ಸಾಮಾಜಿಕ ವಾಸ್ತವ. ಅದರ ವಾಸ್ಥವಿಕ ಅಸ್ಥಿತ್ವವನ್ನು ನಿರಾಕರಿಸುವುದು ಸರಿಯಲ್ಲ. ಜಾತಿ ಆಧಾರಿತ ಅಸಮಾನತೆಯನ್ನು ಹೋಗಲಾಡಿಸಬೇಕಾದರೆ ಅದರ ಅಸ್ಥಿತ್ವವನ್ನು ಒಪ್ಪಿಕೊಂಡು ಅದರ ವಸ್ತುನಿಷ್ಟ ಸ್ವರೂಪವನ್ನು ಒಪ್ಪಿಕೊಂಡಾಗ ಮಾತ್ರ ಅದರ ವಿರುದ್ಧ ಹೋರಾಡುವುದು ಒಂದು ಸಾಮಾಜಿಕ ಗುರಿಯಾಗುತ್ತದೆ.

ಜಾತಿ ಗಣತಿಯಿಂದ ಅದರ ವಿಸ್ತಾರವನ್ನು ಅರಿಯಲು ಸಾಧ್ಯ. ಆದರೆ ಅದರ ಸಮೀಕ್ಷೆ ವೈಜ್ಞಾನಿಕವಾಗಿ ನಡೆಯಬೇಕು. ಆದರೆ ಜಾತಿ ಗಣತಿ ಬೇಡ ಎನ್ನುವುದು ಸರಿಯಲ್ಲ. ಪ್ರತಿಯೊಂದು ಜಾತಿ ಸಮುದಾಯಗಳ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ತಿಳಿಯಲು ಮತ್ತು ಸಂವಿಧಾನದ ಆಶಯಗಳನ್ನು ಎಲ್ಲ ಸಮುದಾಯಗಳಿಗೂ ತಲುಪಿಸಲು ಸರ್ಕಾರ ಜಾತಿ ಗಣತಿಯನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಕಾಂತರಾಜು ವರದಿಯನ್ನು ಸ್ವೀಕಾರ ಮಾಡಲು ಸರ್ಕಾರ ಸಿದ್ಧವಿದೆ ಎಂದು ಹೇಳಲಾಗಿದೆ. ಕಾಂತರಾಜು ವರದಿಯಲ್ಲಿ ಏನಿದೆ ಎಂಬುದನ್ನು ಅಧ್ಯಯನ ಮಾಡುವುದು ಅಗತ್ಯವಿದೆ. ಮೇಲ್ಜಾತಿ ಸಮೂಹಗಳು ಕಾಂತರಾಜು ವರದಿಯನ್ನು ಇಡಿಯಾಗಿ ವಿರೋಧಿಸುತ್ತಿರುವುದು ಸಹ ಆಕ್ಷೇಪಾರ್ಹವಾಗಿದೆ. ವರದಿಯಲ್ಲಿ ಏನಿದೆ ಎಂಬುದನ್ನು ತಿಳಿಯದೆ ಅದನ್ನು ವಿರೋಧಿಸುವುದಾಗಲಿ, ಬೆಂಬಲಿಸುವುದಾಗಲಿ ಸರಿಯಾಗಲಾರದು, ತುಳಿತಕ್ಕೆ ಒಳಗಾದ, ಸಾಮಾಜಿಕವಾಗಿ ಹಿಂದುಳಿದ ಜನ ಸಂಖ್ಯೆಯನ್ನು ವೈಜ್ಞಾನಿಕವಾಗಿ ತಿಳಿಯುವುದು ಆ ಸಮೂಹಗಳನ್ನು ಮುಂದಾಗಿಸಲು ಜಾತಿ ಗಣತಿ ಅಂಕಿ ಸಂಖ್ಯೆಗಳು ತುಂಬಾ ಪ್ರಯೋಜನಕಾರಿ ಆಗಲಿದೆ.

ಜಾತಿ ಸಮೀಕ್ಷೆ ವೈಜ್ಞಾನಿಕವಾಗಿ, ಹಾಗೂ ವ್ಯವಸ್ಥಿತವಾಗಿ ನಡೆಯಬೇಕು. ಎಲ್ಲ ಸಮುದಾಯಗಳು ಅವರ ಜನಸಂಖ್ಯೆಗೆ ಅನುಗುಣವಾಗಿ ತಮ್ಮ ಹಕ್ಕನ್ನು ಪಡೆಯಬೇಕು. ಅಲ್ಪಸಂಖ್ಯಾತರು, ಪರಿಶಿಷ್ಟರು ಸೇರಿದಂತೆ ಎಲ್ಲರೂ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ತಡೆಯುವುದು ಅವರ ಹಕ್ಕು.

ಈಗಾಗಲೇ ರಾಜ್ಯ ಸರ್ಕಾರ 168 ಕೋಟಿ ರೂ. ಖರ್ಚು ಮಾಡಿದೆ ಎಂದು ವರದಿಯಾಗಿದೆ. ವರದಿಯ ಕುರಿತು ಸಾರ್ವಜನಿಕ ಚರ್ಚೆಯಾಗಬೇಕು. ಇದರ ಸಾಧಕ ಬಾಧಕಗಳ ಕುರಿತು ಪರಿಶೀಲನೆಯಾಗಬೇಕು.

ಜಾತಿ ಗಣತಿಯ ಕೆಲವು ದಾಖಲೆಗಳೂ ಕಾಣೆಯಾಗಿರುವ ಬಗ್ಗೆ ವರದಿಗಳಿವೆ. ಈ ಕುರಿತು ಸಹ ವಿವರವಾದ ತನಿಖೆಯಾಗಬೇಕು. ಹಿಂದುಳಿದ ಜಾತಿ ಸಮೂಹಗಳ ಹಿತ ದೃಷ್ಟಿಯಿಂದ ಕಾಂತರಾಜು ವರದಿಯನ್ನು ಸರ್ಕಾರ ಅಂಗೀಕರಿಸುವುದು ಸೂಕ್ತವಾಗಿದೆ. ಆದರೆ ವರದಿ ಜಾರಿಯಾಗಬಾರದೆಂದು ಮುಂದುವರೆದ ಜಾತಿ ಸಮೂಹಗಳ ಪರವಾಗಿ ವಾದಿಸುವುದು ಸರಿಯಲ್ಲ. ವರದಿಯ ಪರಿಣಾಮದ ಬಗ್ಗೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯಬಹುದು. ಕೆಲವರ ವಿರೋಧದ ಕಾರಣಕ್ಕಾಗಿ ಹಿಂದುಳಿದ ಸಮೂಹಗಳ ಹಿತ ಸಾಧನೆಗೆ ಪೂರಕವಾದ ವರದಿಯನ್ನು ಇಡಿಯಾಗಿ ಕೈಬಿಡುವುದು ಸೂಕ್ತವಲ್ಲ.

ಜಾತಿ ಗಣತಿಯ ಎಂಟು ವರ್ಷಗಳಷ್ಟು ಹಳೆಯದಾಗಿದೆ. ಕಾಂತರಾಜು ಆಯೋಗದ ವರದಿ ಶೈಕ್ಷಣಿಕ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಹಿಂದುಳಿಯುವಿಕೆಯನ್ನು ಆದರಿಸಿದ್ದು ಆಗಿರುತ್ತದೆ. ಒಳಪಂಗಡಗಳ ವೈಜ್ಞಾನಿಕ ಹಿಂದುಳಿದಿರುವಿಕೆಯನ್ನು ಅವಲಂಭಿಸಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರೆದ ಸಮುದಾಯಗಳು ಪರಿಸ್ಥಿತಿಯ ಲಾಭ ಪಡೆಯುವ ದುರುದ್ದೇಶ ಇರಬಾರದು. ಹಿಂದುಳಿದವರ ಪಟ್ಟಿಗೆ ಸೇರಿಕೊಳುವ ದುರುದ್ದೇಶ ಇರಬಾರದು. ಒಳಪಂಗಡಗಳನ್ನು ಹಾಗೆ ಗುರುತಿಸುವುದು ವೈಜ್ಞಾನಿಕವಾಗುವುದಿಲ್ಲ, ಹಿಂದುಳಿದಿರುವಿಕೆಯ ಆಧಾರದ ಮೇಲೆ ವೈಜ್ಞಾನನಿಕ ಜಾತಿಗಣತಿ ಆಗಬೇಕು. ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರೆದ ಸಮುದಾಯಗಳನ್ನು ಜಾತಿ ಗಣತಿ ಸಂದರ್ಭದಲ್ಲಿ ಹಿಂದುಳಿದವರ ಪಟ್ಟಿಗೆ ಸೇರ್ಪಡೆ ಮಾಡುವ ಪ್ರಯತ್ನ ಸಲ್ಲದು. ●

ಸೌಹಾರ್ದತೆಗೆ ಭಂಗ ಉಂಟು ಮಾಡುವ ಪ್ರಚೋದನಾಕಾರಿ ಹೇಳಿಕೆ: ಕಲ್ಲಡ್ಕ ಪ್ರಭಾಕರ ಭಟ್ ಬಂಧನಕ್ಕೆ ಸಿಪಿಐ(ಎಂ) ಆಗ್ರಹ

ಕಳೆದೆರಡು ದಿನಗಳ ಹಿಂದೆ ಶ್ರೀರಂಗ ಪಟ್ಟಣದಲ್ಲಿ ಒಂದು ಸಮಾವೇಶವನ್ನುದ್ದೇಶಿಸಿ ಮುಸ್ಲಿಂ ಮಹಿಳೆಯರನ್ನು ಅವಹೇಳನಕಾರಿಯಾಗಿ ನಿಂದಿಸಿ ಕೋಮು ಪ್ರಚೋದಕ ಹೇಳಿಕೆ ನೀಡಿರುವ ಬಿಜೆಪಿ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ರನ್ನು ಈ ಕೂಡಲೇ ಬಂಧಿಸಿ ಅವರ ಮೇಲೆ ಕಾನೂನಿನ ಕ್ರಮ ಕೈಗೊಳ್ಳುವಂತೆ ಸಿಪಿಐ(ಎಂ) ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ. ಈ ಹೇಳಿಕೆ ಅವರ ಕೀಳುತನದ ಮಟ್ಟವನ್ನು ತೋರ್ಪಡಿಸುತ್ತದೆ ಎಂದು ಖಂಡಿಸಿದೆ.

ಇದು ದಕ್ಷಿಣ ಕರ್ನಾಟಕದ ಮತ್ತು ಮೈಸೂರು ಭಾಗದಲ್ಲಿನ ಶಾಂತಿಯ ವಾತಾವರಣವನ್ನು ಕದಡಲು ವಹಿಸುತ್ತಿರುವ ಕೋಮುವಾದಿಗಳ ಸಂಚಿನ ಮುಂದುವರಿಕೆಯ ಭಾಗವಾಗಿದೆ ಎಂಬುದನ್ನು ಎಲ್ಲ ಪ್ರಗತಿಪರರು ಹಾಗೂ ಪ್ರಜಾಪ್ರಭುತ್ವವಾದಿಗಳು ಗಮನಿಸಬೇಕೆಂದು ಸಿಪಿಐ(ಎಂ) ಹೇಳಿದೆ.

ರಾಜ್ಯ ಸರಕಾರ ರಾಜ್ಯದ ಸೌಹಾರ್ಧತೆಗೆ ಗಂಭೀರ ಧಕ್ಕೆ ತರುತ್ತಿರುವ ಮತ್ತು ಅಲ್ಪ ಸಂಖ್ಯಾತರನ್ನು ಅವಾಚ್ಯವಾಗಿ ನಿಂದಿಸುತ್ತಿರುವ ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸದಿರುವುದು ನಾಚಿಕೆಗೇಡು! ಎಂದು ತೀವ್ರವಾಗಿ ಖಂಡಿಸಿದೆ. ಸರಕಾರದ ದಿವ್ಯ ಮೌನವು ಇಂತಹ ಅವಹೇಳನಕಾರಿ ಹಾಗು ಪ್ರಚೋದನಕಾರಿ ಹೇಳಿಕೆಗಳಿಗೆ ಸಂಬಂದಿಸಿ ಅದರ ಸಮ್ಮತಿಯಂತೆ ಕಂಡು ಬರುತ್ತಿದೆ ಎಂದು ಸಿಪಿಐ(ಎಂ) ರಾಜ್ಯ ಸರಕಾರದ ಜವಾಬ್ದಾರಿರಹಿತ ನಡೆಯನ್ನು ಕಟುವಾಗಿ ಟೀಕಿಸಿದೆ.

ಇಂತಹ ಪ್ರಕರಣಗಳಲ್ಲಿ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸುವ ಎದೆಗಾರಿಕೆಯನ್ನು ತೋರಬೇಕೆಂದು ಮತ್ತು ಯಾರಾದರೂ ದೂರು ದಾಖಲಿಸಲಿ ಎಂದು ಕಾಯುತ್ತಾ ಕುಳಿತುಕೊಳ್ಳುವ ಜನವಿರೋದಿ ನೀತಿಯನ್ನು ರಾಜ್ಯ ಸರಕಾರ ಈ ಕೂಡಲೆ ಕೈ ಬಿಡಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕಲ್ಲಡ್ಕ ಪ್ರಭಾಕರ್ ಭಟ್ ಮೇಲೆ

ಸ್ವಯಂ ಪ್ರೇರಿತ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲು ಜನವಾದಿ ಮಹಿಳಾ ಸಂಘಟನೆ ಒತ್ತಾಯ

ಮುಸ್ಲಿಂ ಮಹಿಳೆಯರು ದಿನಕೊಬ್ಬ ಗಂಡನ ಜೊತೆ ಇರುತ್ತಿದ್ದರು. ಅವರಿಗೆ ಪರ್ಮನೆಂಟ್ ಗಂಡನ ಕೊಟ್ಟಿದ್ದು ಮೋದಿ ಎಂದು ಕಲ್ಲಡ್ಕ ಪ್ರಭಾಕರ್ ಭಟ್ ಮಂಡ್ಯದಲ್ಲಿ ನಡೆದ ಹನುಮ ಸಂಕೀರ್ತನ ಕಾರ್ಯಕ್ರಮದಲ್ಲಿ ಹೇಳಿರುವುದು ಮಾಧ್ಯಮಗಳಲ್ಲಿ ಬಿತ್ತರಗೊಂಡಿವೆ.

ಕಲ್ಲಡ್ಕ ಪ್ರಭಾಕರ್ ಭಟ್ ಆಡಿದ ಈ ಮಾತುಗಳನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ತೀವ್ರವಾಗಿ ಖಂಡಿಸಿದೆ. ಮತ್ತು ತಕ್ಷಣವೇ ಸ್ವಯಂ ಪ್ರೇರಿತ ದೂರು ದಾಖಲಿಸಿ ಆತನನ್ನು ಬಂಧಿಸಬೇಕೆಂದು ಒತ್ತಾಯಿಸಿದೆ.

ಮಹಿಳೆಯರ ಬಗ್ಗೆ ಕೀಳಾಗಿ ಮತ್ತು ಅವಹೇಳನಕಾರಿಯಾಗಿ ಮಾತನಾಡುವುದು, ಅವರನ್ನು ಎರಡನೇ ದರ್ಜೆ ಪ್ರಜೆಗಳಾಗಿ ಕಾಣುವುದು ಆರ್.ಎಸ್.ಎಸ್. ನ ಮನಃಸ್ಥಿತಿ. ಈ ಮನಃಸ್ಥಿತಿಯ ಭಾಗವಾಗಿಯೇ ಕಲ್ಲಡ್ಕ ಪ್ರಭಾಕರ್ ಭಟ್ ಈ ರೀತಿಯ ಅವಹೇಳನಕಾರಿ ಹೇಳಿಕೆ ನೀಡಿ ಮಹಿಳೆಯರಿಗೆ ಅಪಮಾನ ಮಾಡಿದ್ದಾರೆ.

ಆದ್ದರಿಂದ ಕಲ್ಲಡ್ಕ ಪ್ರಭಾಕರ್ ಭಟ್ ಮೇಲೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಬೇಕೆಂದು ಜನವಾದಿ ಮಹಿಳಾ ಸಂಘಟನೆ ಒತ್ತಾಯ ಮಾಡಿದೆ.

ಕಲ್ಲಡ್ಕ ಪ್ರಭಾಕರ ಭಟ್ ಹೇಳಿಕೆಯು ಆರ್.ಎಸ್.ಎಸ್. ನ ಅಂತರಂಗದ ಭಾಗವಾಗಿದೆ.

ಸ್ತ್ರೀಯರು ಪೂಜ್ಯನೀಯರು ಎಂದು ಬೊಗಳೆ ಕೊಚ್ಚುತ್ತಲೆ ಮುಸ್ಲಿಮರು ಎಂದಾಕ್ಷಣ ಅಪಮಾನಿಸುಬಹುದೇ? ಇದೇನಾ ಇವರ ಪವಿತ್ರ ಸಂಸ್ಕೃತಿ? ಪ್ರಭಾಕರ್ ಭಟ್ ಈ ಹೇಳಿಕೆ ಅವರ ಕೀಳು ಸಂಸ್ಕೃತಿಯ ಪ್ರತೀಕವೆ ಆಗಿದೆ.

ಇವರು ಮಹಿಳೆಯರ ಬಗ್ಗೆ ಹೊಂದಿರುವ ಮನಸ್ಥಿತಿಗೆ ಈ ಮಾತು ಸಾಕ್ಷಿಯಾಗಿದೆ.

ಮಂಡ್ಯದ ಶ್ರೀರಂಗ ಪಟ್ಟಣದಲ್ಲಿ ನಡೆದ ಹನುಮ ಸಂಕೀರ್ತನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅನಗತ್ಯವಾಗಿ ಮುಸ್ಕಾನ್ ಎಂಬ ಯುವತಿಯನ್ನ ಆಲ್ ಖೈದ ಸಂಘಟನೆ ಜೊತೆ ಸಂಬಂಧ ಕಲ್ಪಿಸಿ ಅವಹೇಳನ ಮಾಡಿರುವುದು ಹಾಗೂ ಕಾಲೇಜಿಗೆ ಹೋಗದ ಹಾಗೇ ತಡೆಯುತ್ತೇವೆಂದು ಬೆದರಿಕೆ ಹಾಕಿರುವುದು ಎಷ್ಟು ಸರಿ ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ನಡೆಸಿದಾಗ, ಮಹಿಳಾ ಕ್ರೀಡಾಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದವರನ್ನು ರಕ್ಷಿಸುವ ಮೋದಿ ಸರ್ಕಾರ, ಮರ್ಯಾದ ಪುರುಷೋತ್ತಮ ಶ್ರೀರಾಮ ದೇವಸ್ಥಾನ ಉದ್ಘಾಟಿಸಲು ಹೊರಟಿದೆ. ಮಹಿಳೆ ಎಂದರೆ ಮಾತೆ ಎನ್ನುವ ದೇಶದಲ್ಲಿ ಮಹಿಳೆಯನ್ನು ಎರಡನೆಯ ದರ್ಜೆಯ ಪ್ರಜೆಯಾಗಿ ಕಾಣುವುದು ಅವಳ ಆಯ್ಕೆಯ, ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕೆ ದಕ್ಕೆ ತರುವುದು ಆರ್.ಎಸ್.ಎಸ್. ನ ನೀತಿಯಾಗಿದೆ.

ಮಂಡ್ಯದಂತಹ ಸೌಹಾರ್ದ ನೆಲದಲ್ಲಿ ಸೌಹಾರ್ದತೆಗೆ ಬೆಂಕಿ ಹಚ್ಚುವುದನ್ನು ನಾವು ವಿರೋಧಿಸುತ್ತೇವೆ. ಕೋಮು ವಿಷ ಬೀಜ ಬಿತ್ತವುದು ಸಂವಿಧಾನ ವಿರೋಧೀ ನಡೆಯಾಗಿದೆ. ಇಂತಹ ಮಾನವ ವಿರೋಧಿ, ಸೌಹಾರ್ದತೆಗೆ ಧಕ್ಕೆ ತಂದು ಅಶಾಂತಿ ಉಂಟುಮಾಡುವ ಕಲ್ಲಡ್ಕ ಪ್ರಭಾಕರ್ ಭಟ್ಟನ ಮೇಲೆ ಪ್ರಕರಣ ದಾಖಲಿಸಿ ಆತನನ್ನು ಬಂಧಿಸಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಒತ್ತಾಯಿಸಿದೆ.

ಭದ್ರತಾ ವೈಫಲ್ಯದ ಜೊತೆಗೆ ಸಮಾಜದಲ್ಲಿನ ಸಂಕಷ್ಟಗಳ ಕಡೆ.......

ಪುಟ 2 ರಿಂದ

ಉತ್ತೀರ್ಣರಾಗಿದ್ದಾರೆ – ಆದರೆ ಶಿಕ್ಷಕ ಹುದ್ದೆಯನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಇತರ ಇಬ್ಬರು ಸಹವರ್ತಿಗಳು ಕೂಡ ಇದೇ ರೀತಿಯ ಹಿನ್ನೆಲೆಯನ್ನು ಹೊಂದಿದ್ದಾರೆ.

ವರದಿಗಳ ಪ್ರಕಾರ ಇದು ಹಠಾತ್ ಆಗಿ ನಡೆಸಿದ ದಾಳಿಯಲ್ಲ. ಒಂದು ವರ್ಷದ ಹಿಂದೆ ಮೈಸೂರಿನಲ್ಲಿ ಇವರು ಭೇಟಿಯಾಗಿದ್ದರು. ಈ ಗುಂಪು ಭಗತ್ ಸಿಂಗ್ ಫ್ಯಾನ್ ಕ್ಲಬ್ ಎಂಬ ಸಾಮಾಜಿಕ ಮಾಧ್ಯಮ ಗುಂಪಿನ ಅನುಯಾಯಿಗಳಾಗಿದ್ದು, ಫೇಸ್ ಬುಕ್‌ನಲ್ಲಿ ಸಂಪರ್ಕದಲ್ಲಿದ್ದಾರೆ. ಆರೋಪಿಗಳು ಕ್ರಾಂತಿಕಾರಿಗಳಿಂದ ಬಹುವಾಗಿ ಪ್ರಭಾವಿತರಾಗಿದ್ದರು ಎಂಬುದನ್ನು ಅವರ ಸಾಮಾಜಿಕ ಜಾಲತಾಣ ಖಾತೆಗಳು ಹೇಳುತ್ತಿವೆ. ಹೀಗೆ ಪ್ರಭಾವಿತರಾಗಿದ್ದ ಕಾರಣ ಅವರು ಭಗತ್ ಸಿಂಗ್‌ನ ಕೃತ್ಯವನ್ನು ಸಂಸತ್ತಿನಲ್ಲಿ ಅನುಸರಿಸಲು ತೀರ್ಮಾನಿಸಿದ್ದರು ಎಂದು ಕೆಲವು ಪತ್ರಿಕೆಗಳು ವರದಿ ಮಾಡಿವೆ.

ಆರು ಮಂದಿಯ ಪೈಕಿ ಆಜಾದ್ ಮಾತ್ರ ಕೆಲವು ಪ್ರತಿಭಟನೆಗಳಲ್ಲಿ ಭಾಗವಹಿಸಿದಂತಿದೆ. 2020-21ರ ರೈತರ ಪ್ರತಿಭಟನೆಗಳು ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್‌ರ ಲೈಂಗಿಕ ಕಿರುಕುಳದ ವಿರುದ್ಧ ನಡೆದ ಇತ್ತೀಚಿನ ಕುಸ್ತಿಪಟುಗಳ ಆಂದೋಲನದಲ್ಲಿ ಅವರು ಭಾಗವಹಿಸಿದ್ದರು ಎಂದು ಹೇಳಲಾಗುತ್ತಿದೆ.

ಪ್ರತಿಭಟನೆಗಳನ್ನು ದಾಖಲಿಸುವ ಜಾಗವು ಕುಗ್ಗುತ್ತಿದೆ

ಪ್ರಸ್ತುತ ಆಡಳಿತದಲ್ಲಿ ಸಣ್ಣ ಪ್ರತಿಭಟನೆಗಳನ್ನು ಸಹ ಬಲ ಪ್ರಯೋಗದಿಂದ ಎದುರಿಸಲಾಗುತ್ತಿದೆ. ನ್ಯಾಯಸಮ್ಮತವಾದ ಪ್ರತಿಭಟನೆಗಳನ್ನು ದಾಖಲಿಸಲು ಇರುವ ಜಾಗವು ದಿನದಿಂದ ದಿನಕ್ಕೆ ಕುಗ್ಗುತ್ತಿದೆ. ಇತ್ತೀಚೆಗಷ್ಟೇ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯವು ಪ್ರತಿಭಟನಾಕಾರರಿಗೆ 20,000 ರೂಪಾಯಿಗಳವರೆಗೆ ದಂಡ ವಿಧಿಸಲು ನಿರ್ಧರಿಸಿದೆ ಎಂದು ನಾವು ಕೇಳಿದ್ದೇವೆ. ಹಿಂದೆ, ವಿದ್ಯಾರ್ಥಿ ಸಂಘಟನೆಗಳು ಆಯೋಜಿಸುವ ಮತ್ತು ಚರ್ಚಿಸುವ ಸಾರ್ವಜನಿಕ ಸಭೆಗಳನ್ನು ಸಹ ಹಾಸ್ಟೆಲ್‌ಗಳಲ್ಲಿ ನಿಷೇಧಿಸಲಾಗಿದೆ ಮತ್ತು ವಿಶ್ವವಿದ್ಯಾಲಯದ ಆಡಳಿತದಿಂದ ಹೆಚ್ಚು ನಿಯಂತ್ರಿಸಲಾಗುತ್ತಿದೆ. ಇತರ ಕ್ಯಾಂಪಸ್‌ಗಳಲ್ಲಿ, ಅಧಿಕಾರದಲ್ಲಿರುವವರನ್ನು ಟೀಕಿಸುವ ಸಿನಿಮಾ ಪ್ರದರ್ಶನಗಳನ್ನು ತಡೆಯಲು ಇದೇ ರೀತಿಯ ಪ್ರಯತ್ನಗಳು ನಡೆದಿವೆ. ಇತ್ತೀಚಿನ ದಿನಗಳಲ್ಲಿ ಅತ್ಯಂತ ಪ್ರಮುಖವಾದ ಪ್ರಕರಣವೆಂದರೆ ಪ್ರಧಾನಿ ನರೇಂದ್ರ ಮೋದಿ ಅವರ ಕುರಿತ ಬಿಬಿಸಿ ಸಾಕ್ಷ್ಯಚಿತ್ರದ ಮೇಲೆ ವಿಶ್ವವಿದ್ಯಾನಿಲಯಗಳು ಅನಧಿಕೃತ ನಿಷೇಧ ಹೇರಿರುವುದು.

ಕಳೆದ ಕೆಲವು ವರ್ಷಗಳಿಂದ, ತಮ್ಮ ಭಿನ್ನಾಭಿಪ್ರಾಯವನ್ನು ದಾಖಲಿಸಲು ಬಯಸುವ ಸಂಘಟನೆಗಳಿಗೆ ನವದೆಹಲಿಯ ಜಂತರ್ ಮಂತರ್‌ನಂತಹ ಪ್ರತಿಭಟನೆಗಳಿಗೆ ಗೊತ್ತುಪಡಿಸಿದ ಸ್ಥಳಗಳನ್ನೂ ಸಹ ಪ್ರವೇಶಿಸಲಾಗುತ್ತಿಲ್ಲ. ಜಂತರ್ ಮಂತರ್‌ನಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಆಯೋಜಿಸಲು ದೆಹಲಿ ಪೊಲೀಸರು ಸುಲಭವಾಗಿ ಅನುಮತಿ ಕೊಡುವುದಿಲ್ಲ. ಸಂಘಟಕರು ತಮ್ಮ ಪ್ರತಿಭಟನೆಗಳ ಬಗ್ಗೆ ಪೊಲೀಸರಿಗೆ ಮುಂಚಿತವಾಗಿ ತಿಳಿಸಲು ಕೇಳಿಕೊಳ್ಳಲಾಗುತ್ತದೆ. ಹೀಗೆ ಮಾಡಿದರೂ ಕೊನೆ ಗಳಿಗೆಯಲ್ಲಿ ಅಧಿಕಾರಿಗಳು ಅನುಮತಿ ರದ್ದುಪಡಿಸುತ್ತಾರೆ.

ನಿರುದ್ಯೋಗ, ಕೋಮುವಾದ, ಅಥವಾ 370 ನೇ ವಿಧಿ ಮತ್ತು ಪೌರತ್ವ (ತಿದ್ದುಪಡಿ) ಕಾಯಿದೆ (ಸಿಎಎ)ಯಂತಹ ವಿಷಯಗಳ ಬಗ್ಗೆ ಇತ್ತೀಚಿನ ಸಾರ್ವಜನಿಕ ಸಭೆಗಳು ಕೆಲವು ಕೊನೆಯ ನಿಮಿಷದ ರದ್ದತಿಯಿಂದಾಗಿ ಸೆಮಿನಾರ್‌ಗಳನ್ನು ಸಹ ನಡೆಸಲು ಬಿಟ್ಟಿಲ್ಲ ಎಂದಾಗಿದೆ ಮತ್ತು ಸರ್ಕಾರಿ ಅಧಿಕಾರಿಗಳ ದಾಳಿಗೆ ಒಳಗಾಗಿವೆ. ವಿವಾದಾತ್ಮಕ ಸಿಎಎ ಮತ್ತು ರೈತರ ಪ್ರತಿಭಟನೆಗಳ ವಿರುದ್ಧ ಶಾಂತಿಯುತ ಪ್ರತಿಭಟನೆಯ ತಾಣಗಳನ್ನು ವಿವಿಧ ರಾಜ್ಯಗಳಲ್ಲಿ ಪೊಲೀಸರು ಹೇಗೆ ಹಿಂಸಾತ್ಮಕವಾಗಿ ಬೇರುಸಹಿತ ಕಿತ್ತುಹಾಕಿದರು ಎಂಬುದು ನಮಗೆ ತಿಳಿದಿದೆ.

ಈ ಯುವಜನರು ಕೂಗಿದ ಘೋಷಣೆಗಳು ದೇಶದ ಜನರ ಗಮನ ಸೆಳೆದಿದೆಯಾದರೂ, 2023ರ ಡಿಸೆಂಬರ್ 13ರಂದು ಸಂಸತ್ತಿನಲ್ಲಿ ನಡೆದ ಘಟನೆಗಳನ್ನು ಭಗತ್ ಸಿಂಗ್ ಅನುಯಾಯಿಗಳ ಸಂಘ, ಭಗತ್ ಸಿಂಗ್ ಮಾದರಿಯಲ್ಲಿ ಎನ್ನುತ್ತಾ ಪ್ರಸಾರ ಮಾಡುವುದು ಸರಿಯಾದುದಲ್ಲ.

ಭಗತ್ ಸಿಂಗ್ ಹೋರಾಟ ಸಾಮ್ರಾಜ್ಯಶಾಹಿ ಶೋಷಣೆಯ ವಿರೋಧಿಯಾಗಿತ್ತು

ಸಂಸತ್ತಿನಲ್ಲಿ ಎಸೆದ 2023ರ ಹೊಗೆ ಡಬ್ಬಿಗಳು, ಏಪ್ರಿಲ್ 8, 1929 ರಂದು ಭಗತ್ ಸಿಂಗ್ ಮತ್ತು ಬಟುಕೇಶ್ವರ್ ದತ್ ಎಸೆದ ಹುಸಿ ಬಾಂಬ್‌ಗಳಿಗಿಂತ ಬಹಳ ಭಿನ್ನವಾಗಿವೆ. ಇವೆರಡನ್ನೂ ಹೋಲಿಕೆ ಮಾಡುವುದು ಸರಿಯಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತಗಾರರು ಪ್ರಸ್ತಾಪಿಸಿದ ಕಾರ್ಮಿಕ ಮಸೂದೆಗೆ ಜನರ ವಿರೋಧವನ್ನು ವ್ಯಕ್ತಪಡಿಸುವುದು ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಸಾಹತುಶಾಹಿ ಶೋಷಣೆಯ ನೀತಿಯನ್ನು ವಿರೋಧಿಸುವುದು ಭಗತ್ ಸಿಂಗ್ ಮತ್ತು ದತ್ ಅವರ ಉದ್ದೇಶವಾಗಿತ್ತು.

"ಕಿವುಡರು ಕೇಳಬೇಕಾದರೆ, ಧ್ವನಿ ತುಂಬಾ ಜೋರಾಗಿರಬೇಕು" ಎಂದು ಭಗತ್ ಸಿಂಗ್ ಮತ್ತು ಬಟುಕೇಶ್ವರ್ ದತ್ ಅವರು 94 ವರ್ಷಗಳ ಹಿಂದೆ, ಏಪ್ರಿಲ್ 8, 1929 ರಂದು ದೆಹಲಿಯ ಕೇಂದ್ರ ವಿಧಾನಸಭೆಯ ಮೇಲೆ ಬಾಂಬ್ ದಾಳಿಯ ವಿಚಾರಣೆಯಲ್ಲಿ ಹೇಳಿದರು. ಈ ಇಬ್ಬರು ಯುವ ಭಾರತೀಯ ಕ್ರಾಂತಿಕಾರಿಗಳು ಕಿವುಡ, ಶ್ರೀಮಂತ ಬ್ರಿಟಿಷ್ ಕಿವಿಗಳನ್ನು ಯುವ ಕ್ರಾಂತಿಯ ಕಡೆಗೆ ತಿರುಗಿಸಿದರು, ಅದು ಭಾರತದ ಸ್ವಾತಂತ್ರ್ಯ ಚಳುವಳಿಯ ಹಾದಿಯನ್ನು ಬದಲಾಯಿಸಿತು. 1929 ರಲ್ಲಿ, ನ್ಯಾಯಾಲಯದ ಬಂಧನದ ಸಲುವಾಗಿ, ಶಹೀದ್ ಭಗತ್ ಸಿಂಗ್ ಮತ್ತು ಬಟುಕೇಶ್ವರ್ ದತ್ ಅವರು ದೆಹಲಿಯ ಕೇಂದ್ರ ಶಾಸನ ಸಭೆಯ ಮೇಲೆ ರಾಜಕೀಯ ಕರಪತ್ರಗಳು ಮತ್ತು ಹೊಗೆ ಬಾಂಬ್ಗಳನ್ನು ಎಸೆದರು.

ಭಗತ್ ಸಿಂಗ್ ಮತ್ತು ದತ್ ಅವರ ಬಾಂಬ್ ದಾಳಿಯ ಹಿಂದಿನ ಉದ್ದೇಶವು ಹಾನಿಯನ್ನುಂಟು ಮಾಡುವುದಾಗಿರಲಿಲ್ಲ. ಆದರೆ ಸಾರ್ವಜನಿಕ ಸುರಕ್ಷತಾ ಮಸೂದೆ ಮತ್ತು ವ್ಯಾಪಾರ ವಿವಾದ ಮಸೂದೆ ಎಂಬ ಎರಡು ದಮನಕಾರಿ ಮಸೂದೆಗಳ ಅಂಗೀಕಾರದ ವಿರುದ್ಧ ಪ್ರತಿಭಟಿಸುವುದು ಅವರ ಉದ್ದೇಶವಾಗಿತ್ತು. ಯೋಜನೆಯ ಅನುಸಾರವಾಗಿ, ಸಿಂಗ್ ಮತ್ತು ದತ್ ಯಶಸ್ವಿಯಾದರು ಮತ್ತು ಅಸೆಂಬ್ಲಿ ಸಭೆಯನ್ನು ನಿಲ್ಲಿಸಿದರು ಮತ್ತು ಅವರು ಸಹ ಪೊಲೀಸರಿಗೆ ಶರಣಾದರು. ಭಗತ್ ಸಿಂಗ್‌ಗೆ ನಂತರ ಮರಣದಂಡನೆ ಮತ್ತು ದತ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಆಗಲೇ ಕುದಿಯುವ ಹಂತದಲ್ಲಿದ್ದ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಲು ಅವರು ಅಂದಿನ ಚಟುವಟಿಕೆಗಳನ್ನು ನಡೆಸಿದರು. ಈ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರ ಧೈರ್ಯ ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಒಂದು ಕಾರಣವಾಗಿದೆ.

22 ನೇ ವಯಸ್ಸಿನಲ್ಲಿ, ಭಗತ್ ಸಿಂಗ್ ಭಾರತದಲ್ಲಿ ರಾಷ್ಟ್ರವ್ಯಾಪಿ ಪ್ರಸಿದ್ಧರಾದರು. ಅವರ ದಂಗೆಯ ಕ್ರಿಯೆ, ಶತ್ರುಗಳಿಗೆ ಹಾನಿಯನ್ನುಂಟು ಮಾಡದಿರುವ ಅವನ ಬಯಕೆ – ಬಾಂಬ್‌ಗಳು ಹೊಗೆಯನ್ನು ಉಂಟುಮಾಡುವ ವಿಜ್-ಬ್ಯಾಂಗ್‌ಗಳು – ಮತ್ತು ತನ್ನನ್ನು ತಾನು ವ್ಯಕ್ತಪಡಿಸುವ ಸಾಮರ್ಥ್ಯವು ಮಾಧ್ಯಮಗಳು ಮತ್ತು ಸಾರ್ವಜನಿಕರು ಅವರಿಂದ ರೋಮಾಂಚನಗೊಂಡಿರುವುದನ್ನು ಸ್ಪಷ್ಟವಾಗಿ ಖಚಿತಪಡಿಸಿತು.

ಸಂಘಟನೆ, ಗುರಿ ಮತ್ತು ಸರಿಯಾದ ತಿಳುವಳಿಕೆ ಅಗತ್ಯ

ಸ್ಫೋಟದ ನಂತರದ ಬಂಧನಗಳು, ಸೆರೆವಾಸಗಳು ಮತ್ತು ನ್ಯಾಯಾಲಯದ ವಿಚಾರಣೆಗಳು ದೇಶದ ಜನರಲ್ಲಿ ದೊಡ್ಡ ಕೋಲಾಹಲವನ್ನೇ ಸೃಷ್ಟಿಸಿದವು. ಭಗತ್ ಸಿಂಗ್ ಮತ್ತು ಜೈಲಿನಲ್ಲಿದ್ದ ಅವರ ಸಹಚರರು ಕಮ್ಯುನಿಸಂ ಅನ್ನು ಅರ್ಥ ಮಾಡಿಕೊಂಡಿದ್ದರು ಮತ್ತು ಅದಕ್ಕಾಗಿ ಕೆಲಸ ಮಾಡಿದರು. ಭಗತ್ ಸಿಂಗ್ ಅವರು ತಮ್ಮ ಸಹೋದರ ಗುಲ್ ದಾರ್ ಸಿಂಗ್ ಅವರಿಗೆ 3 ಮಾರ್ಚ್ 1931 ರಂದು ಬರೆದ ಪತ್ರ ಮತ್ತು 2 ಫೆಬ್ರವರಿ 1931 ರಂದು ಯುವ ರಾಜಕೀಯ ಕಾರ್ಯಕರ್ತರಿಗೆ ಅವರು ಬರೆದ ಪತ್ರವು ಇಂದಿನ ಯುವಕರು ಅನುಕರಿಸಬೇಕಾದ ದಾರ್ಶನಿಕ ದೃಷ್ಟಿಕೋನಗಳನ್ನು ಒಳಗೊಂಡಿದೆ. ಅವು ದೊಡ್ಡ ತಾತ್ವಿಕ ವಿಚಾರಗಳನ್ನು ಒಳಗೊಂಡಿರುತ್ತವೆ. ಇದು ಭಾರತೀಯ ವಿಮೋಚನೆಯ ಸೂಕ್ಷ್ಮ ಗುರಿಯನ್ನು ವ್ಯಕ್ತಪಡಿಸುತ್ತದೆ.

"ಇಂದಿನ ವಾತಾವರಣದಲ್ಲಿ, ಭವಿಷ್ಯದ ಯೋಜನೆಯನ್ನು ಚರ್ಚಿಸುವುದು ಮುಖ್ಯವಾಗಿದೆ. ಅದರ ತಳಹದಿಯಲ್ಲಿ ಸಾಂಸ್ಥಿಕ ಚಟುವಟಿಕೆಗಳನ್ನು ನಡೆಸಬೇಕು. ಕ್ರಾಂತಿಯು ಇದ್ದಕ್ಕಿದ್ದಂತೆ, ಅಸಂಘಟಿತವಾಗಿ ಅಥವಾ ಸ್ವಯಂಪ್ರೇರಿತವಾಗಿ ಸಂಭವಿಸುವುದಿಲ್ಲ. ಇದು ಮೂರು ಅಂಶಗಳನ್ನು ಹೊಂದಿದೆ. ಮೊದಲನೆಯದು ಗುರಿ. ಎರಡನೆಯದು, ಇಂದಿನ ಪರಿಸರದಲ್ಲಿ ಎಲ್ಲಿಂದ ಪ್ರಾರಂಭಿಸಬೇಕು ಎಂಬ ತಿಳುವಳಿಕೆ ಮತ್ತು ಮೂರನೆಯದು ಕ್ರಿಯಾ ಯೋಜನೆ, ಅದರ ವಿಷಯ ಮತ್ತು ವಿಧಾನ" ಎಂದು ಭಗತ್‌ಸಿಂಗ್ ಯುವ ರಾಜಕೀಯ ಕಾರ್ಯಕರ್ತರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಭಗತ್‌ಸಿಂಗ್ ಅವರ ಹಾದಿಯಲ್ಲಿ ಸಾಗುವ ಕಾರ್ಯಕರ್ತರು ಈ ವಿಷಯಗಳನ್ನು ತಿಳಿಯದೆ ಕ್ಷೇತ್ರಕ್ಕೆ ಬರುವುದು ಖಂಡಿತ. ಹಾಗಾಗಿ 2023ರ ಡಿಸೆಂಬರ್ 13ರ ಸಂಸತ್ತಿನಲ್ಲಿ ನಡೆದ ಘಟನೆಗಳನ್ನು ಭಗತ್ ಸಿಂಗ್ ಅನುಯಾಯಿಗಳ ಸಂಘ, ಭಗತ್ ಸಿಂಗ್ ಮಾದರಿಯಲ್ಲಿ ಎನ್ನುತ್ತಾ ಪ್ರಸಾರ ಮಾಡುವುದು ಸರಿಯಾದುದಲ್ಲ.

141 ಸಂಸದರ ಅಮಾನತು: ಮೋದಿ ಸರ್ಕಾರದ ನಿರಂಕುಶವಾದ ಪ್ರಜಾಪ್ರಭುತ್ವ ನಾಶವಾಗುತ್ತಿದೆಯೇ?

ಹೊಸ ಸಂಸತ್ ಭವನದಲ್ಲಿ ಪ್ರಜಾಪ್ರಭುತ್ವ ಸಮಾಧಿಯಾಗುತ್ತಿದೆಯೇ! ವಿರೋಧ ಪಕ್ಷಗಳಿಗೆ ಸೇರಿದ 141 ಸಂಸದರಿಗೆ ಚಳಿಗಾಲದ ಅಧಿವೇಶನ ಮುಗಿಯುವವರೆಗೆ ಸಂಸತ್ ಪ್ರವೇಶಿಸದಂತೆ ಆದೇಶ ಹೊರಡಿಸಲಾಗಿದ್ದು, ಇದು ಇತಿಹಾಸದಲ್ಲೇ ಅಭೂತಪೂರ್ವವಾಗಿದೆ. ಲೋಕಸಭೆಯೊಳಗೆ ನುಸುಳಿದ ವೀಕ್ಷಕರಿಗೆ ಪಾಸ್ ನೀಡಿದ ಮೈಸೂರು-ಕೊಡಗು ಕ್ಷೇತ್ರದ ಬಿಜೆಪಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಕನಿಷ್ಠ ಪಕ್ಷ ಪ್ರಶ್ನೆಯನ್ನೂ ಮಾಡಿಲ್ಲ. ಮೇಲಾಗಿ ಪ್ರಧಾನಿ ಮತ್ತು ಗೃಹ ಸಚಿವರು ಹಲವು ದಿನಗಳಿಂದ ಸದನಕ್ಕೆ ಬರುತ್ತಿಲ್ಲ. ಸಂಸತ್ತಿನಲ್ಲಿ ಮಾತನಾಡುತ್ತಿಲ್ಲ. ಸಂಸತ್ತಿನ ಹೊರಗೆ ಸಂದರ್ಶನಗಳನ್ನು ನೀಡುತ್ತಾರೆ. ಪಕ್ಷದ ಸಭೆಗಳಲ್ಲೂ ಮಾತನಾಡುತ್ತಾರೆ. "ಭದ್ರತಾ ವೈಫಲ್ಯ ಗಂಭೀರ ವಿಷಯ, ಅದನ್ನು ಎಲ್ಲರೂ ಖಂಡಿಸಬೇಕು, ಪ್ರತಿಪಕ್ಷಗಳು ರಾಜಕೀಯ ಮಾಡುವುದನ್ನು ಬಿಟ್ಟುಬಿಡಬೇಕು, ಇದರ ಹಿಂದಿರುವ ವ್ಯಕ್ತಿಗಳ ಮೂಲ ಮತ್ತು ಅವರ ಉದ್ದೇಶಗಳನ್ನು ತಿಳಿದುಕೊಳ್ಳುವುದು ಅಷ್ಟೇ ಮುಖ್ಯ" ಎಂದು ಸದನದ ಹೊರಗೆ ಸಭಾನಾಯಕರು ಹೇಳುತ್ತಾರೆ. ಭದ್ರತಾ ಬಿಕ್ಕಟ್ಟಿನ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ಮತ್ತು ಅದನ್ನು ಸರಿಪಡಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳದೆ, ಪ್ರತಿಪಕ್ಷಗಳ ಮೇಲೆ ದಾಳಿ ಮಾಡಲಾಗುತ್ತಿದೆ. "ಡಿಸೆಂಬರ್ 13 ರಂದು ಏನು ನಡೆಯಿತು? ಇದು ಹೇಗೆ ಸಂಭವಿಸಿತು? ಗೃಹ ಸಚಿವರು ಹೇಳಿಕೆ ನೀಡಬೇಕು" ಇದೇ ಇಂಡಿಯಾ ವೇದಿಕೆಯಲ್ಲಿ ಪಕ್ಷಗಳು ಮಾಡಿದ ಏಕೈಕ ಬೇಡಿಕೆಯಾಗಿದೆ.

ಪ್ರಜಾಪ್ರಭುತ್ವದಲ್ಲಿ ಪ್ರಶ್ನಿಸುವುದು ಚುನಾಯಿತ ಪ್ರತಿನಿಧಿಗಳ ಕರ್ತವ್ಯ. ಆ ಚರ್ಚೆಗಳ ಆಧಾರದ ಮೇಲೆ ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕು. ಇದಕ್ಕೆ ವ್ಯತಿರಿಕ್ತವಾಗಿ, ನಿರಂಕುಶವಾದವು ಮೋದಿ ಸರ್ಕಾರದ ಅಜೆಂಡಾವಾಗಿದೆ. 14, 78, 49... ಸತತ ಮೂರು ದಿನಗಳಲ್ಲಿ 141 ಜನ ಸಂಸದರನ್ನು ಅಮಾನತುಗೊಳಿಸಲಾಗಿದೆ. ಇನ್ನೂ ಪ್ರತಿಪಕ್ಷದ 47 ಸದಸ್ಯರು ಮಾತ್ರ ಸದನದಲ್ಲಿ ಉಳಿದಿದ್ದರು. ಈ ಹಿಂದೆ ಇಷ್ಟೊಂದು ಪ್ರತಿಪಕ್ಷ ಸದಸ್ಯರನ್ನು ಅಮಾನತುಗೊಳಿಸಿ ಮಸೂದೆಗಳನ್ನು ಅಂಗೀಕರಿಸಿದ ಸರ್ಕಾರ ಕೇಂದ್ರದಲ್ಲಿ ಇಲ್ಲ.

ಪ್ರಧಾನಿ ಹಾಗೂ ಗೃಹ ಸಚಿವರು ಸದನದಲ್ಲಿದ್ದು ಉತ್ತರ ನೀಡುವಂತೆ ಕೇಳುವುದು ಸದಸ್ಯರ ಕರ್ತವ್ಯ. ಅವರನ್ನು ಸದನದಿಂದ ಅಮಾನತು ಮಾಡುವುದು ಉತ್ತರವಲ್ಲ. ಪ್ರಜಾಪ್ರಭುತ್ವ ಆತಂಕದಲ್ಲಿ ಮಾತ್ರವಲ್ಲ, ಪ್ರಜಾಪ್ರಭುತ್ವವನ್ನು ನಾಶ ಮಾಡಲು ಹೊರಟಿದ್ದಾರೆ!

ಕರ್ನಾಟಕದ ಸೌಹಾರ್ದ ಪರಂಪರೆ ಕುರಿತ ರಾಜ್ಯ ಸಮಾವೇಶ

2024 ಜನವರಿ 11 ಬೆಳಗ್ಗೆ 10.30 ಕ್ಕೆ

ಎನ್.ಜಿ.ಒ. ಸಭಾಂಗಣ, ಕಬ್ಬನ್ ಪಾರ್ಕ್, ಬೆಂಗಳೂರು.

ತಪ್ಪದೇ ಎಲ್ಲರೂ ಭಾಗವಹಿಸಿ, ಇತರರನ್ನು ಪಾಲ್ಗೊಳಿಸಿ


ಸಂಘಟಕರು:

ಸೌಹಾರ್ದ ಕರ್ನಾಟಕ ಮತ್ತು ಸಮಾನಮನಸ್ಕ ಸಂಘಟನೆಗಳು

ಜನವರಿ 30 ಬೃಹತ್ ಮಾನವ ಸರಪಳಿ

ಹೊಸ ಕಾಯಿದೆಯು ಕ್ರಿಮಿನಲ್ ಪ್ರೊಸಿಜರ್ ಕೋಡ್ ನಲ್ಲಿ ಕೊಲೆಯ ಅಪರಾಧ ಮತ್ತು ಅದಕ್ಕೆ ಶಿಕ್ಷೆಗಳು ಐಪಿಸಿಯ ಸೆಕ್ಷನ್ 299 ರಿಂದ 311 ರ ಅಡಿಯಲ್ಲಿವೆ. ಹೊಸ ಕಾಯಿದೆಯಲ್ಲಿ ಅವುಗಳನ್ನು ಸೆಕ್ಷನ್ 98 ರಿಂದ 111 ರ ಅಡಿಯಲ್ಲಿ ತರಲಾಯಿತು. ಕೊಲೆಯ ಅಪರಾಧದ ಸೆಕ್ಷನ್ 302 ಅನ್ನು ಸೆಕ್ಷನ್ 102 ಕ್ಕೆ ಬದಲಾಯಿಸಲಾಗಿದೆ. ಮಹಿಳೆಯರ ವಿರುದ್ಧದ ಅಪರಾಧಗಳಲ್ಲಿ ಕೂಡ ಸಂಖ್ಯೆಗಳು ಬದಲಾಗಿವೆ. ವಂಚನೆ, ನಕಲಿ ಮತ್ತು ಕಳ್ಳತನದಂತಹ ಬಹುತೇಕ ಎಲ್ಲಾ ವಿಭಾಗಗಳನ್ನು ದೊಡ್ಡ ಬದಲಾವಣೆಗಳಿಲ್ಲದೆ ಹೊಸ ವಿಭಾಗಗಳಾಗಿ ಮರು-ವಿಂಗಡಿಸಲಾಗಿದೆ. ಆದಾಗ್ಯೂ, ಇದರ ಜೊತೆಗೆ, ದೇಶದ್ರೋಹದ ಅಪರಾಧ, ಯುಎಪಿಎ ಕಾಯ್ದೆಯಡಿ ಭಯೋತ್ಪಾದನೆ, ಪೋಕ್ಸೊ ಕಾಯ್ದೆಯಡಿ ಮಕ್ಕಳ ಕಿರುಕುಳ ಮತ್ತು ಇತರ ಕಾನೂನುಗಳಲ್ಲಿ ಉಲ್ಲೇಖಿಸಲಾದ ಆರ್ಥಿಕ ಅಪರಾಧಗಳ ವಿಭಾಗಗಳನ್ನು ಹೊಸ ದಂಡ ಸಂಹಿತೆಯ ಭಾಗವಾಗಿ ಸೇರಿಸಿದ್ದಾರೆ. ಇದರಿಂದ ಶ್ರೀಸಾಮಾನ್ಯನಿಗೆ ಆಗುವ ಕಾನೂನು ತೊಡಕುಗಳು ವರ್ಣನಾತೀತ.

–ಸಿ.ಪಿ. ಪ್ರಮೋದ್, (ಲೇಖಕರು: 'ಅಖಿಲ ಭಾರತ ವಕೀಲರ ಒಕ್ಕೂಟ'ದ ಕೇರಳ ರಾಜ್ಯ ಕಾರ್ಯದರ್ಶಿ)



ಕ್ರಿಮಿನಲ್ ಕಾನೂನುಗಳಲ್ಲಿ ತುಘಲಕ್ ಸುಧಾರಣೆಗಳು ಜನರನ್ನು ತೊಂದರೆಗೆ ಸಿಲುಕಿಸುವ ವ್ಯರ್ಥ ಕಸರತ್ತು

ಭಾರತೀಯ ದಂಡ ಸಂಹಿತೆ(ಐ.ಪಿ.ಸಿ.) ಎವಿಡೆನ್ಸ್(ಸಾಕ್ಷ್ಯ) ಆಕ್ಟ್, ಕ್ರಿಮಿನಲ್ ಪ್ರೊಸಿಜರ್ ಕೋಡ್ ಇತ್ಯಾದಿಗಳನ್ನು ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಕ್ರಮವಾಗಿ ಭಾರತೀಯ ಕಾನೂನು ಸಂಹಿತೆ, ಭಾರತೀಯ ಸಾಕ್ಷ್ಯ ಮಸೂದೆ ಮತ್ತು ಭಾರತೀಯ ನಾಗರಿಕ ಭದ್ರತಾ ಸಂಹಿತೆ ಎಂದು ಮರುನಾಮಕರಣ ಮಾಡಿದೆ. ಕೇಂದ್ರ ಸರ್ಕಾರವು ಭಾರತದಲ್ಲಿ ಕ್ರಿಮಿನಲ್ ಕಾನೂನುಗಳಲ್ಲಿ ಸಮಗ್ರ ಸುಧಾರಣೆಗಳನ್ನು ತರುತ್ತಿದೆ ಮತ್ತು ವಸಾಹತುಶಾಹಿ ಯುಗದ ಕಾನೂನುಗಳನ್ನು ಸುಧಾರಿಸಲಾಗುತ್ತಿದೆ ಎಂದು ಹೇಳಿಕೊಂಡಿದೆ. ಇತ್ತೀಚೆಗೆ ಸಂಸತ್ತಿನ ಮೇಲಿನ ದಾಳಿಯಲ್ಲಿ ಭದ್ರತಾ ಲೋಪದ ಬಗ್ಗೆ ಚರ್ಚೆಗೆ ಒತ್ತಾಯಿಸಿ 143 ಪ್ರತಿಪಕ್ಷ ಸಂಸದರನ್ನು ಅಮಾನತುಗೊಳಿಸಿದ್ದ ಸಮಯದಲ್ಲಿ ಇಂತಹ ಮಹತ್ವದ ಮಸೂದೆಯನ್ನು ಚರ್ಚೆಗೆ ಕೈಗೆತ್ತಿಕೊಳ್ಳುವುದು ನಿಜಕ್ಕೂ ಸಂಪೂರ್ಣ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಮಸೂದೆ ಮೇಲಿನ ಚರ್ಚೆ ನಡೆಯದಂತೆ ಮಾಡಿರುವುದು ಉದ್ದೇಶಪೂರ್ವಕ ಕ್ರಮವಾಗಿದೆ.

ದೇಶದಲ್ಲಿ ಕ್ರಿಮಿನಲ್ ಕಾನೂನು ವ್ಯವಸ್ಥೆಯು ಬ್ರಿಟಿಷ್ ಆಳ್ವಿಕೆಯಲ್ಲಿ ಪ್ರಾರಂಭವಾಯಿತು. 1872 ರಲ್ಲಿ, ಐಪಿಸಿ ಮತ್ತು ಎವಿಡೆನ್ಸ್ ಆಕ್ಟ್ ಜಾರಿಗೆ ಬಂದಿತು. 1898 ರಲ್ಲಿ 'ಸಿ.ಆರ್.ಪಿ.ಸಿ.' ಅನ್ನು ಸಹ ರಚಿಸಲಾಯಿತು. ಅದಕ್ಕೂ ಹಿಂದಿನ ರಾಜರುಗಳ ಆಳ್ವಿಕೆಯಲ್ಲಿ ಅಥವಾ ಅದಕ್ಕೂ ಹಿಂದೆ ಕ್ರಿಮಿನಲ್ ಕಾನೂನು ಜಾರಿ ವ್ಯವಸ್ಥೆಗಳು ಹೇಗಿದ್ದವು ಕಾರ್ಯವಿಧಾನಗಳು ಹೇಗಿದ್ದವು ಎಂಬುದು ನಮಗೆ ತಿಳಿದಿಲ್ಲ. ಬ್ರಿಟಿಷ್ ಆಡಳಿತದ ನ್ಯಾಯ ವ್ಯವಸ್ಥೆಯಲ್ಲಿ ಸ್ವಲ್ಪ ಮಾರ್ಪಾಡುಗಳೊಂದಿಗೆ ಜಾರಿಗೆ ತಂದರು. ಹಾಗಾಗಿಯೇ ಇಂದಿನ ಕಾನೂನು ವ್ಯವಸ್ಥೆಯು, ಕಾನೂನು ಸುವ್ಯವಸ್ಥೆಯನ್ನು ಜಾರಿಗೊಳಿಸಲು ನ್ಯಾಯಾಧೀಶರು, ನ್ಯಾಯವಾದಿಗಳು ಸೇರಿದ ನ್ಯಾಯ ವ್ಯವಸ್ಥೆ ಮತ್ತು ಪೊಲೀಸ್ ವ್ಯವಸ್ಥೆ ಆ ವಿಧದಲ್ಲಿ ಅಸ್ತಿತ್ವಕ್ಕೆ ಬಂದಿತು.

ನಂತರ, ಈ ಕಾನೂನುಗಳನ್ನು ನ್ಯಾಯಾಲಯದ ತೀರ್ಪುಗಳು ಮತ್ತು ಅನೇಕ ಶಾಸಕಾಂಗದ ತಿದ್ದುಪಡಿಗಳಿಂದ ಹಲವು ವಿಧಗಳಲ್ಲಿ ಮಾರ್ಪಡಿಸಲಾಯಿತು. ಈ ಬದಲಾವಣೆಗಳಿಂದ ಇದು ದೋಷರಹಿತ ವ್ಯವಸ್ಥೆಯಾಗಿದೆ ಎಂದು ಹೇಳಲಾಗದು. ಆದರೆ ಹಕ್ಕುಗಳ ವಿಷಯದಲ್ಲಿ ಬದಲಾವಣೆಗಳಾಗಿವೆ ಎಂಬುದು ಸತ್ಯ. ದೇಶದಲ್ಲಿ ಕ್ರಿಮಿನಲ್ ನ್ಯಾಯ ವ್ಯವಸ್ಥೆಯು 1950 ರಲ್ಲಿ ಸ್ಥಾಪಿಸಲಾದ ಭಾರತದ ಸಂವಿಧಾನದಲ್ಲಿ 1970 ರ ದಶಕದಲ್ಲಿ ಮಾಡಲಾದ ಆಧುನಿಕ ಪ್ರಜಾಪ್ರಭುತ್ವ ಹಕ್ಕುಗಳು, ನಾಗರಿಕ ಹಕ್ಕುಗಳು ಮತ್ತು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆಗಳಿಗೆ ಅನುಗುಣವಾಗಿದೆ.

ವಸಾಹತುಶಾಹಿ ಕಾಲದ ಕಾನೂನುಗಳನ್ನು ಸಂಪೂರ್ಣವಾಗಿ ಬದಲಾಯಿಸುವ ದೊಡ್ಡ ಪ್ರಯತ್ನಗಳು ಎಂದಿಗೂ ನಡೆದಿಲ್ಲವಾದರೂ, ಹಕ್ಕುಗಳ ವಿಷಯದಲ್ಲಿ ಅನೇಕ ಗಮನಾರ್ಹ ಬದಲಾವಣೆಗಳಾಗಿವೆ. ಬಂಧನ, ವಿಚಾರಣೆ ಪೂರ್ವ ಕಸ್ಟಡಿ, ಜಾಮೀನು, ಆರೋಪಿಗಳಿಗೆ ಕಾನೂನು ನೆರವು ಪಡೆಯುವ ಹಕ್ಕು, ಘೋರ ಅಪರಾಧಗಳಿಗೆ ಕಠಿಣ ಶಿಕ್ಷೆ ಮತ್ತು ಮಾನವ ಹಕ್ಕುಗಳ ರಕ್ಷಣೆ ಕ್ಷೇತ್ರಗಳಲ್ಲಿ ಹಲವು ಪ್ರಮುಖ ಬದಲಾವಣೆಗಳಾಗಿವೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ದುರುಪಯೋಗಪಡಿಸಿಕೊಂಡ ದೇಶದ್ರೋಹದ ಅಪರಾಧದ ನಿಬಂಧನೆಗಳ ಅನ್ವಯವನ್ನು ಸ್ಥಗಿತಗೊಳಿಸಿದ ಕ್ರಮವು ಕೂಡಾ ಅಂತಹುದಾಗಿದೆ.

ಬಿಜೆಪಿ ಅಧಿಕಾರಕ್ಕೆ ಬಂದ ನಂತರ ದೇಶದಲ್ಲಿ ಕ್ರಿಮಿನಲ್ ಕಾನೂನು ವ್ಯವಸ್ಥೆಯಲ್ಲಿ ಸುಧಾರಣೆ ತರುವುದಾಗಿ ಘೋಷಿಸಲಾಗಿತ್ತು. ಆದರೆ, ಸನಾತನ ಭಾರತದ ಸಾಮ್ರಾಜ್ಯದಲ್ಲಿನ ಅವರ ಭಾವನಾತ್ಮಕ ಇತಿಹಾಸದಲ್ಲಿ ಎಲ್ಲಿಯೂ ಇಂತಹ ಕಾನೂನು ಜಾರಿ ವ್ಯವಸ್ಥೆ ಇಲ್ಲ. ಆದ್ದರಿಂದ, ವಕೀಲ ವೃತ್ತಿಯಲ್ಲಿರುವ ಪ್ರತಿಯೊಬ್ಬರೂ ತಾವು ಟೀಕಿಸುವ ವಿದೇಶಿ-ವಸಾಹತುಶಾಹಿ ಕಾನೂನುಗಳನ್ನು ಹೇಗೆ ಬದಲಾಯಿಸುತ್ತಾರೆ ಎಂಬ ಬಗ್ಗೆ ಆಸಕ್ತಿಯಿಂದ ಕಾಯುತ್ತಿದ್ದರು.

ಏಕಪಕ್ಷೀಯ ವಿಧಾನದ ಮೂಲಕ

ಮೋದಿ ನೇತೃತ್ವದ ಕೇಂದ್ರ ಸರ್ಕಾರವು ನೋಟು ಅಮಾನ್ಯೀಕರಣ, ವಿನಾಶಕಾರಿ ಕೃಷಿ ಮಸೂದೆ, ಕಾರ್ಮಿಕ ಕಾನೂನು ಸುಧಾರಣೆಗಳು, ಪೌರತ್ವ ಕಾನೂನು ತಿದ್ದುಪಡಿ ಇತ್ಯಾದಿಗಳ ಬಗ್ಗೆ ಸಾಕಷ್ಟು ಚರ್ಚೆಯಿಲ್ಲದೆ ಏಕಪಕ್ಷೀಯ ವಿಧಾನವನ್ನು ಅನುಸರಿಸಿತ್ತೊ, ಅದೇ ರೀತಿಯಲ್ಲಿ ಕ್ರಿಮಿನಲ್ ಕಾನೂನು ಸುಧಾರಣೆ ತರುವಲ್ಲಿಯೂ ಅಳವಡಿಸಿಕೊಂಡಿದೆ. ಅಸ್ತಿತ್ವದಲ್ಲಿರುವ ಕಾನೂನುಗಳ ಸಂಪೂರ್ಣ ಪರಿಷ್ಕರಣೆ, ಸಮಗ್ರ ಹೊಸ ಕಾನೂನುಗಳ ರಚನೆಯನ್ನು ಸಾಮಾನ್ಯವಾಗಿ ಕಾನೂನು ಆಯೋಗಗಳು ಶಿಫಾರಸು ಮಾಡುತ್ತವೆ. ಈ ವಿಷಯದಲ್ಲಿಯೂ ಕೇಂದ್ರವು ಸುವ್ಯವಸ್ಥಿತವಾದ ಆ ಸಾಧ್ಯತೆಯನ್ನು ತಳ್ಳಿಹಾಕಿತು.

ಕಾನೂನು ಸುಧಾರಣಾ ಸಮಿತಿ

ಮೇ 4 ರಂದು ಕೇಂದ್ರ ಸರ್ಕಾರವೇ ಕ್ರಿಮಿನಲ್ ಕಾನೂನುಗಳನ್ನು ಸುಧಾರಿಸಲು ಸಮಿತಿಯೊಂದನ್ನು ನೇಮಿಸಿದೆ. ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಪಿ.ತಾರೇಜಾ ಮತ್ತು ವಕೀಲ ಮಹೇಶ್ ಜೇಠ್ಮಲಾನಿ ಅವರನ್ನು ಸದಸ್ಯರಾಗಿ ನೇಮಕಗೊಂಡಿದ್ದಾರೆ. ಈ ಕಾನೂನು ಸುಧಾರಣಾ ಸಮಿತಿಯು ವಿಚಾರಣೆಯ ಅಂಶಗಳನ್ನು ಸಹ ಬಿಡುಗಡೆ ಮಾಡಿಲ್ಲ. ಈ ಸಮಿತಿ ಸಲ್ಲಿಸಿದ ಕರಡು ಕಾನೂನುಗಳನ್ನು ಕೇಂದ್ರವು ನಾಲ್ಕು ತಿಂಗಳ ಹಿಂದೆ ಸಂಸತ್ತಿನಲ್ಲಿ ಮಂಡಿಸಿ ಸಾರ್ವಜನಿಕ ಅಭಿಪ್ರಾಯಕ್ಕೆ ಬಿಡುಗಡೆ ಮಾಡಿದೆ. ಆದರೆ ಈ ಕಾಯಿದೆಯನ್ನು ಯಾವುದೇ ಪ್ರಮುಖ ಬದಲಾವಣೆಗಳಿಲ್ಲದೆ ಹೊಸ ಹೆಸರುಗಳೊಂದಿಗೆ ಸಂಸತ್ತಿನಲ್ಲಿ ಪರಿಚಯಿಸಲಾಯಿತು.

ಹಿಂದೀಕರಣ

ಕೇರಳ ಸೇರಿದಂತೆ ದಕ್ಷಿಣ ಭಾರತದ ಹಿಂದಿಯೇತರ ಭಾಷೆ ಮಾತನಾಡುವ ರಾಜ್ಯಗಳ ಜನತೆಗೆ ಈ ಹೊಸ ಹೆಸರುಗಳು ಸಾಕಷ್ಟು ಅನಾನುಕೂಲತೆಯನ್ನು ಸೃಷ್ಟಿಸುತ್ತವೆ. ಇದಲ್ಲದೆ, ಸಂವಿಧಾನದ 348(1) ವಿಧಿಯು ಸಂಸತ್ತು ಮತ್ತು ಶಾಸಕಾಂಗಗಳಲ್ಲಿ ಪರಿಚಯಿಸಲಾದ ಕಾನೂನುಗಳ ವಿಷಯ ಅಥವಾ ಶೀರ್ಷಿಕೆಯು ಇಂಗ್ಲಿಷ್ ನಲ್ಲಿರಬೇಕು ಎಂದು ಷರತ್ತು ವಿಧಿಸುತ್ತದೆ. ಈ ಷರತ್ತುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಏಕಪಕ್ಷೀಯ ಮತ್ತು ಆಕ್ರಮಣಕಾರಿ ಹಿಂದೀಕರಣವನ್ನು ಮಾಡಲಾಗಿದೆ. ಐ.ಪಿ.ಸಿ., ಎವಿಡೆನ್ಸ್ ಆಕ್ಟ್ ಮತ್ತು ಸಿ.ಆರ್.ಪಿ.ಸಿ.ಯ ಸಂದರ್ಭದಲ್ಲಿ, ಅವರು ಹೇಳಿದಂತೆ 'ಭಾರತೀಕರಣ' ಸಂಭವಿಸಿಲ್ಲ ಅಥವಾ ಅಸ್ತಿತ್ವದಲ್ಲಿರುವ ಕಾನೂನುಗಳ ಸಮಗ್ರ ಸುಧಾರಣೆಯೂ ಆಗಿಲ್ಲ. ಈಗಿರುವ ಕಾನೂನುಗಳಿಂದ ಆಗುವ ನಷ್ಟ ಮತ್ತು ಹೊಸ ಸುಧಾರಣೆಗಳಿಂದ ಆಗುವ ಲಾಭಗಳೇನು ಎಂದು ಯಾರೂ ಹೇಳಲಾರರು. ಮೂರು ಕಾಯಿದೆಗಳ ವಿವಿಧ ಭಾಗಗಳ ಪುನರ್ ಪರಿಷ್ಕರಣೆ ಪ್ರಮುಖವಾಗಿ ನಡೆದಿದೆ.

ತುಘಲಕ್ ಸುಧಾರಣೆಗಳ ರೀತಿಯಲ್ಲಿಯೇ

ಹೊಸ ಕಾಯಿದೆಯು ಕ್ರಿಮಿನಲ್ ಪ್ರೊಸಿಜರ್ ಕೋಡ್‌ನಲ್ಲಿ ಎಫ್‌ಐಆರ್‌ನ ದಾಖಲಿನಿಂದ ವಿಚಾರಣೆ ಪೂರ್ಣಗೊಳಿಸಿ, ತೀರ್ಪು ಪ್ರಕಟಿಸುವವರೆಗೆ ಹಾಗೆಯೇ ಮೇಲ್ಮನವಿ ನ್ಯಾಯಾಲಯವು ಕಾರ್ಯವಿಧಾನಗಳಲ್ಲಿ ಯಾವುದೇ ಬದಲಾವಣೆ ಮಾಡಲು ಪ್ರವೇಶಕ್ಕೆ ಅವಕಾಶ ಇಲ್ಲ. ಅಪರಾಧಗಳು ಮತ್ತು ಶಿಕ್ಷೆಗಳನ್ನು ವ್ಯಾಖ್ಯಾನಿಸುವ ಭಾರತೀಯ ದಂಡ ಸಂಹಿತೆಯ ಪ್ರಕರಣದಲ್ಲಿ ಅಪರಾಧಗಳು ಮತ್ತು ಶಿಕ್ಷೆಗಳ ವ್ಯಾಖ್ಯಾನಗಳನ್ನು ಅದೇ ರೀತಿಯಲ್ಲಿ ಪುನಃ ಬರೆದು, ವಿಭಾಗಗಳನ್ನು ಅಲ್ಲಿ ಮತ್ತು ಇಲ್ಲಿ ಮರು-ವಿಭಜಿಸಲಾಗಿದೆ. ಭಾರತೀಯ ಸಾಕ್ಷ್ಯ ಕಾಯ್ದೆಯಲ್ಲಿ ಹೆಸರು ಬದಲಾವಣೆ ಮತ್ತು ಇಲಾಖೆಗಳ ಬದಲಾವಣೆ ಮಾತ್ರ ನಡೆದಿದೆ. ಈ ಎಲ್ಲಾ ವಿಭಾಗಗಳನ್ನು ತುಘಲಕ್ ಸುಧಾರಣೆಗಳ ರೀತಿಯಲ್ಲಿಯೇ ವಿಂಗಡಿಸಲಾಗಿದೆ. ಬಹಳ ಅಬ್ಬರದಿಂದ ನಡೆದ ಭಾರತೀಕರಣದ ಪ್ರಹಸನವು ಉಪನಾಮ ಬದಲಾವಣೆ ಮತ್ತು ಶಾಖೆಗಳ ವಿನಿಮಯವಾಗಿ ಮಾರ್ಪಟ್ಟಿದೆ.

ಕೊಲೆಯ ಅಪರಾಧ ಮತ್ತು ಅದಕ್ಕೆ ಶಿಕ್ಷೆಗಳು ಐಪಿಸಿಯ ಸೆಕ್ಷನ್ 299 ರಿಂದ 311 ರ ಅಡಿಯಲ್ಲಿವೆ. ಹೊಸ ಕಾಯಿದೆಯಲ್ಲಿ ಅವುಗಳನ್ನು ಸೆಕ್ಷನ್ 98 ರಿಂದ 111 ರ ಅಡಿಯಲ್ಲಿ ತರಲಾಯಿತು. ಕೊಲೆಯ ಅಪರಾಧದ ಸೆಕ್ಷನ್ 302 ಅನ್ನು ಸೆಕ್ಷನ್ 102 ಕ್ಕೆ ಬದಲಾಯಿಸಲಾಗಿದೆ. ಮಹಿಳೆಯರ ವಿರುದ್ಧದ ಅಪರಾಧಗಳಲ್ಲಿ ಕೂಡ ಸಂಖ್ಯೆಗಳು ಬದಲಾಗಿವೆ. ವಂಚನೆ, ನಕಲಿ ಮತ್ತು ಕಳ್ಳತನದಂತಹ ಬಹುತೇಕ ಎಲ್ಲಾ ವಿಭಾಗಗಳನ್ನು ದೊಡ್ಡ ಬದಲಾವಣೆಗಳಿಲ್ಲದೆ ಹೊಸ ವಿಭಾಗಗಳಾಗಿ ಮರು-ವಿಂಗಡಿಸಲಾಗಿದೆ. ಆದಾಗ್ಯೂ, ಇದರ ಜೊತೆಗೆ, ದೇಶದ್ರೋಹದ ಅಪರಾಧ, ಯುಎಪಿಎ ಕಾಯ್ದೆಯಡಿ ಭಯೋತ್ಪಾದನೆ, ಪೋಕ್ಸೊ ಕಾಯ್ದೆಯಡಿ ಮಕ್ಕಳ ಕಿರುಕುಳ ಮತ್ತು ಇತರ ಕಾನೂನುಗಳಲ್ಲಿ ಉಲ್ಲೇಖಿಸಲಾದ ಆರ್ಥಿಕ ಅಪರಾಧಗಳ ವಿಭಾಗಗಳನ್ನು ಹೊಸ ದಂಡ ಸಂಹಿತೆಯ ಭಾಗವಾಗಿ ಸೇರಿಸಿದ್ದಾರೆ. ಈ ಬದಲಾವಣೆಗಳಿಂದ ಶ್ರೀಸಾಮಾನ್ಯನಿಗೆ ಆಗುವ ಕಾನೂನು ತೊಡಕುಗಳು ವರ್ಣನಾತೀತ.

ಜನರನ್ನು ತೊಂದರೆಗೆ ಸಿಲುಕಿಸುವ ವ್ಯರ್ಥ ಕಸರತ್ತು

ಈಗಿರುವ ನಿಯಮಗಳನ್ನು ಬದಲಿಸುವ ಆ ಇಲಾಖೆ ಮಾಡಿದ ಗಿಮಿಕ್ ನಿಂದ ಪ್ರಯೋಜನವೇನು? ಮೇಲೆ ಹೇಳಿದಂತೆ, ಈ ಸುಧಾರಣೆಗಳ ಹಿನ್ನೆಲೆಯಲ್ಲಿ, ಅಪರಾಧ ದಾಖಲೆಗಳ ಬ್ಯೂರೋಗಳು ಇತ್ತೀಚಿನ ಡೇಟಾವನ್ನು ನವೀಕರಿಸಬೇಕಾಗುತ್ತದೆ. ಇದರಿಂದ ಬೊಕ್ಕಸಕ್ಕೆ ಭಾರಿ ಆರ್ಥಿಕ ನಷ್ಟ ಉಂಟಾಗಲಿದೆ. ಈ ಅನಾವಶ್ಯಕ ಇಲಾಖಾ ಬದಲಾವಣೆಗಳಿಂದ ನ್ಯಾಯಾಲಯ, ವಕೀಲರು, ಪೊಲೀಸರು ನಾನಾ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಹಿಂದಿನ ನ್ಯಾಯಾಲಯದ ತೀರ್ಪುಗಳು ಉಲ್ಲೇಖ ಗ್ರಂಥಾಲಯಗಳು ಮತ್ತು ಇ-ಲೈಬ್ರರಿಗಳನ್ನು ಬದಲಾಯಿಸ ಬೇಕಾಗುತ್ತದೆ. ಈ ಕಾನೂನು ತಿದ್ದುಪಡಿಗಳು 1000 ನೋಟು ನಿಷೇಧ ಮತ್ತು 2000 ನೋಟು ಪರಿಚಯಿಸುವ ಮತ್ತು ನಂತರ ಅದನ್ನು ಹಿಂತೆಗೆದುಕೊಳ್ಳುವ ರೀತಿಯಲ್ಲಿ ಜನರನ್ನು ತೊಂದರೆಗೆ ಸಿಲುಕಿಸುವ ವ್ಯರ್ಥ ಕಸರತ್ತನ್ನು ಹೊರತುಪಡಿಸಿ, ಭಾರತೀಯ ಕಾನೂನು ವ್ಯವಸ್ಥೆಯಲ್ಲಿ ಯಾವುದೇ ಸಕಾರಾತ್ಮಕ ಬದಲಾವಣೆಯನ್ನು ತರುವುದಿಲ್ಲ.

ಈ ವಿಭಾಗವು ಇಂತಹ ತಾತ್ಕಾಲಿಕ ಪರಿಣಾಮಗಳು ಮಾತ್ರವಲ್ಲದೆ, ಇದು ತೀವ್ರಗಾಮಿ ನಿರ್ಧಾರಗಳನ್ನು ಸಹ ಹೊಂದಿದೆ. ತನಿಖೆಯ ಸಮಯದಲ್ಲಿ ಕಸ್ಟಡಿ ಅವಧಿಯನ್ನು ವಿಸ್ತರಿಸಲು, ಪೂರ್ವ-ವಿಚಾರಣೆಯ ಬಂಧಿತರ ಸಂಖ್ಯೆಯನ್ನು ಹೆಚ್ಚಿಸಲು, ರಾಜ್ಯಗಳಿಗೆ ಅವಕಾಶ ನೀಡುವಂತೆ ಬದಲಾವಣೆಗಳಾಗಿವೆ. ಯುಎಪಿಎ ಪ್ರಕರಣಗಳು ಸೇರಿದಂತೆ ಜಾಮೀನು ಇಲ್ಲದೆ ವಿಚಾರಣೆಗೆ ಕಾಯುತ್ತಿರುವ ಕೈದಿಗಳ ಸಂಖ್ಯೆ ಈಗಾಗಲೇ ಚರ್ಚೆಯ ವಿಷಯವಾಗಿದೆ. ಇವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲಂಘಿಸುವ ನಿಯಮಗಳಾಗಿವೆ. ಅನಿರ್ದಿಷ್ಟವಾಗಿ ಕೈದಿಗಳ ಏಕಾಂಗಿ ಬಂಧನವನ್ನು ಸೂಚಿಸಲಾಗಿದೆ. ಇದು ಆರೋಪಿಗಳಿಲ್ಲದೆ ಕ್ರಿಮಿನಲ್ ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸುವ ಷರತ್ತುಗಳನ್ನು ಒಳಗೊಂಡಿದೆ. ಈ ಎಲ್ಲ ಸಂಗತಿಗಳ ಮೇಲೆ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಗಣಿಸದಿರುವುದು ಬೇಸರದ ಸಂಗತಿ. ಇಂತಹ ದಬ್ಬಾಳಿಕೆಯ ಕಾನೂನುಗಳನ್ನು ಜನ ಪ್ರತಿರೋಧದ ಮೂಲಕ ಹಿಂದಕ್ಕೆ ಪಡೆಯಬೇಕು.

ಅನು: ಸಿಚಿ

ಕುಲಪತಿಯ ವೇಷದಲ್ಲಿ ಮಾಡಬಾರದ ಕೆಲಸ ಮಾಡಿದ್ದಕ್ಕೆ ವಿದ್ಯಾರ್ಥಿಗಳು ರಾಜ್ಯಪಾಲರನ್ನು ಪ್ರಶ್ನಿಸಿದ್ದಾರೆ: ಪಿಣರಾಯಿ ವಿಜಯನ್

ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಪ್ರತಿಭಟನೆ ನಡೆಸಿರುವ ವಿದ್ಯಾರ್ಥಿಗಳ ಬಗ್ಗೆ ಅವಮಾನಕರ ಮಾತುಗಳನ್ನು ಆಡಿದ್ದಕ್ಕೆ ಪ್ರತಿಕ್ರಿಯಿಸುತ್ತ, ಕೇರಳ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಪಿಣರಾಯಿ ವಿಜಯನ್ ಕುಲಪತಿಯ ವೇಷದಲ್ಲಿ ಮಾಡಬಾರದ ಕೆಲಸಗಳನ್ನು ಮಾಡಿದ ಕಾರಣಕ್ಕೆ ರಾಜ್ಯಪಾಲರನ್ನು ಪ್ರಶ್ನಿಸುವುದನ್ನಷ್ಟೆ ವಿದ್ಯಾರ್ಥಿಗಳು ಮಾಡಿದ್ದಾರೆ, ರಾಜ್ಯಪಾಲರು ಹೇಳಿದಂತೆ ಪ್ರತಿಭಟನಾಕಾರರು ಗೂಂಡಾಗಳೋ ಅಥವಾ ಕ್ರಿಮಿನಲ್‌ಗಳಲ್ಲ, ಅವರು ನಮ್ಮ ನೆಲದ ಭವಿಷ್ಯದ ಭರವಸೆಗಳು ಎಂದು ಹೇಳಿದ್ದಾರೆ. “ವಿದ್ಯಾರ್ಥಿಗಳ ಆರಂಭಿಕ ಪ್ರತಿಭಟನೆಗೆ ಕಿವಿಗೊಡದಿದ್ದಾಗ, ವಿದ್ಯಾರ್ಥಿಗಳು ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿದರು. ಇದು ಪ್ರಜಾಪ್ರಭುತ್ವದ ಶಕ್ತಿ ಮತ್ತು ಕೇರಳದ ಅನನ್ಯತೆಯನ್ನು ತೋರಿಸುತ್ತದೆ” ಎಂದು ಅವರು ಹೇಳಿದ್ದಾರೆ.

ಕೊಲ್ಲಂನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಪಿಣರಾಯಿ ವಿಜಯನ್, “ಅಗತ್ಯ ಭದ್ರತಾ ಕ್ರಮಗಳಿಲ್ಲದೆ ಕೋಝಿಕ್ಕೋಡ್‌ನ ಬೀದಿಗಳಲ್ಲಿ ಸಂಚರಿಸುವ ಮೂಲಕ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಕೇರಳದ ಕಾನೂನು ಮತ್ತು ಸುವ್ಯವಸ್ಥೆ ‘ಸುರಕ್ಷಿತ ಮತ್ತು ಆರೋಗ್ಯಕರ’ ಎಂದು ದೇಶಕ್ಕೆ ತೋರಿಸಿದ್ದಾರೆ. ಭಾರತದ ಇತರ ಎಷ್ಟು ರಾಜ್ಯಗಳು ಅಂತಹ ಸ್ಥಾನಗಳನ್ನು ಹೊಂದಿರುವ ಜನರು ಪೂರ್ವ ಭದ್ರತಾ ವ್ಯವಸ್ಥೆಗಳನ್ನು ಮಾಡದೆ ಬೀದಿಗಳಲ್ಲಿ ನಡೆಯಲು ಸುರಕ್ಷಿತವಾಗಿವೆ? ಇದು ಕೇರಳದ ವಿಶೇಷ. ಕೇರಳದ ಕಾನೂನು ಸುವ್ಯವಸ್ಥೆ ಸುಭದ್ರವಾಗಿದೆ ಎಂಬುದನ್ನು ಸ್ವತಃ ರಾಜ್ಯಪಾಲರು ಅರಿತುಕೊಂಡಿದ್ದಾರೆ ಮತ್ತು ತಮ್ಮ ಕಾರ್ಯಗಳ ಮೂಲಕ ದೇಶಕ್ಕೆ ಅದನ್ನೇ ತೋರಿಸಿದ್ದಾರೆ” ಎಂದು ವಿಜಯನ್ ಹೇಳಿದ್ದಾರೆ.

ಅದಾಗ್ಯೂ, ಒಂದು ರಾಜ್ಯದ ರಾಜ್ಯಪಾಲರಂತಹ ಉನ್ನತ ಸ್ಥಾನವನ್ನು ಹೊಂದಿರುವ ವ್ಯಕ್ತಿಯು ರಾಜ್ಯವು ಎಷ್ಟೇ ಸುರಕ್ಷಿತ ಮತ್ತು ಸುಭದ್ರವಾಗಿದ್ದರೂ, ತನ್ನ ಇಷ್ಟದಂತೆ ಸಂಚರಿಸಲು ಸ್ಥಾಪಿತ ವಿಧಿ–ವಿಧಾನಗಳನ್ನು(ಪ್ರೋಟೋಕಾಲ್‌ಗಳನ್ನು) ಉಲ್ಲಂಘಿಸಬಾರದು ಎಂದು ಅವರು ಹೇಳಿದ್ದಾರೆ.

“ರಾಜ್ಯಪಾಲರು ಭದ್ರತೆಯನ್ನು ನಿರಾಕರಿಸಲಿ ಅಥವಾ ಸ್ವೀಕರಿಸಲಿ, Z+ ಭದ್ರತಾ ವರ್ಗಕ್ಕೆ ಸೇರಿದವರಿಗೆ ಭದ್ರತೆಯನ್ನು ನೀಡುವುದು ಕೇರಳ ಪೊಲೀಸರ ಕರ್ತವ್ಯವಾಗಿದೆ. ರಾಜ್ಯಪಾಲರ ಇಷ್ಟ–ಅನಿಷ್ಟಗಳ ಪ್ರಕಾರ ಅಲ್ಲ, ಅವರ ಸ್ಥಾನಕ್ಕೆ ಅದನ್ನು ನೀಡಲಾಗುತ್ತದೆ. ಅದನ್ನು ಖಚಿತವಾಗಿ ನೀಡಲಾಗುವುದು” ಎಂದು ಪಿಣರಾಯಿ ಹೇಳಿದ್ದಾರೆ.

“ರಾಜ್ಯಪಾಲರು ಮಿಟಾಯಿ ತೆರುವು (ಕೋಝಿಕೋಡ್‌ನ ಎಸ್‌ಎಂ ಸ್ಟ್ರೀಟ್) ಅಂಗಡಿಗಳಿಗೆ ಭೇಟಿ ನೀಡಿದರು. ಅಲ್ಲಿನ ಸಿಹಿತಿಂಡಿಗಳನ್ನು ಸಹ ಸವಿದರು. ಒಂದರ್ಥದಲ್ಲಿ ಅವರು ಮಾಡಿದ್ದು ಒಳ್ಳೆಯದೇ ಇದು ಕೇರಳದ ಆರೋಗ್ಯಕರ ಮತ್ತು ಸುರಕ್ಷಿತ ಪರಿಸ್ಥಿತಿಗಳನ್ನು ಎತ್ತಿ ತೋರಿಸಲು ಸಹಾಯ ಮಾಡಿದೆ” ಎಂದು ಸಿಎಂ ಹೇಳಿದ್ದಾರೆ.

ಭದ್ರತಾ ಸಮಸ್ಯೆ ಉಂಟು ಮಾಡುವ ಉದ್ದೇಶದಿಂದ ರಾಜ್ಯಪಾಲರು ಪೊಲೀಸ್ ರಕ್ಷಣೆ ನಿರಾಕರಿಸಿದ್ದಾರೆಯೇ ಎಂಬ ಪ್ರಶ್ನೆಗೆ ನಗುತ್ತಾ ಉತ್ತರಿಸಿದ ಪಿಣರಾಯಿ ವಿಜಯನ್, “ರಾಜ್ಯಪಾಲರೇ ತಲೆಯಲ್ಲಿ ಏನಿದೆ ಎನ್ನುವುದನ್ನು ಅವರೇ ಹೇಳಬೇಕು” ಎಂದು ಹೇಳಿದ್ದಾರೆ. ಆದಾಗ್ಯೂ, ಕೇರಳದಲ್ಲಿ ಪ್ರತಿಭಟನೆಗಳು ಎಂದಿಗೂ ನಿಯಂತ್ರಣ ಮೀರುವ ರೀತಿಯಲ್ಲಿ ಇರುವುದಿಲ್ಲ ಎಂಬುವುದನ್ನು ರಾಜ್ಯಪಾಲರು ಅರಿತುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

“ರಾಜ್ಯಪಾಲರು ಎದುರಿಸಿದ ಪ್ರತಿಭಟನೆಗಳು ಅವರಿಂದಾಗಿ ಉಂಟಾದ ಸಮಸ್ಯೆಗಳ ಕಾರಣಕ್ಕಾಗಿದೆ. ಅದಕ್ಕಾಗಿ ಅವರು ಬೇರೆ ಕಡೆ ನೋಡುವ ಅಗತ್ಯವಿಲ್ಲ. ರಾಜ್ಯಪಾಲರು ಹೇಳಿದಂತೆ ಪ್ರತಿಭಟನಾಕಾರರು ಗೂಂಡಾಗಳೋ ಅಥವಾ ಕ್ರಿಮಿನಲ್‌ಗಳೋ ಅಲ್ಲ. ಅವರು ನಮ್ಮ ನೆಲದ ಭವಿಷ್ಯದ ಭರವಸಯಾಗಿರುವ ವಿದ್ಯಾರ್ಥಿಗಳು. ಕುಲಪತಿಯ ವೇಷದಲ್ಲಿ ಮಾಡಬಾರದ ಕೆಲಸಗಳನ್ನು ಮಾಡಿದ ಕಾರಣಕ್ಕೆ ರಾಜ್ಯಪಾಲರನ್ನು ಪ್ರಶ್ನಿಸುವುದನ್ನಷ್ಟೆ ಅವರು ಮಾಡಿದ್ದು”

ಸರ್ಕಾರ ಮತ್ತು ಅದರ ನವ ಕೇರಳ ಸದಸ್ ಕಾರ್ಯಕ್ರಮದ ವಿರುದ್ಧ ಕಾಂಗ್ರೆಸ್, ಯುವ ಕಾಂಗ್ರೆಸ್ ಮತ್ತು ಕೇರಳ ವಿದ್ಯಾರ್ಥಿ ಒಕ್ಕೂಟದ ಪ್ರತಿಭಟನೆಗಳು ಪ್ರಜಾಸತ್ತಾತ್ಮಕವಾಗಿಲ್ಲವೆ ಎಂಬ ವರದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, “ಪ್ರಜಾಸತ್ತಾತ್ಮಕವಾಗಿ ಪ್ರತಿಭಟಿಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಪ್ರತಿಭಟನೆ ಪ್ರಜಾಸತ್ತಾತ್ಮಕವಾಗಿರಬೇಕೋ ಬೇಡವೋ ಎಂಬುದನ್ನು ಅವರೇ ನಿರ್ಧರಿಸಬೇಕು. ಆದರೆ ಅವರು ಏನನ್ನು ವಿರೋಧಿಸುತ್ತಿದ್ದಾರೆ ಎಂಬುದನ್ನು ಅವರು ಹೇಳಬೇಕಿದೆ” ಎಂದು ಹೇಳಿದರು.

ಆದಾಯ ತೆರಿಗೆ ಇಲಾಖೆಯಿಂದ ಬ್ಯಾಂಕ್ ಖಾತೆಯ ಹಠಾತ್ ಸ್ಥಗಿತ; ಇನ್ನೊಂದು “ಅನ್ಯಾಯದ ಮತ್ತು ಕ್ರೂರವಾದ ಕ್ರಮ”–ನ್ಯೂಸ್‌ಕ್ಲಿಕ್

ಡಿಸೆಂಬರ್ 18 ರ ಸಂಜೆಯ ವೇಳೆಗೆ ಆದಾಯ ತೆರಿಗೆ ಇಲಾಖೆ ತಮ್ಮ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಿರುವುದರಿಂದಾಗಿ, ತಾವು ಯಾವುದೇ ಬ್ಯಾಂಕ್ ಪಾವತಿಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಸ್ವತಂತ್ರ ಸುದ್ದಿ ಪೋರ್ಟಲ್ ‘ನ್ಯೂಸ್‌ಕ್ಲಿಕ್’ ಹೇಳಿಕೆಯೊಂದರಲ್ಲಿ ತಿಳಿಸಿದೆ.

“ನಮ್ಮ ಖಾತೆಗಳನ್ನು ಸ್ಥಗಿತಗೊಳಿಸಿ ಬಿಟ್ಟಿರುವ ಈ ಕ್ರಮವು, ಫೆಬ್ರವರಿ 2021 ರಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.) ದಾಳಿಗಳೊಂದಿಗೆ ಪ್ರಾರಂಭವಾದ ನಮ್ಮ ಸುದ್ದಿ ಪೋರ್ಟಲ್‌ನ ಆಡಳಿತಾತ್ಮಕ–ಕಾನೂನಾತ್ಮಕ ಮುತ್ತಿಗೆಯ ಮುಂದುವರಿಕೆಯಾಗಿ ಕಂಡುಬರುತ್ತದೆ, ಅದನ್ನನುಸರಿಸಿ, ನಂತರ ಸೆಪ್ಟೆಂಬರ್ 2021 ರಲ್ಲಿ ಆದಾಯ ತೆರಿಗೆ ಇಲಾಖೆಯ ಸಮೀಕ್ಷೆ ಮತ್ತು ಅಕ್ಟೋಬರ್ 3, 2023 ರಂದು ದೆಹಲಿ ಪೊಲೀಸ್ ವಿಶೇಷ ಘಟಕದ ತೀವ್ರ ಕಾರ್ಯಾಚರಣೆ ನಡೆದಿದೆ. ಅಂದು ಬಂಧಿತರಾದ ನ್ಯೂಸ್‌ಕ್ಲಿಕ್ ಸಂಸ್ಥಾಪಕ ಪ್ರಬೀರ್ ಪುರ್ಕಾಯಸ್ಥ ಮತ್ತು ಆಡಳಿತಾಧಿಕಾರಿ ಅಮಿತ್ ಚಕ್ರವರ್ತಿ ಅವರು ಈಗಲೂ ಜೈಲಿನಲ್ಲಿ ಕೊಳೆಯುತ್ತಿದ್ದಾರೆ” ಎಂದು ಅದು ಹೇಳಿದೆ.

‘ನ್ಯೂಸ್‌ಕ್ಲಿಕ್’ ಸದಾ ತೆರಿಗೆ ನಿಯಮ–ನಿಬಂಧನೆಗಳು ಒಳಗೊಂಡಂತೆ ದೇಶದ ಎಲ್ಲಾ ಕಾನೂನುಗಳನ್ನು ಪಾಲಿಸಿಕೊಂಡು ಬಂದಿದೆ, ಆದ್ದರಿಂದ ಆದಾಯ ತೆರಿಗೆ ಇಲಾಖೆಯ ದಾವೆಗಳಿಗೆ ಏನೂ ಆಧಾರವಿಲ್ಲ ಎಂದಿರುವ ಹೇಳಿಕೆ, ತಮ್ಮ ಖಾತೆಗಳನ್ನು ಸ್ಥಗಿತಗೊಳಿಸುವ ಯಾವುದೇ ಸೂಚನೆ ತಮಗೆ ಬಂದಿರಲಿಲ್ಲ, ಡಿಸೆಂಬರ್ 18ರ ಸಂಜೆ ದಿನನಿತ್ಯದ ಪಾವತಿಗಳನ್ನು ಮಾಡಲು ಪ್ರಯತ್ನಿಸುತ್ತಿರುವಾಗ ಸಿಬ್ಬಂದಿಗೆ ಆಕಸ್ಮಿಕವಾಗಿ ಇದು ಕಂಡುಬಂತು ಎಂದು ತಿಳಿಸಿದೆ. ಈ ಸ್ವೇಚ್ಛಾಚಾರೀ ಕ್ರಮದಿಂದಾಗಿ ಎಲ್ಲಾ ಉದ್ಯೋಗಿಗಳ ಅಂದರೆ, ಪತ್ರಕರ್ತರು, ವೀಡಿಯೊಗ್ರಾಫರ್‌ಗಳು ಮತ್ತು ಆಡಳಿತ ಮತ್ತು ಸಹಾಯಕ ಸಿಬ್ಬಂದಿಯ ಸಂಬಳಗಳು ಮತ್ತು ಸಲಹೆಗಾರರು ಮತ್ತು ಲೇಖನಗಳನ್ನು ನೀಡುವವರ ಸಂಭಾವನೆಗಳನ್ನು ಈಗಾಗಲೇ ಅವರು ಕೆಲಸ ಮಾಡಿದ ಡಿಸೆಂಬರ್‌ನ 19 ದಿನಗಳನ್ನು ಒಳಗೊಂಡಂತೆ ಪಾವತಿ ಮಾಡಲಾಗುತ್ತಿಲ್ಲ ಎಂದು ‘ನ್ಯೂಸ್‌ಕ್ಲಿಕ್’ ಹೇಳಿದೆ.

“ವರ್ಷಾಂತ್ಯದ ಹಬ್ಬದ ಸಂದರ್ಭದಲ್ಲಿ ಈ ಹಠಾತ್ ಕ್ರಮವು ನಮ್ಮ ಎಲ್ಲಾ ಉದ್ಯೋಗಿಗಳಿಗೆ ಆಘಾತವನ್ನುಂಟು ಮಾಡಿದೆ. ನಮ್ಮ ಖಾತೆಗಳನ್ನು ಯಾವಾಗ ಬಳಸಲು ಸಾಧ್ಯವಾಗಬಹುದು ಎಂಬುದರ ಕುರಿತು ಯಾವುದೇ ಸೂಚನೆ ಇಲ್ಲದಿರುವುದರಿಂದ, ಎಲ್ಲಾ ಉದ್ಯೋಗಿಗಳು ಮತ್ತು ಅವರ ಕುಟುಂಬಗಳ, ವಿಶೇಷವಾಗಿ ಸಂಬಳದ ಮೇಲೆಯೇ ಸಂಪೂರ್ಣವಾಗಿ ಅವಲಂಬಿತವಾಗಿರುವ ಕುಟುಂಬಗಳ ಮನಸ್ಸಿನಲ್ಲಿ ಅನಿಶ್ಚಿತತೆಯಿದೆ” ಎಂದಿರುವ ‘ನ್ಯೂಸ್‌ಕ್ಲಿಕ್’, ತಮ್ಮ ಕಾನೂನು ಸಲಹೆಗಾರರು ಬೆಳವಣಿಗೆಗಳನ್ನು ಪರಿಶೀಲಿಸುತ್ತಿದ್ದಾರೆ, ಈ ಅನ್ಯಾಯದ ಮತ್ತು ಕ್ರೂರ ಕ್ರಮದ ವಿರುದ್ಧ ಕಾನೂನು ಮೇಲ್ಮನವಿ ಕ್ರಮಗಳನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು ಎಂದು ಹೇಳಿದೆ.

“ನ್ಯೂಸ್‌ಕ್ಲಿಕ್ ಮತ್ತು ಅದರ ಧೈರ್ಯಶಾಲಿ ಪತ್ರಕರ್ತರು ಸಾಧ್ಯವಾದಷ್ಟು ಕಾಲ ತಮ್ಮ ಕೆಲಸವನ್ನು ಮುಂದುವರಿಸಲು ಬದ್ಧರಾಗಿದ್ದಾರೆ. ಎಂದಿನಂತೆ, ನಮಗೆ ಸೌಹಾರ್ದವನ್ನು ಮುಂದುವರೆಸಬೇಕೆಂದು ಮನವಿ ಮಾಡುತ್ತೇವೆ, ಇದು ನಮಗೆ ಬೆಂಬಲ ಮತ್ತು ಪ್ರೋತ್ಸಾಹದ ಮೂಲವಾಗಿದೆ” ಎಂದು ಅದು ಹೇಳಿದೆ.

ಸಂವಿಧಾನವನ್ನು ‘ಶ್ರೀಮಂತ’ ಗೊಳಿಸುತ್ತಿರುವ ಕೇರಳ ರಾಜ್ಯಪಾಲರು!

ಕೇರಳದ ರಾಜಭವನ ಹೊರಡಿಸಿದ ಒಂದು ಪತ್ರಿಕಾ ಹೇಳಿಕೆಯಲ್ಲಿ, ಮಾನ್ಯ ರಾಜ್ಯಪಾಲರು ತಂಗಿರುವ ವಿಶ್ವವಿದ್ಯಾಲಯ ಅತಿಥಿ ಗೃಹದ ಹೊರಗೆ, ವಿವಿಯ ಆವರಣದೊಳಗೆ ಕಪ್ಪು ಬ್ಯಾನರುಗಳನ್ನು ಕಟ್ಟಿರುವುದು ಮತ್ತು ಪೋಸ್ಟರುಗಳನ್ನು ಪ್ರದರ್ಶಿಸಿರುವುದು ಮುಖ್ಯಮಂತ್ರಿಯ ನಿರ್ದೇಶನವಿಲ್ಲದೆ ಸಾಧ್ಯವಿಲ್ಲ, “ಇದು ರಾಜ್ಯದಲ್ಲಿ ಸಾಂವಿಧಾನಿಕ ವ್ಯವಸ್ಥೆ ಕುಸಿಯಲಾರಂಭಿಸಿದೆ ಎನ್ನುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಂತಹ ಮುಖ್ಯಮಂತ್ರಿಗಳ ಉದ್ದೇಶಪೂರ್ವಕವಾದ ಕ್ರಮಗಳು ಸಾಂವಿಧಾನಿಕ ವ್ಯವಸ್ಥೆ ಮುರಿದು ಬೀಳುವುದನ್ನು ತ್ವರೆಗೊಳಿಸುತ್ತವೆ ಎಂದು ರಾಜ್ಯಪಾಲರು ಅಭಿಪ್ರಾಯ ಪಡುತ್ತಾರೆ” ಎಂದು ತಿಳಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸುತ್ತ, ಭಾರತೀಯ ಸಂವಿಧಾನವನ್ನು ಕೇರಳದ ರಾಜ್ಯಪಾಲರು ಶ್ರೀಮಂತಗೊಳಿಸುತ್ತಿದ್ದಾರೆ, ಕಪ್ಪು ಬ್ಯಾನರುಗಳು ಮತ್ತು ಪೋಸ್ಟರುಗಳನ್ನೂ ಅವರು ಸಾಂವಿಧಾನಿಕ ವ್ಯವಸ್ಥೆಯ ವಿಫಲತೆ ಎಂದು ಸೇರಿಸ ಬಯಸುತ್ತಾರೆ ಎಂದು ಸಿಪಿಐ(ಎಂ) ಸಂಸತ್ ಸದಸ್ಯ ಜಾನ್ ಬ್ರಿಟ್ಟಾಸ್ ವ್ಯಂಗ್ಯವಾಡಿದ್ದಾರೆ. ಇಂತಹ ಗವರ್ನರ್ ಜನರಲ್‌ಗಳಿಂದ ದೇಶವನ್ನು ರಕ್ಷಿಸುವವರು ಯಾರು ಎಂದು ಪ್ರಶ್ನಿಸಿದ್ದಾರೆ.

100 ಕುಟುಂಬಗಳಿಗೆ ಆದಾಯ ವಂಚನೆ: ಆರು ಪತ್ರಕರ್ತ ಸಂಸ್ಥೆಗಳ ಖಂಡನೆ

ಪ್ರೆಸ್ ಕ್ಲಬ್ ಆಫ್ ಇಂಡಿಯಾ, ಇಂಡಿಯನ್ ವುಮೆನ್ಸ್ ಪ್ರೆಸ್ ಕೋರ್, ದಿಲ್ಲಿ ಪತ್ರಕರ್ತರ ಸಂಘ, ಪ್ರೆಸ್ ಅಸೋಸಿಯೇಷನ್, ಕೇರಳ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಕಾರ್ಯನಿರತ ಸುದ್ದಿ ಕ್ಯಾಮರಾಮನ್‌ಗಳ ಸಂಘ–ಈ ಆರು ಪತ್ರಕರ್ತರ ಸಂಘಟನೆಗಳು ಒಂದು ಜಂಟಿ ಹೇಳಿಕೆಯಲ್ಲಿ ನ್ಯೂಸ್‌ಕ್ಲಿಕ್ ಸುದ್ದಿ ಪೋರ್ಟಲ್‌ನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿ ಆದಾಯ ತೆರಿಗೆ ಇಲಾಖೆ, ಸುಮಾರು ನೂರು ಮಾಧ್ಯಮ ವ್ಯಕ್ತಿಗಳು ಮತ್ತು ಅವರ ಕುಟುಂಬಗಳನ್ನು ಅವರ ಸ್ಥಿರ ಆದಾಯ ಮೂಲದಿಂದ ವಂಚಿಸಿದ್ದಾರೆ ಎಂದು ಖಂಡಿಸಿವೆ.

ಆದಾಯ ತೆರಿಗೆ ಇಲಾಕೆಯ ಈ ಕ್ರಮ ನೈಸರ್ಗಿಕ ನ್ಯಾಯ ಮತ್ತು ಕಾರ್ಮಿಕ ಕಾನೂನುಗಳ ಮೂಲ ವಿಧಿ–ವಿಧಾನಗಳನ್ನೇ ಉಲ್ಲಂಘಿಸುತ್ತದೆ. ತಾನು ಸದಾ ಎಲ್ಲ ತೆರಿಗೆ ನಿಬಂಧನೆಗಳನ್ನು ಪಾಲಿಸಿರುವುದರಿಂದ ಖಾತೆಗಳನ್ನು ಸ್ಥಗಿತಗೊಳಿಸುವುದಕ್ಕೆ ಯಾವುದೇ ಆಧಾರವಿಲ್ಲ, ಅಲ್ಲದೆ ಇದನ್ನು ಪೂರ್ವಸೂಚನೆಯಿಲ್ಲದೆ ಮಾಡಲಾಗಿದೆ ಎಂದು ನ್ಯೂಸ್ ಕ್ಲಿಕ್ ಹೇಳಿರುವುದನ್ನು ಈ ಜಂಟಿ ಹೇಳಿಕೆ ಗಮನಕ್ಕೆ ತಂದಿದೆ.

ದಾಳಿಗಳು, ಜಾಮೀನು ರಹಿತ ಕಠಿಣ ಷರತ್ತುಗಳ ಅಡಿಯಲ್ಲಿ ಬಂಧನಗಳು, ಪೂರ್ವ ಸೂಚನೆಯಿಲ್ಲದೆ ಖಾತೆಗಳನ್ನು ಸ್ಥಗಿತಗೊಳಿಸುವುದು, ಯಾವುದೇ ಮಾರ್ಗಸೂಚಿಗಳಿಲ್ಲದೆ ಸಾಧನಗಳನ್ನು ವಶಪಡಿಸಿಕೊಳ್ಳುವದು ಮುಂತಾದ ಕಿರುಕುಳಗಳನ್ನು ತಕ್ಷಣ ನಿಲ್ಲಿಸಬೇಕು ಎಂದು ಜಂಟಿ ಹೇಳಿಕೆ ಆಗ್ರಹಿಸಿದೆ.

ನ್ಯೂಸ್‌ಕ್ಲಿಕ್ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಮತ್ತು ಆಡಳಿತಾಧಿಕಾರಿ ಅಮಿತ್ ಚಕ್ರವರ್ತಿ ಅಕ್ಟೋಬರ್‌ನಿಂದ ಬಂಧನದಲ್ಲಿದ್ದಾರೆ. ಇಂತಹ ಬಂಧನಗಳು ಅಪವಾದಗಳಾಗಿರುವ ಬದಲು ಸಾಮಾನ್ಯ ಸಂಗತಿಯಾಗುತ್ತಿದೆ. ಪತ್ರಕರ್ತರ, ಲೇಖನ ಕೊಡುವವರ ಮೊಬೈಲ್, ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅವನ್ನು ಯಾವಾಗ ಹಿಂದಿರುಗಿಸುತ್ತಾರೆ, ಹಿಂದಿರುಗಿಸಿದಾಗ ಅವುಗಳು ಉಪಯೋಗಿಸುವ ಸ್ಥಿತಿಯಲ್ಲಿರುತ್ತವೆಯೋ ಎಂಬ ಭರವಸೆ ಇಲ್ಲವಾದ್ದರಿಂದ ಅವರೆಲ್ಲ ತಮ್ಮ ಜೀವನಾಧಾರವನ್ನು ಮುಂದುವರೆಸಲು ಹೊಸ ಸಾಧನೆಗಳನ್ನೂ ಖರೀದಿಸಬೇಕಾಗುತ್ತದೆ. ಸಿಬ್ಬಂದಿಯನ್ನು, ಪತ್ರಕರ್ತರನ್ನು ತನಿಖೆಯ ನೆಪದಲ್ಲಿ ಆಗಾಗ ಕರೆಸಿಕೊಳ್ಳುವುದು ಇನ್ನೊಂದು ಬಗೆಯ ಕಿರುಕುಳ. ಇವನ್ನೆಲ್ಲ ತಕ್ಷಣವೇ ನಿಲ್ಲಿಸಬೇಕು ಎಂದು ಜಂಟಿ ಹೇಳಿಕೆ ಆಗ್ರಹಿಸಿದೆ.

ಸ್ವತಂತ್ರ ಮಾಧ್ಯಮ ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ, ಹಾಗೆಯೇ ಅದರ ಕತ್ತು ಹಿಸುಕುವುದು, ನಿರುತ್ಸಾಹಗೊಳಿಸುವುದು ತದ್ವಿರುದ್ಧ ಪರಿಣಾಮವನ್ನು ಬೀರುತ್ತದೆ ಎಂದು ಈ ಆರು ಪತ್ರಕರ್ತರ ಸಂಘಟನೆಗಳು ಹೇಳಿವೆ.

ಕೇರಳ ರಾಜ್ಯಪಾಲರ ವಿಕೃತ ಕ್ರಮಗಳು

ಪ್ರಕಾಶ್ ಕಾರತ್

ಪ್ರತಿಪಕ್ಷಗಳ ಆಡಳಿತವಿರುವ ರಾಜ್ಯಗಳ ರಾಜ್ಯಪಾಲರು ಕೇಂದ್ರದಲ್ಲಿ ಆಡಳಿತ ನಡೆಸುವ ಪಕ್ಷಕ್ಕೆ ತಮ್ಮ ರಾಜಕೀಯ ಕಾರ್ಯಸೂಚಿಯನ್ನು ಮುಂದಿಟ್ಟುಕೊಂಡು ಸಂಬಂಧಿಸಿದ ರಾಜ್ಯ ಸರ್ಕಾರಕ್ಕೆ ತನ್ನ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಪೂರೈಸಲು ತೊಂದರೆಗಳನ್ನು ಸೃಷ್ಟಿಸುವ ಸಾಧನಗಳಾಗುತ್ತಿದ್ದಾರೆ.

ಪ್ರಸ್ತುತ, ಇಲ್ಲಿ ಕೇರಳದ ರಾಜ್ಯ ಪಾಲರಾದ, ಆರಿಫ್ ಮೊಹಮ್ಮದ್ ಖಾನ್ ಅವರ ಪಾತ್ರವು ವಿಶೇಷವಾಗಿ ವಿಚ್ಛಿದ್ರಕಾರಕ ಮತ್ತು ಅಸಹ್ಯಕರವಾಗಿದೆ. ಅವರು ಒಪ್ಪಿಗೆ ನೀಡದೆ ಅಥವಾ ಮರುಪರಿಶೀಲನೆಗಾಗಿ ವಿಧಾನಸಭೆಗೆ ಮಸೂದೆಗಳನ್ನು ಹಿಂತಿರುಗಿಸದೆ ರಾಜ್ಯ ಶಾಸಕಾಂಗವು ಅಂಗೀಕರಿಸಿದ 8 ಮಸೂದೆಗಳ ಮೇಲೆ ಕುಳಿತು ಕೊಂಡಿದ್ದಾರೆ. ಅದರಲ್ಲಿ, ಎರಡು ಮಸೂದೆಗಳು ಕಳೆದ ಎರಡು ವರ್ಷಗಳಿಂದ ಆ ವ್ಯಕ್ತಿಯ ಬಳಿಯೇ ಇಟ್ಟುಕೊಂಡಿದ್ದಾರೆ.

ಪಂಜಾಬ್ ರಾಜ್ಯಪಾಲರ ವಿರುದ್ಧ ಪಂಜಾಬ್ ರಾಜ್ಯ ಸರ್ಕಾರ ಸಲ್ಲಿಸಿದ ಅರ್ಜಿಯಲ್ಲಿ ಸುಪ್ರೀಂ ಕೋರ್ಟ್ ಈ ರೀತಿ ಸ್ಪಷ್ಟಪಡಿಸಿದೆ :, ರಾಜ್ಯಪಾಲರಿಗೆ ಹಾಗೆ ಮಾಡುವ ಹಕ್ಕು ಇಲ್ಲ ಎಂದು ವಿಧಾನಸಭೆಯಲ್ಲಿ ಅಂಗೀಕರಿಸಿದ ಮಸೂದೆಗಳನ್ನು ಹಾಗೆ ಸುಮ್ಮನೆ, ತಮ್ಮ ಬಳಿ ಹಿಡಿದಿಟ್ಟುಕೊಳ್ಳುವ ಯಾವುದೇ ಹಕ್ಕುಗಳು ಇಲ್ಲವೆಂದಿದೆ. ಇದನ್ನು ಗಮನಿಸಬೇಕು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕೇರಳ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ಕೈಗೆತ್ತಿಕೊಂಡಾಗ, ನ್ಯಾಯಾಲಯವು ರಾಜಭವನದ ಕಾರ್ಯದರ್ಶಿಗೆ ವರದಿ ಸಲ್ಲಿಸುವಂತೆ ಸೂಚಿಸಿತು. ಆಗ ರಾಜ್ಯಪಾಲರು ವಿಧೇಯಕಗಳ ಪೈಕಿ ಒಂದು ವಿಧೇಯಕಕ್ಕೆ ಒಪ್ಪಿಗೆ ನೀಡಿದ್ದಾರೆ. ಉಳಿದ 7 ಮಸೂದೆಗಳನ್ನು ರಾಷ್ಟ್ರಪತಿಗಳ ಪರಿಗಣನೆಗೆ ಸೂಚಿಸಿದ್ದಾರೆ. ಸಂವಿಧಾನದ 300ನೇ ವಿಧಿಯಡಿಯಲ್ಲಿ ಕೆಲವು ವಿಧೇಯಕಗಳನ್ನು ಮಾತ್ರ ರಾಷ್ಟ್ರಪತಿಗಳ ಗಮನಕ್ಕೆ ತರಬಹುದಾದ್ದರಿಂದ ಇದೊಂದು ವಂಚಕ ಕ್ರಮವಾಗಿದೆ.

ಈ ಮಸೂದೆಗಳನ್ನು ರಾಷ್ಟ್ರಪತಿಗಳಿಗೆ ಉಲ್ಲೇಖಿಸುವ ಮೂಲಕ, ಅಂತಹ ವಿಷಯಗಳ ವಿಲೇವಾರಿಗೆ ಸಂವಿಧಾನದಲ್ಲಿ ಯಾವುದೇ ಕಾಲಾವಧಿಯನ್ನು ನಿಗದಿಪಡಿಸದ ಕಾರಣ ಅವುಗಳನ್ನು ಅನಿರ್ದಿಷ್ಟವಾಗಿ ಸ್ಥಗಿತಗೊಳಿಸಲಾಗಿದೆ.

ವಿಧಾನಸಭೆಯ ಶಾಸಕಾಂಗ ರಚನೆಯ ಅಧಿಕಾರಕ್ಕೆ ಅಡ್ಡಿಪಡಿಸುವುದರ ಹೊರತಾಗಿ, ಖಾನ್ ಅವರು ಈಗ ವಿಶ್ವವಿದ್ಯಾಲಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಗಳಲ್ಲಿ, ಮೂಗು ತೂರಿಸುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ರಾಜ್ಯ ವಿಶ್ವವಿದ್ಯಾಲಯಗಳ ಕುಲಪತಿಯಾಗಿ, ರಾಜ್ಯಪಾಲರು ವಿಶ್ವವಿದ್ಯಾಲಯದ ಸೆನೆಟ್‌ನಲ್ಲಿ ನಿರ್ದಿಷ್ಟ ಸಂಖ್ಯೆಯ ನಾಮನಿರ್ದೇಶಿತ ಸ್ಥಾನಗಳನ್ನು ಭರ್ತಿ



ಮಾಡಬೇಕು. ಇದರಲ್ಲಿ ಬಿಜೆಪಿ–ಆರ್.ಎಸ್.ಎಸ್. ವ್ಯಕ್ತಿಗಳನ್ನು ವಿಶ್ವವಿದ್ಯಾಲಯದ ಸೆನೆಟ್‌ಗೆ ತುಂಬುವ ನಿರ್ಲಜ್ಜ ಕೃತ್ಯೆಯನ್ನು ಕೈಗೊಂಡಿದ್ದಾರೆ.

ಕೇರಳ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ, 23 ನಾಮನಿರ್ದೇಶಿತ ಸದಸ್ಯರಲ್ಲಿ, 17 ಮಂದಿಯನ್ನು ಕುಲಪತಿಗಳು ಮತ್ತು 6 ಮಂದಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶನ ಗೊಂಡಿದ್ದಾರೆ. ಆ 17 ನಾಮನಿರ್ದೇಶಿತ ಸ್ಥಾನಗಳಲ್ಲಿ ಇಬ್ಬರು ಪ್ರೌಢಶಾಲಾ ಮುಖ್ಯ ಶಿಕ್ಷಕರು, ನಾಲ್ಕು ಪ್ರತಿಭಾವಂತ ವಿದ್ಯಾರ್ಥಿಗಳು ಮತ್ತು ಸಂಶೋಧನಾ ಸಂಸ್ಥೆಗಳ ಪ್ರತಿನಿಧಿಗಳು, ಸಾಂಸ್ಕೃತಿಕ ಸಂಸ್ಥೆಗಳು, ಮಾಧ್ಯಮಗಳು ಇತ್ಯಾದಿ. ಸಾಮಾನ್ಯವಾಗಿ, ನಾಮನಿರ್ದೇಶನದ ಪ್ರಸ್ತಾವನೆಗಳನ್ನು ವಿಶ್ವವಿದ್ಯಾನಿಲಯವು ರವಾನಿಸುತ್ತದೆ, ನಂತರ ಕುಲಪತಿಗಳು ವಿಶ್ವವಿದ್ಯಾಲಯ ಕಳುಹಿಸಿರುವ ಪಟ್ಟಿಯನ್ನು ಅನುಮೋದಿಸುತ್ತಾರೆ. ಇದು ವಿಶೇಷವಾಗಿ ವಿದ್ಯಾರ್ಥಿಗಳ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ, ಅವರ ಅರ್ಹತೆಯ ಮೇಲೆ ವಿಶ್ವವಿದ್ಯಾಲಯದಿಂದ ಗುರುತಿಸಲ್ಪಟ್ಟಿದೆ.

ಆದಾಗ್ಯೂ, ಈ ನಿದರ್ಶನದಲ್ಲಿ ಕುಲಪತಿಯಾದ ರಾಜ್ಯಪಾಲರು, ಎಲ್ಲಾ ಸಂಪ್ರದಾಯಗಳು ಮತ್ತು ಪ್ರಜಾಪ್ರಭುತ್ವದ ಮಾನದಂಡಗಳನ್ನು ಉಲ್ಲಂಘಿಸಿದ್ದಾರೆ. ವಿಶ್ವವಿದ್ಯಾಲಯ ಪ್ರಸ್ತಾಪಿಸಿದ ಇಬ್ಬರ ಹೆಸರನ್ನು ಹೊರತು ಪಡಿಸಿ, ಉಳಿದೆಲ್ಲವನ್ನು ತಿರಸ್ಕರಿಸಿರುವ ರಾಜ್ಯಪಾಲರು, ಎಲ್ಲಾ ಸೆನೆಟ್ ಸ್ಥಾನಗಳಿಗೆ ಸಂಘ ಪರಿವಾರಕ್ಕೆ ಸೇರಿದ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಿದ್ದಾರೆ. ರಾಜ್ಯಪಾಲರಿಂದ ನಾಮನಿರ್ದೇಶನಗೊಂಡವರಲ್ಲಿ ಆರ್.ಎಸ್.ಎಸ್. 'ಅಧ್ಯಾಪಕ ಪರಿಷತ್'ನ ಪದಾಧಿಕಾರಿಗಳಾಗಿರುವ ಶಿಕ್ಷಕರ ಹೆಸರುಗಳು ಸೇರಿಕೊಂಡಿವೆ. ಪತ್ರಕರ್ತರು, ಕ್ರೀಡೆ, ವಕೀಲರು ಮತ್ತು ಸಾಂಸ್ಕೃತಿಕ ವ್ಯವಹಾರಗಳ ವಿಭಾಗಗಳಲ್ಲಿಯೂ ಆರ್.ಎಸ್.ಎಸ್. ಅಥವಾ ಬಿಜೆಪಿ ಪಕ್ಷದ ಪುರುಷರು ಪುಟ 10 ಕ್ಕೆ

ಸಂಸತ್ತಿನ ನಾಶದ ಯತ್ನ

ಎಂಪಿಗಳ ಅಮಾನತಿನ ಅಪಶಕುನ

ಲೋಕಸಭೆ ಮತ್ತು ರಾಜ್ಯಸಭೆಯ ಅಭೂತಪೂರ್ವ 146 ಪ್ರತಿಪಕ್ಷ ಸದಸ್ಯರನ್ನು ಸಂಸತ್ತಿನ ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಲಾಗಿದೆ. ಬಿಜೆಡಿ, ವೈಎಸ್‌ಆರ್‌ಸಿಪಿ ಮತ್ತು ಎಐಎಡಿಎಂಕೆಯಂಥ 'ನಿಷ್ಠ' ಪ್ರತಿಪಕ್ಷ ಸಂಸದರನ್ನು ಹೊರತುಪಡಿಸಿದರೆ ಡಿಸೆಂಬರ್ 22ರ ವೇಳೆಗೆ ಸಂಸತ್ತಿನ ಯಾವುದೇ ಸದನದಲ್ಲಿ ಪ್ರತಿಪಕ್ಷಗಳ ಯಾವುದೇ ಸದಸ್ಯರು ಇರುವುದಿಲ್ಲ.

ಈ ಅಮಾನತುಗಳನ್ನು ಯಾಕಾಗಿ ಮಾಡಲಾಯಿತು ಎನ್ನುವುದನ್ನು ನೆನಪಿಸಿಕೊಳ್ಳುವುದು ಅಗತ್ಯ.

ಡಿಸೆಂಬರ್ 13ರಂದು ಲೋಕಸಭೆಯ ಪ್ರೇಕ್ಷಕರ ಗ್ಯಾಲರಿಯಿಂದ ಇಬ್ಬರು ವ್ಯಕ್ತಿಗಳು ಕೆಳಗೆ ಹಾರಿ ಹಳದಿ ಹೊಗೆ ಸೂಸುವ ಡಬ್ಬಿಗಳನ್ನು ಎಸೆದಿದ್ದರು. ಈ ಭದ್ರತಾ ಲೋಪದ ಬಗ್ಗೆ ಗೃಹ ಸಚಿವರು ಹೇಳಿಕೆ ನೀಡಬೇಕು ಹಾಗೂ ನಂತರ ಆ ವಿಚಾರದಲ್ಲಿ ಚರ್ಚೆ ನಡೆಯಬೇಕು ಎಂಬುದು ಪ್ರತಿಪಕ್ಷಗಳ ಆಗ್ರಹವಾಗಿತ್ತು. ಇದೊಂದು ನ್ಯಾಯಸಮ್ಮತ ಹಾಗೂ ಸಿಂಧುವಾದ ಬೇಡಿಕೆಯಾಗಿತ್ತು. ಯಾಕೆಂದರೆ, ಭದ್ರತೆಯ ಗಂಭೀರ ಉಲ್ಲಂಘನೆ ಆಗಿರುವ ಬಗ್ಗೆ ಹೊಣೆಗಾರರು ಯಾರೆಂಬುದನ್ನು ತಿಳಿಯುವುದು ಎಂಪಿಗಳ ಹಕ್ಕು ಮತ್ತು ಬಾಧ್ಯತೆಯೂ ಆಗಿದೆ.

ಗೃಹ ಮಂತ್ರಿ ಈ ಬೇಡಿಕೆಯನ್ನು ಈಡೇರಿಸಲಿಲ್ಲ. ಆದರೆ ಇದೊಂದು ಮಾಧ್ಯಮಗಳ ಸೃಷ್ಟಿಯಾಗಿದೆ ಎಂದು ಘಟನೆಯ ಬೆನ್ನಲ್ಲೇ ಅವರು ಹೇಳಿದರು. ಇದು ಸಂಸದರನ್ನು ಇನ್ನಷ್ಟು ಕೆರಳಿಸಿತು. ಡಿಸೆಂಬರ್ 18ರಂದು ಲೋಕಸಭೆಯ 13 ಹಾಗೂ ರಾಜ್ಯಸಭೆಯ ಒಬ್ಬ ಎಂಪಿಯನ್ನು ಈ ಬೇಡಿಕೆಯನ್ನು ಮಂಡಿಸಿದ್ದಕ್ಕಾಗಿ ಅಮಾನತು ಮಾಡಲಾಯಿತು. ಅದಾದ ನಂತರ ಅಮಾನತು ಪರ್ವ ಹಲವು ಸುತ್ತುಗಳಲ್ಲಿ ಮುಂದುವರಿಯಿತು.

ಪ್ರತಿಪಕ್ಷಗಳ ಬಗ್ಗೆ ಸರ್ಕಾರದ ಈ ದರ್ಪದ ನಡೆ ಮೋದಿ ಸರ್ಕಾರದ ಧೋರಣೆಗೆ ಅನುಗುಣವಾಗಿಯೇ ಇದೆ. ಯಾಕೆಂದರೆ ಪ್ರತಿಪಕ್ಷಗಳು ಮತ್ತು ಸಂಸದೀಯ ನಿಯಮಗಳ ಕುರಿತು ಸರ್ಕಾರ ಪದೇ ಪದೇ ಸಂಪೂರ್ಣ ಅವಹೇಳನಕಾರಿಯಾಗಿ ನಡೆದುಕೊಳ್ಳುತ್ತಾ ಬಂದಿದೆ. ಸಭಾಧ್ಯಕ್ಷರುಗಳು ಆಡಳಿತ ಪಕ್ಷದ ಕುಮ್ಮಕ್ಕಿನಿಂದ ಅಮಾನತು ಮಾಡುವುದು ಕಳೆದ ಕೆಲವು ವರ್ಷಗಳಿಂದ ತೀವ್ರ ರೀತಿಯಲ್ಲಿ ಹೆಚ್ಚಾಗಿದೆ. 2014ರಿಂದೀಚೆಗೆ ಈ ಅಧಿವೇಶನದವರೆಗೆ ಬೇರೆ ಬೇರೆ ಸಮಯದಲ್ಲಿ 92 ಸಂಸದರನ್ನು ಅಮಾನತು ಮಾಡಲಾಗಿದೆ. ಈ ಪೈಕಿ 23 ಮಂದಿಯನ್ನು ಕಳೆದ ವರ್ಷದ ಮುಂಗಾರು ಅಧಿವೇಶನದಲ್ಲಿ ಅಮಾನತುಗೊಳಿಸಲಾಗಿತ್ತು. ಆ ಸಂಖ್ಯೆ ಈಗ ಬಹು ಪಟ್ಟು ಹೆಚ್ಚಿದೆ.

ಸರಕಾರ ಈಗ ಯಾವುದೇ ಸೂಕ್ತ ಚರ್ಚೆಯಿಲ್ಲದೇ ಹಾಗೂ ಪ್ರತಿಪಕ್ಷಗಳ ಅಭಿಪ್ರಾಯಗಳನ್ನು ತಿಳಿಯದೇ ಮೂರು ಕ್ರಿಮಿನಲ್ ಕಾನೂನು ಮಸೂದೆಗಳ ಸಹಿತ ಪ್ರಮುಖ ಕಾನೂನುಗಳನ್ನು ಅಂಗೀಕರಿಸಲಿದೆ.

ಎಂಪಿಯೊಬ್ಬರನ್ನು ಅಮಾನತಿನ ಮೂಲಕ ಸಂಸತ್ತಿನಿಂದ ತೆಗೆದು ಹಾಕುವುದು ಆ ಸದಸ್ಯರ ದನಿಯನ್ನು ಅಡಗಿಸಿದಂತೆ ಮಾತ್ರವಲ್ಲ, ಅವರನ್ನು ತಮ್ಮ ಪ್ರತಿನಿಧಿಯಾಗಿ ಆರಿಸಿ ಕಳಿಸಿದ ಜನರನ್ನು ಅವರ ಅಭಿಪ್ರಾಯಗಳನ್ನು ಆಲಿಸುವ ಹಾಗೂ ಪ್ರಶ್ನೆಗಳನ್ನು ಕೇಳುವುದರಿಂದ ವಂಚಿಸಿದಂತೆಯೂ ಆಗುತ್ತದೆ.



ಪ್ರತಿಪಕ್ಷದ ಮೇಲಿನ ದಾಳಿಯು ಸಂಸತ್ತನ್ನು ಅವಮಾನಿಸುವ ಹಾಗೂ ದಮನಿಸುವ ಒಟ್ಟಾರೆ ಪ್ರಯತ್ನಗಳ ಒಂದು ಭಾಗವಾಗಿದೆ ಅಷ್ಟೇ. ಸಂಸದೀಯ ಸಮಿತಿಗಳ ಪರಿಶೀಲನೆಯಿಲ್ಲದೆ ಆತುರಾತುರವಾಗಿ ಕಾನೂನುಗಳನ್ನು ಅಂಗೀಕರಿಸಿದ್ದನ್ನು ನಾವು ನೋಡಿದ್ದೇವೆ. ಸಂಸದೀಯ ಸಮಿತಿಗಳಲ್ಲಿ ಕೂಡ ಚರ್ಚೆಗಳು ಮತ್ತು ಭಿನ್ನಮತದ ದನಿಗಳನ್ನು ದಮನಿಸುವ ಪ್ರಯತ್ನಗಳು ನಡೆದಿವೆ. ಸಂಸತ್ತಿನ ಬೈಠಕ್‌ನ ಸಂಖ್ಯೆ ದಿನಕಳೆದಂತೆ ಕಡಿಮೆಯಾಗುತ್ತಾ ಬಂದಿದೆ. ಬಹುತೇಕ ಸಂದರ್ಭಗಳಲ್ಲಿ ಸಂಸತ್ತಿನ ಅಧಿವೇಶನಕ್ಕೆ ಹಾಜರಾಗುವುದು ಅಗತ್ಯ ಎಂಬುದನ್ನು ಸ್ವತಃ ಪ್ರಧಾನಿಯೇ ಭಾವಿಸಿದಂತಿಲ್ಲ.

ಹೊಸ ಸಂಸತ್ ಭವನದ ಕಟ್ಟಡದ ಉದ್ಘಾಟನೆಯು ಸಂಸತ್ತಿಗೆ ಅಪಶಕುನದಂತೆ ಆಗಿದೆ. ಇದು ಕಟ್ಟಡದ ಬದಲಾವಣೆ ಮಾತ್ರವಲ್ಲ; ಸಂಸತ್ತಿನ ಜೀವನ ಮತ್ತು ಸಾರವನ್ನು ಕೂಡ ಹೊಸ ಕಟ್ಟಡದಲ್ಲಿ ಹೊಸಕಿ ಹಾಕಲಾಗಿದೆ. ಕಟ್ಟಡದ ಮೇಲ್ಭಾಗದಲ್ಲಿರುವ ಘರ್ಜಿಸುವ ಸಿಂಹ ಮತ್ತು ಲೋಕಸಭೆ ಚೇಂಬರ್‌ನೊಳಗೆ ಸೆಂಗೋಲ್‌ನ ಅಪಹಾಸ್ಯಕರ ಪ್ರತಿಷ್ಠಾಪನೆಯು ಸಂಸತ್ತಿನ ಅನುಬಂಧವನ್ನು ಆಮೂಲಾಗ್ರವಾಗಿ ಬದಲಾಯಿಸಿದೆ ಮಾತ್ರವಲ್ಲದೆ ಸಂಸತ್ತನ್ನು ಆಳುವ ಪಕ್ಷದ ರಬ್ಬರ್‌ಸ್ಟಾಂಪ್ ಆಗಿ ಪರಿವರ್ತಿಸುವ ಯತ್ನದ ಭಾಗವಾಗಿದೆ. ಸ್ವತಃ ಸಂಸತ್ತನ್ನೇ ನಾಶ ಮಾಡಲಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ– ಸಂಸದೀಯ ಪ್ರಜಾಪ್ರಭುತ್ವವನ್ನು ಚುನಾವಣಾ ಸರ್ವಾಧಿಕಾರವಾಗಿ ಪರಿವರ್ತಿಸಲಾಗುತ್ತಿದೆ.

ಅನು: ವಿಶ್ವ





ದಕ್ಷಿಣ ಕನ್ನಡ: ಜನಪರ ಅಭಿವೃದ್ಧಿಯ ಪರ್ಯಾಯಕ್ಕಾಗಿ ಜನಾಂದೋಲನ

ಲೋಕಸಭೆ ಚುನಾವಣೆಗೆ ಬಿಜೆಪಿ ಪರಿವಾರ ವಿವಿಧ ಮುಖವಾಡಗಳೊಂದಿಗೆ ಸಿದ್ದತೆಗಳನ್ನು ಆರಂಭಿಸಿರುವ ಸಂದರ್ಭದಲ್ಲೆ, ಅದರ ಶಕ್ತಿಕೇಂದ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷ ವ್ಯಾಪಕ ಪ್ರಚಾರದೊಂದಿಗೆ ನಡೆಸಿದ "ಜಿಲ್ಲಾಧಿಕಾರಿ ಕಚೇರಿ ಚಲೋ..." ಕಾರ್ಯಕ್ರಮ, ಬಿಜೆಪಿಯನ್ನು ಸತತವಾಗಿ ಬೆಂಬಲಿಸಿದ್ದಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಅನುಭವಿಸಿದ ನಷ್ಟಗಳನ್ನು ಪರಿಣಾಮಕಾರಿಯಾಗಿ ತೆರೆದಿಡುವಲ್ಲಿ ಯಶಸ್ವಿಯಾಯಿತು. ಜಿಲ್ಲೆಯ ರಾಜಕಾರಣದಲ್ಲಿ ಒಂದು ಹೊಸ ಚರ್ಚೆಯನ್ನೂ ಇದು ಹುಟ್ಟು ಹಾಕಿತು.

ಮುನೀರ್ ಕಾಟಿಪಳ್ಳ

ದಕ್ಷಿಣ ಕನ್ನಡ ಜಿಲ್ಲೆ ಸ್ವಾತಂತ್ರ್ಯದ ಹೊಸ್ತಿಲಲ್ಲೆ ಅಭಿವೃದ್ದಿಯತ್ತ ಮುಖ ಮಾಡಿದ ಜಿಲ್ಲೆ. ಇಲ್ಲಿ ಆರಂಭವಾದ ಬ್ಯಾಂಕ್ ಗಳು, ಹೆಂಚು, ಬೀಡಿ ಮತ್ತು ಗೋಡಂಬಿ ಉದ್ಯಮಗಳು, ಉಳ್ಳಾಲ ಶ್ರೀನಿವಾಸ ಮಲ್ಯರ ದೂರದರ್ಶಿತ್ವದ ಫಲವಾಗಿ ಎದ್ದು ನಿಂತ ವಿಮಾನ ನಿಲ್ದಾಣ, ಬಂದರು, ಇಂಜಿನಿಯರಿಂಗ್ ಕಾಲೇಜು, ರಾಷ್ಟ್ರೀಯ ಹೆದ್ದಾರಿ, ಎಮ್.ಸಿ.ಎಫ್., ಕುದುರೆಮುಖ ಮುಂತಾದ ಕೈಗಾರಿಕೆಗಳು ಅಭಿವೃದ್ದಿಯ ಹೊಸ ಪರ್ವಕ್ಕೆ ನಾಂದಿ ಹಾಡಿತು. ಅದೇ ಸಂದರ್ಭ ಗೇಣಿದಾರರ ಭೂ ಹೋರಾಟ ಯಶಸ್ಸು ಕಂಡು ಭೂಮಿಯ ಒಡೆತನ ದಕ್ಕಿದ್ದು ಕರಾವಳಿ ಜಿಲ್ಲೆಯ ಚಿತ್ರಣವನ್ನೇ ಬದಲಿಸಿತು. ಮುಂದುವರಿದು ಕೊಂಕಣ ರೈಲ್ವೆ, ತೈಲಾಗಾರದ ಸ್ಥಾಪನೆ ಮುಂತಾದ ಅಭಿವೃದ್ಧಿ ಕಾರ್ಯಗಳು 80 ರ ದಶಕದ ಕೊನೆಯವರೆಗೂ ಮುಂದುವರಿದವು.

ಇದು ಸ್ವಾತಂತ್ರ್ಯ ನಂತರ ನಾಲ್ಕು ದಶಕಗಳ ಕಾಲ ಕಾಂಗ್ರೆಸ್, ಎಡ ಪಕ್ಷಗಳು, ಜನತಾ ಪರಿವಾರ ಪಕ್ಷಗಳು ಮೇಲುಗೈ ಪಡೆದಿದ್ದ ದಕ್ಷಿಣ ಕನ್ನಡ ಜಿಲ್ಲೆಯ ರಾಜಕಾರಣದ ಒಂದು ಅಧ್ಯಾಯ. ಆ ನಂತರದ್ದು, 80 ರ ದಶಕದ ಕೊನೆಯಲ್ಲಿ ಆರಂಭಗೊಂಡು ಮತೀಯವಾದಿ ಅಜೆಂಡಾಗಳ ಮೂಲಕ ಸಂಘಪರಿವಾರ, ಬಿಜೆಪಿ ಪೂರ್ತಿ ಹಿಡಿತ ಸಾಧಿಸಿದ ಮೂರೂವರೆ ದಶಕಗಳ ಇನ್ನೊಂದು ಅಧ್ಯಾಯ.

ಅಭಿವೃದ್ದಿಯ ಬಲಿಪಶುಗಳಾದರು

ಜಾಗತೀಕರಣದ ಜೊತೆಯಲ್ಲೆ ಆರಂಭಗೊಂಡ ಬಿಜೆಪಿ ಯುಗ, ಕರಾವಳಿಯ ರಾಜಧಾನಿಯಂತಿರುವ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ನೀಡಿದ ಕೊಡುಗೆಗಳೇನು, ಬಿಜೆಪಿಯನ್ನು ಬಲವಾಗಿ ಬೆಂಬಲಿಸುತ್ತಾ ಬಂದಿರುವ ಇಲ್ಲಿನ ಜನಸಾಮಾನ್ಯರಿಗೆ ಈ ಕಾಲದ ಅಭಿವೃದ್ಧಿಯಲ್ಲಿ ದೊರಕಿದ್ದೇನು ಎಂಬುದನ್ನು ಅವಲೋಕಿಸಿದಾಗ, ಶೇ. 85ರಷ್ಟಿರುವ ದುಡಿಯುವ ಜನರು, ಸಣ್ಣ ರೈತರು, ಕೂಲಿಕಾರರು, ಸಣ್ಣ ವ್ಯಾಪಾರಿಗಳು, ಜನಸಾಮಾನ್ಯರು, ಈ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳು, ಯುವಜನರು ಕಣ್ಣು ಕೋರೈಸುವಂತೆ ತೋರುವ ಅಭಿವೃದ್ದಿಯ ಬಲಿಪಶುಗಳಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ದುಡ್ಡಿದ್ದವರಿಗಷ್ಟೆ ಶಿಕ್ಷಣ

ದಕ್ಷಿಣ ಕನ್ನಡ ಜಿಲ್ಲೆ ಇಂದು ಶಿಕ್ಷಣ, ಆರೋಗ್ಯ ಕ್ಷೇತ್ರದ ರಾಜಧಾನಿ ಎಂದು ಇಲ್ಲಿನ ರೂಲಿಂಗ್ ಕ್ಲಾಸ್ ನ ತುತ್ತೂರಿಗಳಿಂದ ಬೆನ್ನು ತಟ್ಟಿಸಿಕೊಳ್ಳುತ್ತಿರುವಾಗಲೇ, ಇದರ ನೈಜತೆ ಕಣ್ಣ ಮುಂದೆ ದಿನ ನಿತ್ಯ ಅನಾವರಣಗೊಳ್ಳುತ್ತಲೆ ಇದೆ. ಇಂದು ಪ್ರಾಥಮಿಕ ಶಿಕ್ಷಣದಿಂದ ಹಿಡಿದು, ಮೆಡಿಕಲ್, ಇಂಜಿನಿಯರಿಂಗ್ ಸಹಿತ, ರಂಗು ರಂಗಿನ ವೃತ್ತಿಪರ ಶಿಕ್ಷಣ ಸಂಸ್ಥೆಗಳು, ಸ್ವಾಯತ್ತ ವಿ.ವಿ. ಗಳು ಖಾಸಗಿ ಒಡೆತನದಲ್ಲಿ ಜಿಲ್ಲೆಯ ಹಳ್ಳಿಗಾಡಿನಿಂದ ಹಿಡಿದು, ಮಂಗಳೂರು ನಗರ ಕೇಂದ್ರದವರಗೆ ತಮ್ಮ ಸಾಮ್ರಾಜ್ಯವನ್ನು ಬಲವಾಗಿ ಕಟ್ಟಿ ಕೂತಿವೆ. ಸರಕಾರಿ ಪ್ರಾಥಮಿಕ ಶಾಲೆಗಳು ಮಾತ್ರವಲ್ಲದೆ, ಪಿ.ಯು., ಪದವಿ ಕಾಲೇಜುಗಳೂ ಇಂದು ಅಧ್ಯಾಪಕರ ಕೊರತೆ, ಖಾಸಗಿ ಪದವಿ ಕಾಲೇಜುಗಳು ರಂಗು ರಂಗಿನ ಹತ್ತಾರು ಉಪ ವಿಭಾಗಗಳ ಮುಂದೆ ಬಣ್ಣ ಕಳೆದುಕೊಂಡು ಬರಡಾಗಿವೆ.

ಎಂಟು ಖಾಸಗಿ ಮೆಡಿಕಲ್ ಕಾಲೇಜುಗಳು ಇರುವ ಜಿಲ್ಲೆಯಲ್ಲಿ ಒಂದು ಸರಕಾರಿ ಮೆಡಿಕಲ್ ಕಾಲೇಜು ತರುವ ಯೋಚನೆಯೂ ಇಲ್ಲಿ ಸಾಧ್ಯವಾಗಿಲ್ಲ ಎಂಬುದೇ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ, ಆರೋಗ್ಯ ಕ್ಷೇತ್ರದ ದುಸ್ಥಿತಿಗೆ ಕನ್ನಡಿ ಹಿಡಿಯುತ್ತದೆ. ದುಡ್ಡಿದ್ದವರಿಗಷ್ಟೆ ಶಿಕ್ಷಣ, ಲಕ್ಷ ಲಕ್ಷ ಖರ್ಚು ಮಾಡಲು ಸಾಧ್ಯ ಇಲ್ಲದವರು ತಮ್ಮ ಆಯ್ಕೆಯ ಶಿಕ್ಷಣದ ಕನಸನ್ನು ಮರೆತು ಸಿಕ್ಕಿದ್ದೇ ಭಾಗ್ಯ ಎಂದು ಸಮಾಧಾನ ಹೊಂದುವ ಶಿಕ್ಷಣ ವ್ಯವಸ್ಥೆ ಇಲ್ಲಿಯದು. ಅಷ್ಟಕ್ಕೂ ತಮಗೆ ಹೊರಲಾಗದಷ್ಟು ಭಾರದ ಫೀಸುಗಳನ್ನು ಪಾವತಿಸಲೇಬೇಕಾದ ಅನಿವಾರ್ಯತೆ. ಹಣವಂತರ ಮಕ್ಕಳು ದೇಶ, ವಿದೇಶಗಳಿಂದ ಬಂದು ಲಕ್ಷ, ಕೋಟಿ ಚೆಲ್ಲಿ ಶಿಕ್ಷಣ ಪಡೆಯುವುದನ್ನು ಅಸಹಾಯಕತೆಯಿಂದ ನೋಡುವುದಷ್ಟೆ ಇಲ್ಲಿನ ಸಾಮಾನ್ಯರ ಮಕ್ಕಳ ಇಂದಿನ ಸ್ಥಿತಿ.

ಜಿಲ್ಲೆಯ ಜನರ ಬದುಕಿನ ಪ್ರಶ್ನೆಗಳ ಚರ್ಚೆಗೆ ವೇದಿಕೆ ಒದಗಿಸಿದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಪಿಐ(ಎಂ) ನಿಂದ ವ್ಯಾಪಕ ಪ್ರಚಾರಾಂದೋಲನ



ದುಬಾರಿ ಆಸ್ಪತ್ರೆ ವೆಚ್ಚ

ವೆನ್ಲಾಕ್ ಜಿಲ್ಲಾಸ್ಪತ್ರೆ ಸಹಿತ ಇಲ್ಲಿನ ಸರಕಾರಿ ಆಸ್ಪತ್ರೆ, ಆರೋಗ್ಯ ಕೇಂದ್ರಗಳ ದುಸ್ಥಿತಿ ಯಾರಿಗೂ ಬೇಡ. ಈ ಎಲ್ಲಾ ಸರಕಾರಿ ಅಸ್ಪತ್ರೆಗಳು ಎಂಟು ಖಾಸಗಿ ಮೆಡಿಕಲ್ ಕಾಲೇಜುಗಳ ಶ್ರೀಮಂತ ವೈದ್ಯ ವಿದ್ಯಾರ್ಥಿಗಳ ಕಲಿಕೆಯ ಕೇಂದ್ರಗಳಾಗಿ ಪರಿವರ್ತನೆಗೊಂಡಿವೆ. ಬೀದಿಗೊಂದರಂತೆ ತಲೆ ಎತ್ತಿರುವ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸುವುದು ಇಲ್ಲಿನ ಜನರಿಗೀಗ ಅನಿವಾರ್ಯ. ಇಲ್ಲಿನ ದುಬಾರಿ ಆಸ್ಪತ್ರೆ ವೆಚ್ಚ ಭರಿಸಲಾಗದೆ ಜನರು ಅನುಭವಿಸುವ ಪಾಡು ಅಕ್ಷರಗಳಿಗೆ ನಿಲುಕಲಾರದಷ್ಟು ಕರುಣಾಜನಕವಾಗಿದೆ.

ಉದ್ಯೋಗ ಸೃಷ್ಟಿಯ ಯೋಜನೆಗಳೂ ಇಲ್ಲ, ಇರುವ ಉದ್ಯೋಗಗಳಲ್ಲಿ ಆದ್ಯತೆಯೂ ಇಲ್ಲ

ಪ್ರತಿ ವರ್ಷ ಸುಮಾರು 40 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪೂರ್ತಿಗೊಳಿಸಿ ಇಲ್ಲಿನ ಶಿಕ್ಷಣ ಸಂಸ್ಥೆಗಳಿಂದ ಹೊರಬೀಳುತ್ತಾರೆ. ಆದರೆ, ಅದರಲ್ಲಿ ಐದು ಶೇಕಡಾ ಯುವಜನರಿಗೂ ಇಲ್ಲಿ ಉದ್ಯೋಗ ಸೃಷ್ಟಿಯಾಗುವುದಿಲ್ಲ. ಇಲ್ಲಿರುವ ಎಮ್.ಆರ್.ಪಿ.ಎಲ್. ಸಹಿತ ಪೆಟ್ರೋ ಕೆಮಿಕಲ್ ಉದ್ಯಮಗಳು ಸೃಷ್ಟಿಸುವ ಉದ್ಯೋಗಗಳೆ ಅತ್ಯಲ್ಪ. ಇರುವ ಉದ್ಯೋಗಗಳಲ್ಲಿಯೂ ಸ್ಥಳೀಯ ವಿದ್ಯಾವಂತ ಯುವಜನರನ್ನು ಪ್ರಜ್ಞಾಪೂರ್ವಕವಾಗಿ ಹೊರಗಿಡಲಾಗುತ್ತದೆ. ವಿಮಾನ ನಿಲ್ದಾಣ, ಬಂದರು ಖಾಸಗೀಕರಣದತ್ತ ಮುಖ ಮಾಡಿದ ನಂತರ ಅಲ್ಲಿ ಉದ್ಯೋಗಿಗಳ ಸಂಖ್ಯೆಯೂ ಪೂರ್ತಿ ಕಡಿಮೆಯಾಗಿದೆ. ಗುತ್ತಿಗೆ ನೌಕರರನ್ನೂ ಹೊರಗಡೆಯಿಂದ ತರಲಾಗುತ್ತಿದೆ.

ಬ್ಯಾಂಕುಗಳ ವಿಲೀನದ ನಂತರ ಗ್ರಾಮೀಣ ಶಾಖೆಗಳಲ್ಲಿಯೂ ಹಿಂದಿ ಮಾತಾಡುವ ನೌಕರರೆ ಕಂಡು ಬರುತ್ತಿದ್ದಾರೆ. ಹೊಟೇಲು, ಮಾಲ್ ಗಳು, ಮಧ್ಯಮ ಕೈಗಾರಿಕೆ, ಉದ್ಯಮಗಳಲ್ಲಿಯೂ ಅಗ್ಗದ ಕೂಲಿಯ ಉತ್ತರ ಭಾರತದ ಕಾರ್ಮಿಕರನ್ನು ಕರೆತಂದು ಜೀತದ ಮಾದರಿಯಲ್ಲಿ ದುಡಿಸಲಾಗುತ್ತಿದೆ. ಸ್ಥಳೀಯ ವಿದ್ಯಾವಂತ ಯುವಜನರ ಪಾಲಿಗೆ ಇದು ನಿರುದ್ಯೋಗಿ/ಅರೆ ಉದ್ಯೋಗಿಗಳಾಗಿಯೆ ಬದುಕು ಸಾಗಿಸಬೇಕಾದ ಹತಾಶ ಸ್ಥಿತಿಯನ್ನು ನಿರ್ಮಿಸಿದೆ. ಇನ್ನು ಇಲ್ಲಿನ ಮೀನುಗಾರರು, ಬೀಡಿ, ಕಟ್ಟಡ, ನಿರ್ಮಾಣ ಕಾರ್ಮಿಕರು, ಸಾರಿಗೆ ನೌಕರರು ಸೇರಿದಂತೆ ಅಸಂಘಟಿತ ಕಾರ್ಮಿಕರ ಸ್ಥಿತಿ ಯಾರಿಗೂ ಬೇಡ.

ಒಟ್ಟಾರೆಯಾಗಿ ಜಿಲ್ಲೆಯ ಸಂಪತ್ತು, ವ್ಯವಸ್ಥೆ, ಮೆಡಿಕಲ್, ಶಿಕ್ಷಣ, ಆರೋಗ್ಯ, ರಿಯಲ್ ಎಸ್ಟೇಟ್ ಸಹಿತ ಉದ್ಯಮದಾರರ ನಿರ್ದೇಶನದಂತೆ ಚಲಿಸುತ್ತಿದೆ. ಎಂಬತ್ತೈದು ಶೇಕಡಾದಷ್ಟಿರುವ ಜನ ಸಾಮಾನ್ಯರು ಬದುಕುವ ದಾರಿ ಕಂಡುಕೊಳ್ಳಲಾಗದೆ, ಬಿಜೆಪಿ ಪರಿವಾರ ಮಾಡಿದ ಮೋಸವನ್ನೂ ಅರಿಯಲಾಗದೆ ತಬ್ಬಿಬ್ಬಾಗಿ ನಿಂತಿದ್ದಾರೆ.

ಬಿಜೆಪಿಯೇ ಹೊಣೆ ಎಂಬ ಆರೋಪ ಯಾಕೆ?

90 ರ ದಶಕದ ಆರಂಭದಲ್ಲಿ ಲೋಕಸಭೆಗೆ ಧನಂಜಯ ಕುಮಾರ್ ಗೆಲುವಿನೊಂದಿಗೆ ಆರಂಭಗೊಂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಬಿಜೆಪಿ ಯುಗ ಸತತ 9 ಗೆಲುವುಗಳೊಂದಿಗೆ ಅಭೇದ್ಯವಾಗಿಯೆ ಉಳಿದಿದೆ. ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಬಹುತೇಕ ವಿಧಾನಸಭೆ ಚುನಾವಣೆಗಳನ್ನೂ ಬಿಜೆಪಿಯೆ ಗೆದ್ದಿದೆ. ಕೇಂದ್ರ, ರಾಜ್ಯ ಸರಕಾರಗಳು ಯಾವುದೇ ಪಕ್ಷದ್ದಾದರೂ, ದಕ್ಷಿಣ ಕನ್ನಡ ಜಿಲ್ಲೆಯ ಆಡಳಿತ ಮಾತ್ರ ಬಿಜೆಪಿ ಬಿಗಿ ಮುಷ್ಟಿಯಲ್ಲೇ ಉಳಿದಿದೆ. ಜಿಲ್ಲೆಯು ಪೂರ್ತಿಯಾಗಿ ಆರೋಗ್ಯ, ಶಿಕ್ಷಣ, ರಿಯಲ್ ಎಸ್ಟೇಟ್ ಸಹಿತ ವಿವಿಧ ಲಾಬಿಗಳ ಪಾಲಾಗಲು, ಜನಸಾಮಾನ್ಯರು ಈ ಅಭಿವೃದ್ದಿಯ ಪಾಲು ಪಡೆಯಲಾಗದೆ ಸಂತ್ರಸ್ತರಾಗುವ ಪುಟ 10 ಕ್ಕೆ





ಘನತೆಯ ಬದುಕಿಗಾಗಿ ಸಾಂಸ್ಕೃತಿಕ ಮಧ್ಯಪ್ರವೇಶಕ್ಕೆ ಸನ್ನದ್ಧತೆ:

ಸಮುದಾಯದ ಯಶಸ್ವಿ ಸಮ್ಮೇಳನ



"ಬ್ಯಾಂಕಿಂಗಿನ ತೊಟ್ಟಿಲು, ಶಿಕ್ಷಣದ ತೊಟ್ಟಿಲು, ಎಂದೆಲ್ಲ ಒಂದು ಕಾಲದಲ್ಲಿ ಪ್ರಭಾವಳಿ ಕಟ್ಟಿಕೊಂಡಿದ್ದ ಕರಾವಳಿಯ ಜನರು ಮೀನು ತಿಂದು ಚುರುಕು ಬುದ್ದಿಯವರೆಂದು ನಾಡು ನಮ್ಮನ್ನು ಇತ್ತೀಚೆಗಿನ ತನಕವೂ ಗುರುತಿಸುತ್ತಿತ್ತು. ಆದರೆ, ದುರದೃಷ್ಟವಶಾತ್ ಈವತ್ತು ನಮ್ಮ ಬ್ಯಾಂಕಿಂಗಿನ ತೊಟ್ಟಿಲು, ಶಿಕ್ಷಣದ ಮೆಟ್ಟಲು ಹೋಗಿ ಹೋಗಿ ಕರಾವಳಿ ಕಾರ್ಪೋರೇಟ್ ಬಿಳಿಯಾನೆಗಳ ಬಟ್ಟಲು ಆಗಿ ಕುಳಿತು ಬಿಟ್ಟಿದೆ." ಹೀಗೆಂದವರು ಹಿರಿಯ ಪತ್ರಕರ್ತ ರಾಜಾರಾಂ ತಲ್ಲೂರು ಅವರು.

ಡಿಸೆಂಬರ್ 16 ಮತ್ತು 17ರ ಎರಡು ದಿನಗಳು ಉಡುಪಿ ಜಿಲ್ಲೆಯ ಕುಂದಾಪುರದದಲ್ಲಿ ನಡೆದ 'ಸಮುದಾಯ ಕರ್ನಾಟಕ'ದ 8ನೇ ರಾಜ್ಯ ಸಮ್ಮೇಳನದಲ್ಲಿ ಮಾಡಿದ ಪ್ರಾಸ್ತಾವಿಕ ಭಾಷಣದಲ್ಲಿ ಅವರು ಮಾತನಾಡಿದರು.

ಅಭಿವೃದ್ಧಿಯ ಹೆಸರಲ್ಲಿ, ಇಲ್ಲಿ ನಾವು ನಮಗೆ ಬೇಕೆಂದು ಕೇಳಿರದ, ನಮಗೆ ಖಂಡಿತಾ ಬೇಡದ ಮತ್ತು ಇಂತಹ ಜನಸಾಂದ್ರತೆಯ ಜಾಗಗಳಲ್ಲಿ ಹಾಕಬಾರದ ಕೈಗಾರಿಕೆಗಳು, ಉದ್ದಿಮೆಗಳನ್ನು ಇಲ್ಲಿ ತುಂಬಲಾಗಿದೆ. ಮೊದಮೊದಲು ಅವು ಬರುವಾಗ ಕರಾವಳಿಯ ಧಾರಣ ಸಾಮರ್ಥ್ಯ, ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರ ಅಂತೆಲ್ಲ ಚರ್ಚೆ ಆಗುತ್ತಿತ್ತು. ಮಾಧ್ಯಮಗಳೂ ಕರಾವಳಿಯ ಪರವಾಗಿ ನಿಂತಿದ್ದವು. ಆದರೆ ಈಗ ಆ ಉದ್ಯಮಗಳು ಇಲ್ಲಿನ ವಾತಾವರಣಕ್ಕೆ ವಿಷ ಹರಿಸುತ್ತಿವೆ. ಜನ ಕ್ಯಾನ್ಸರ್, ಶ್ವಾಸಕೋಶ–ಚರ್ಮದ ತೊಂದರೆಗಳಿಂದ ಆರೋಗ್ಯ ಕೆಟ್ಟು, ನರಳಿ ಸಾಯುತ್ತಿದ್ದಾರೆ. ಇದೆಲ್ಲಾ ಆಗಿರುವುದು ಹೌದು ಎಂದು ಸ್ವತಃ ಸುಪ್ರೀಂಕೋರ್ಟಿನ ದರ್ಜೆಯ ಹಸಿರು ಪೀಠ (ಗ್ರೀನ್ ಟ್ರಿಬ್ಯೂನಲ್) ತಪ್ಪಿತಸ್ಥರಿಗೆ ದಂಡ ವಿಧಿಸಿದೆ. ಆದರೆ ಇನ್ನೂ ಯಾರೆಂದರೆ ಯಾರೂ ಮಾತನಾಡುತ್ತಿಲ್ಲ ಎಂದು ಅವರು ತಮ್ಮ ಮನದಲ್ಲಿನ ನೋವನ್ನು ವ್ಯಕ್ತಪಡಿಸಿದರು.

ನವ ಕಾರ್ಪೋರೇಟ್ ಮಾಲಕ ವರ್ಗದ ಕೈಗೆ

ಕರ್ನಾಟಕದ ಸುಮಾರು 300 ಕಿ.ಮೀ. ಉದ್ದದ ಕರಾವಳಿಯಲ್ಲಿ ಅರ್ಧಕ್ಕರ್ಧ ಭಾಗವನ್ನು ಡಿಫೆನ್ಸ್, ಬಂದರು, ಕ್ರೂಸ್, ಟೂರಿಸಂ, ಹೆಸರಿನ ಯೋಜನೆಗಳು ಆವರಿಸಿಕೊಂಡು ಬಿಟ್ಟಿವೆ. ಇಲ್ಲಿನ ಸಾಂಪ್ರದಾಯಿಕ ಮೀನುಗಾರರ ಜಾಗದಲ್ಲಿ ಟ್ರಾಲ್ ಬೋಟುಗಳು, ಡೀಪ್ ಸೀ ಫಿಷಿಂಗ್ ಸಂಸ್ಥೆಗಳು, ಫಿಶ್ ಎಕ್ಸ್ ಪೋರ್ಟರುಗಳು ಬಂದು ಕುಳಿತಿದ್ದಾರೆ. ಎಷ್ಟು ಟನ್ ಮೀನು ಹಿಡಿದು, ಎಷ್ಟು ರಫ್ತಾಗಬೇಕೆಂಬುದು ದಿಲ್ಲಿಯಲ್ಲಿ ನಿರ್ಧಾರ ಆಗುತ್ತದೆ. ಇಲ್ಲಿ ಟಾರ್ಗೆಟ್ ತಲುಪುವುದು ಮಾತ್ರ ಕೆಲಸ. ಸಾಂಪ್ರದಾಯಿಕ ಮೀನುಗಾರರನ್ನು ಬದಿಗೆ ತಳ್ಳಲಾಗಿದೆ. ನಾವು ಜನಸಾಮಾನ್ಯರು ಬೀಚ್ಗೆ ಹೋಗಿ ಸೂರ್ಯಾಸ್ತದ ಸೌಂದರ್ಯ ಆನಂದಿಸುವುದಕ್ಕೂ ಯಾವುದೋ ಕಲರಿನ ಫ್ಲ್ಯಾಗ್ ಬೀಚ್ನಲ್ಲಿ ದುಡ್ಡುಕೊಟ್ಟು ಒಳಗೆ ತೆರಳಿ, ಸಮಯ ಮುಗಿದ ತಕ್ಷಣ ಹೊರಗೆ ತಳ್ಳಿಸಿಕೊಳ್ಳುವ ಸನ್ನಿವೇಶಕ್ಕೆ ಹತ್ತಿರ ಆಗುತ್ತಿದ್ದೇವೆ.

ಸಮುದ್ರ ತೀರದ್ದು ಆ ಕಥೆಯಾದರೆ, ಘಟ್ಟದ ಕೆಳಗಿನ ಉಳಿದ ಭಾಗಗಳು ಕಲ್ಲಿದ್ದಲು, ಸಿಮೆಂಟು, ಧಾನ್ಯಗಳ ದಾಸ್ತಾನಿಗೆ ಸಜ್ಜಾಗುತ್ತಿವೆ ಮತ್ತು ನಮ್ಮ ಹೊಳೆಗಳು ಸ್ಟೋರೇಜಿನಿಂದ ಬಂದರಿಗೆ ತಲುಪುವ ಜಲ ಹಾದಿಗೆ, ಅವರ ವಿದ್ಯುತ್ತಿಗೆ ಸಿದ್ಧಗೊಳ್ಳುತ್ತಿವೆ. ಒಂದು ಜಿಲ್ಲೆ ಒಂದು ಕೈಗಾರಿಕೆ, ಒಂದು ಜಿಲ್ಲೆ ಒಂದು ಬೆಳೆ ಎಂದೆಲ್ಲ ನಿಯಮಗಳು ಹೊರಡುತ್ತಿವೆ. ಒಟ್ಟಿನಲ್ಲಿ ನಮ್ಮದಾಗಿದ್ದ ನೆಲ, ಜಲ, ಆಕಾಶ ಮೂರೂ ನಮ್ಮ ಕೈ ತಪ್ಪಿ, ನವ ಕಾರ್ಪೋರೇಟ್ ಮಾಲಕ ವರ್ಗದ ಕೈಗೆ ಸೇರಿಕೊಳ್ಳುತ್ತಿವೆ. ನಮ್ಮ ನೆಲ–ಜಲ–ಆಕಾಶ ಯಾವುದರಲ್ಲಿ ಕೈ ಆಡಿಸುವುದಕ್ಕೂ ಈಗ ನಮ್ಮ ಮಾತು ಕೇಳಬೇಕಾಗಿಲ್ಲ.

ಶಿಕ್ಷಣ ಮತ್ತು ಆರೋಗ್ಯ ಈಗ ಕಾಸುಕೊಟ್ಟರೆ ಮಾತ್ರ ಸಿಗುವ ವ್ಯಾಪಾರ ಆಗಿವೆ. ಎಚ್ಚರ ಕೊಡಬೇಕಾದ ಶಿಕ್ಷಣ ನಿದ್ದೆಹೋಗಿದೆ. ಬ್ಯಾಂಕಿಂಗಿನ ತೊಟ್ಟಿಲಿನಲ್ಲಿ ಈವತ್ತು ನಮ್ಮದೇ ಬ್ಯಾಂಕಿನ ಒಳಗೆ ಹೋದರೆ "ಕ್ಯಾ ಚಾಹಿಯೇ" ಅಂತ ಕೇಳಿಸಿಕೊಳ್ಳಬೇಕಾದ ಸ್ಥಿತಿ ಇದೆ.

"ಪ್ರಯೋಗಶಾಲೆ"ಎಂಬ ಬಿರುದು

ಕರಾವಳಿಯ ಧಾರ್ಮಿಕ, ಸಾಂಸ್ಕೃತಿಕ ಸಾಮರಸ್ಯ ಕೆಟ್ಟಿದ್ದು, ಕರಾವಳಿಗೆ "ಪ್ರಯೋಗಶಾಲೆ" ಎಂಬ ಬಿರುದು ದೊರೆತು ಹಳೆಯದಾಗಿದೆ. ನಾವು ಪ್ರಯೋಗ ಶಾಲೆಯ ಇಲಿಗಳಾಗಿ ಬಿಟ್ಟಿದ್ದೇವೆ. ಇಲ್ಲಿನ ನೆಲದ ಸಂಸ್ಕೃತಿ–ಸಾಮಾಜಿಕ ಬದುಕನ್ನು ಆಧುನೀಕರಣದ ಹೆಸರಿನಲ್ಲಿ ಒಂದು ದೇಶ – ಒಂದು ಸಂಸ್ಕೃತಿಯ ಕಡೆಗೆ ದೂಡಲಾಗುತ್ತಿದೆ. ಸರಳವಾದ ಸಮೀಕರಣಗಳನ್ನು ತಲೆಗೆ ತುಂಬಿ, ತಮ್ಮದೇ ಬದುಕುವ ಜಂಜಾಟದಲ್ಲಿರುವ ಕಾರಣಕ್ಕೆ ಯೋಚನೆ ಮಾಡಬಯಸದ ಮನಸ್ಸುಗಳಿಗೆ ವಿಷ ತುಂಬಿಸಲಾಗುತ್ತಿದೆ. ನಮ್ಮ ಬದುಕನ್ನು ಇಂಚಿಂಚೂ ನಿಗಾ ಇಟ್ಟು, ಯಾವುದೇ ಖಾಸಗಿತನ ಉಳಿಯದಂತೆ ನೋಡಿಕೊಳ್ಳುವ ಪ್ರಭುತ್ವ ಈಗ ನಮ್ಮ ಆಯ್ಕೆ ಆಗಿದೆ.

60 ವರ್ಷಗಳ ಹಿಂದೆ ಭೂಮಿ, ಬದುಕು ಇಲ್ಲದಿರುವಾಗ ಮೂಡಿದ ಎಚ್ಚರದ ಕಾರಣದಿಂದಾಗಿ ಘನತೆಯ ಬದುಕು ಅರಸಿಕೊಂಡು ಹೊರಟ ನಾವು ಈಗ ಮತ್ತೆ ಎಲ್ಲಿಗೆ ತಲುಪಿದ್ದೇವೆ ಅಂದರೆ, ಅದೇ ಭೂಮಿ, ಬದುಕು, ಅನ್ನ ಎಲ್ಲವನ್ನೂ ಬಟ್ಟಲು ಸಹಿತ ಹೊಸ ಮತ್ತು ಬಲಾಢ್ಯ, ಜಾಗತಿಕ ಮಟ್ಟದ ಧಣಿಗಳಿಗೆ ಒಪ್ಪಿಸಿಕೊಟ್ಟು, ಅವರ ಜೀತವನ್ನು ಮತ್ತೆ ಒಪ್ಪಿಕೊಳ್ಳುವ ಹಂತ ತಲುಪಿದ್ದೇವೆ.

ಈವತ್ತು ಮತ್ತೆ ಅದೇ ಹೊಸ ಧಣಿಗಳ ನೆಲ–ಜಲ– ಆಕಾಶ, ಅವರದೇ ಗದ್ದೆ, ಕಾರ್ಖಾನೆ, ಡೀಪ್ ಸೀ ಫಿಷಿಂಗ್ ಬೋಟು, ಸಿಲೊ, ಅವರದೇ ಸಂಬಳಕ್ಕೆ ದುಡಿಮೆ, ಅವರದೇ ಮಾಲ್ನಲ್ಲಿ ಖರೀದಿ, ಅವರದೇ ಮೊಬೈಲ್ ಫೋನಿನಲ್ಲಿ ಅವರದೇ ಇಂಟರ್ನೆಟ್ ಬಳಸಿ ಸಮಯ ಯಾಪನೆ ಅಥವಾ ವರ್ಕ್ ಫ್ರಂ ಹೋಂ, ಅವರದ್ದೇ ಅನ್ನ ಮತ್ತು ಅವರದ್ದೇ ಋಣ. ಹೀಗೆ ನಾವು ಒಂದು ಸುತ್ತು ಪೂರ್ಣಗೊಳಿಸಿದ್ದೇವೆ. ಹೊರಟಲ್ಲಿಗೇ ವಾಪಸ್ ಬಂದು ತಲುಪಲಾರಂಭಿಸಿದ್ದೇವೆ. ಹಾಗಾಗಿ ಈಗ ಮತ್ತೆ ಸಹಜವಾಗಿಯೇ ಘನತೆಯ ಬದುಕಿನ ಪ್ರಶ್ನೆ ಎದ್ದಿದೆ. ಎಂದು ರಾಜಾರಾಂ ತಲ್ಲೂರು ಹೇಳಿದರು.

ಇಂದು ರಾಷ್ಟ್ರೀಯತೆ ವಿಕೃತಗೊಂಡಿದೆ : ಪುರುಷೋತ್ತಮ ಬಿಳಿಮಲೆ

ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವೇ ರಾಷ್ಟ್ರೀಯತೆ. ಸಂವಿಧಾನದ ಆಧಾರದ ಮೇಲೆ ನಾವು ನಮ್ಮ ರಾಷ್ಟ್ರೀಯತೆಯನ್ನು ಕಟ್ಟಬೇಕು. ಆದರೆ ಇಂದು ರಾಷ್ಟ್ರೀಯತೆ ವಿಕೃತಗೊಂಡಿದೆ ಎಂದು ಆತಂಕ ವ್ಯಕ್ತಪಡಿಸಿದ ಜೆಎನ್ಯುನ ನಿವೃತ್ತ ಪ್ರಾಧ್ಯಾಪಕ, ಹಿರಿಯ ಚಿಂತಕ ಡಾ. ಪುರುಷೋತ್ತಮ ಬಿಳಿಮಲೆಯವರು, ಧರ್ಮ ತನ್ನ ಮೌಲ್ಯ ಕಳೆದುಕೊಂಡಿದೆ, ಶಿಕ್ಷಣವು ಸಹಿಷ್ಣುತೆ, ಸೌಹಾರ್ದತೆಯನ್ನು ಕಲಿಸುತ್ತದೆ ಎನ್ನುವುದಕ್ಕೆ ನಮ್ಮಲ್ಲಿ ಆಧಾರವೇ ಇಲ್ಲ. ಹೀಗಾಗಿ ಸಾಂಸ್ಕೃತಿಕ ಪತನ ಅತ್ಯಂತ ವೇಗವಾಗಿ ನಡೆಯುತ್ತಿದೆ. ಹೋರಾಟದ ಹಿನ್ನೆಲೆಯಿರುವ ನಾವೆಲ್ಲ ಜವಾಬ್ದಾರಿಗಳನ್ನು, ಈ ಬಗ್ಗೆ ಅರಿವಿರುವ ಹೊಸ ತಲೆಮಾರಿಗೆ ದಾಟಿಸುವ ಕೆಲಸ ಮಾಡಬೇಕಿದೆ ಎಂದು ಕರೆ ನೀಡಿದರು.

ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತುರ್ತು ಪರಿಸ್ಥಿತಿಯಿಂದ ಹಿಡಿದು ಅನೇಕ ಜನವಿರೋಧಿ ಘಟನೆಗಳನ್ನು 'ಸಮುದಾಯ' ಖಂಡಿಸುತ್ತಾ ಬಂದಿದೆ. ಪ್ರಭುತ್ವದ ವಿರುದ್ಧವಾಗಿ ಸಮುದಾಯ ತನ್ನ ಧ್ವನಿಯನ್ನು ಗಟ್ಟಿಗೊಳಿಸುತ್ತಾ ಬಂದಿದ್ದು, ಪ್ರಭುತ್ವದಿಂದ ದೂರವಾಗಿ ಸಿಡಿದು ನಿಂತಾಗ ಮಾತ್ರ ಅತ್ಯುತ್ತಮವಾದ ಕಲೆ, ಬರಹ, ನಾಟಕ, ಚಿತ್ರಗಳು ಸೃಷ್ಟಿಯಾಗುತ್ತವೆ. ಪ್ರಭುತ್ವ ಧಿಕ್ಕರಿಸುವ ನಮ್ಮ ಶಕ್ತಿ ಇಂದು ಗೌಣವಾಗುತ್ತಿದ್ದು, ಪ್ರಪಂಚದಾದ್ಯಂತ ಪ್ರಭುತ್ವ ಧಿಕ್ಕರಿಸುವವರನ್ನು ನಾಶಮಾಡುವ ಶಕ್ತಿ ಬೆಳೆದು ನಿಂತಿದೆ. ಬೇರೆ ಬೇರೆ ಉದ್ದೇಶಗಳೊಂದಿಗೆ ರಾಜಕೀಯ ಇಚ್ಛಾಶಕ್ತಿಯನ್ನು ಮುಂದಿಟ್ಟುಕೊಂಡು ಧರ್ಮ, ದೇವರ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ನಡೆಯುತ್ತಿದ್ದು, ಸೃಜನಶೀಲತೆ ನಾಶವಾಗುತ್ತಿದೆ ಎಂದರು.

ಸಮುದಾಯ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಅಚ್ಯುತ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್. ದೇವೇಂದ್ರಗೌಡ ಸಮನ್ವಯಕಾರರಾಗಿದ್ದರು. ಸಮ್ಮೇಳನದ ಕಾರ್ಯಾಧ್ಯಕ್ಷ ಉದಯ ಗಾಂವಕಾರ ಕಾರ್ಯಕ್ರಮ ನಿರೂಪಿಸಿದರು.

ತಾಳೆ ಮದ್ದಳೆ ಮೂಲಕ ಉದ್ಘಾಟನೆ

ಸಮುದಾಯ ಸಮ್ಮೇಳನ ಯಕ್ಷಗಾನ ತಾಳಮದ್ದಳೆ, ರಾಮಧಾನ್ಯ ಚರಿತೆ ಮೂಲಕ ಉದ್ಘಾಟನೆಗೊಂಡು ಗಮನ ಸೆಳೆಯಿತು. ಚಿಂತನಾ ಹೆಗಡೆ ಮಾಲ್ಕೋಡು ಭಾಗವತಿಕೆ, ಮದ್ದಲೆಯಲ್ಲಿ ಶಶಾಂಕ ಆಚಾರ್ಯ ಹಿಮ್ಮೇಳಕ್ಕೆ ಅರ್ಥಧಾರಿಗಳಾಗಿ ಡಾ. ಬಿಳಿಮಲೆ, ಜಬ್ಬಾರ್ ಸಮೋ ಸಂಪಾಜೆ, ಸದಾಶಿವ ಆಳ್ವಾ ತಲಪಾಡಿ, ಸತೀಶ್ ಶೆಟ್ಟಿ ಮೂಡುಬಗೆ, ಮಾಧವಿ ಭಂಡಾರಿ ಕೆರೆಕೋಣ, ಮುಷ್ತಾಕ್ ಹೆನ್ನಾಬೈಲು ಇದ್ದರು. ರಾಮಾ ಧಾನ್ಯ ಚರಿತೆಯ ಮೂಲಕ ಪ್ರಸ್ತುತ ಬೆಳವಣಿಗೆಯನ್ನು ವಿಮರ್ಶಾತ್ಮಕವಾಗಿ ವಿವರಿಸಿದ್ದು ನೋಡುಗರನ್ನು ಹಿಡಿದಿಡುವಂತೆ ಮಾಡಿತು.

ನಂತರ ಮಂಗಳೂರು ಜರ್ನಿ ಥೇಟರ್ ತಂಡದಿಂದ ನಡೆದ ರಂಗ ಹಾಡುಗಳು ಜನಮನ ಸೆಳೆದವು. ವಾಸುದೇವ ಉಚ್ಚಿಲ ಅಧ್ಯಕ್ಷಕತೆಯಲ್ಲಿ 'ಘನತೆಯ ಬದುಕು ಹೋರಾಟದ ಹಾದಿ – ಕಲೆಯ ದಾರಿ' ಸಂವಾದ ಕಾರ್ಯಕ್ರಮ ನಡೆಯಿತು. ಆದಿವಾಸಿ ಹಕ್ಕುಗಳ ಹೋರಾಟಗಾರ ಶ್ರೀಧರ ನಾಡ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ನಾಯಕಿ ಕೆ.ಎಸ್. ಲಕ್ಷ್ಮಿ, ರಂಗಭೂಮಿ ಕಲಾವಿದೆ ಮಂಗಳಾ ಎನ್., ಸಿನಿಮಾ ನಿರ್ದೇಶಕ ಮಂಸೋರೆ ವಿಷಯ ಮಂಡನೆ ಮಾಡಿದರು. ಸಮುದಾಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್ ವಿಮಲಾ ಕಾರ್ಯಕ್ರಮವನ್ನು ನಿರ್ವಹಿಸಿದರು. ಉಪಾಧ್ಯಕ್ಷ ಟಿ. ಸುರೇಂದ್ರ ರಾವ್, ಬಿ.ಐ. ಈಳಗೇರ, ಜೊತೆ ಕಾರ್ಯದರ್ಶಿ ಶಶಿಧರ ಜೆ.ಸಿ. ಮತ್ತು ಕೋಶಾಧಿಕಾರಿ ಎನ್ ಕೆ. ವಸಂತ್ ರಾಜ್ ಇದ್ದರು. ವಾಸುದೇವ ಬಂಗೇರ ನಿರ್ದೇಶನದಲ್ಲಿ ಸಮುದಾಯ ಧಾರವಾಡ ಕಲಾವಿದರಿಂದ ಕುಂ. ವೀರಭದ್ರಪ್ಪ ಕತೆ 'ದೇವರ ಹೆಣ' ನಾಟಕ ಪ್ರದರ್ಶನವಾಯಿತು.


ಪ್ಯಾಲೆಸ್ತೀನ್ ಕಲಾವಿದರಿಗೆ ಬೆಂಬಲ

ರಾಜ್ಯ ಸಮ್ಮೇಳನದಲ್ಲಿ ಇಸ್ರೇಲ್ನಿಂದ ದಾಳಿಗೆ ಒಳಗಾದ ಪ್ಯಾಲೆಸ್ತೀನ್ನ 'ಫ್ರೀಡಂ ಥಿಯೇಟರ್' ಕಲಾವಿದರ ಪರವಾಗಿ 'ಸಮುದಾಯ ಕರ್ನಾಟಕ'ನಿರ್ಣಯ ಕೈಗೊಂಡಿದ್ದು, ಕಲಾವಿದರ ಮೇಲಿನ ದಾಳಿಯನ್ನು ತೀವ್ರವಾಗಿ ಖಂಡಿಸಿದೆ. ಸಮುದಾಯ ಕರ್ನಾಟಕವು ಫ್ರೀಡಂ ಥಿಯೇಟರ್ ಕಲಾವಿದರ ಬೆಂಬಲಕ್ಕೆ ನಿಲ್ಲುತ್ತದೆ ಎಂದು ಅದು ಹೇಳಿದೆ.


ಪ್ಯಾಲೆಸ್ತೀನ್ನಲ್ಲಿರುವ ಫ್ರೀಡಂ ಥಿಯೇಟರ್ 2006 ರಲ್ಲಿ ಹುಟ್ಟಿಕೊಂಡ ಒಂದು ರಂಗಸಂಘಟನೆಯಾಗಿದೆ. ಪ್ಯಾಲೆಸ್ತೀನ್ನ ಜೆನಿನ್ ನಿರಾಶ್ರಿತರ ಕ್ಯಾಂಪಿನಲ್ಲಿ ಕೆಲಸ ಮಾಡುತ್ತಿರುವ ಈ ರಂಗ ತಂಡವು, ಅಲ್ಲಿನ ಜನರ, ಮಕ್ಕಳ ಜೊತೆ ಬೆರೆಯುತ್ತಾ, ಹಿಂಸೆಯ ವಿರುದ್ಧ ಒಂದು ಸಾಂಸ್ಕೃತಿಕ ಪ್ರತಿರೋಧವನ್ನು ಘನತೆಯ ಬದುಕಿಗಾಗಿ ಕಟ್ಟಿಕೊಡುತ್ತಿರುವ ಸಂಘಟನೆಯಾಗಿದೆ.

ತೀರ ಇತ್ತೀಚಿಗೆ ಇಸ್ರೇಲ್ ಪ್ಯಾಲೆಸ್ತೇನ್ ಸಂಘರ್ಷ ಉಲ್ಬಣವಾಗಿರುವ ಈ ಸಂದರ್ಭದಲ್ಲಿ, ಪ್ಯಾಲೆಸ್ಟೇನ್ ಮೇಲೆ ನಿಲ್ಲದ ಇಸ್ರೇಲ್ ದಾಳಿಯ ಸಂದರ್ಭದಲ್ಲಿ ಫ್ರೀಡಂ ಥಿಯೇಟರ್ ಮೇಲೆಯೂ ದಾಳಿಗಳಾಗುತ್ತಿವೆ. ಇದೇ ತಿಂಗಳ 13 ರಂದು ಫ್ರೀಡಂ ಥಿಯೇಟರ್ನ ನಟರ ಮೇಲೆ ಹಲ್ಲೆಗಳಾಗಿದ್ದು, ಮುಖ್ಯ ನಟರೊಬ್ಬರ ಬಂಧನವಾಗಿದೆ. ಸಮುದಾಯ

ಪುಟ 10 ಕ್ಕೆ


ಅಧ್ಯಕ್ಷರು
ಶಶಿಧರ ಜೆ.ಸಿ


ಪ್ರಧಾನ ಕಾರ್ಯದರ್ಶಿ
ಮನೋಜ್ ವಾಮಂಜೂರ


ಖಜಾಂಚಿ
ಎಸ್.ದೇವೇಂದ್ರಗೌಡ

ಘನತೆಯ ಬದುಕಿಗಾಗಿ ಸಾಂಸ್ಕೃತಿಕ ಮಧ್ಯಪ್ರವೇಶಕ್ಕೆ...... ಪುಟ 9 ರಿಂದ

ಕರ್ನಾಟಕ ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಫ್ರೀಡಂ ಥಿಯೇಟರ್ ಮೇಲಿನ ಹಲ್ಲೆಯನ್ನು ಖಂಡಿಸುತ್ತೇವೆ ಮತ್ತು ಫ್ರೀಡಂ ಥಿಯೇಟರ್ನ ಜೊತೆಗೆ ನಾವು ನಿಲ್ಲುತ್ತೇವೆ" ಎಂದು ನಿರ್ಣಯ ಹೇಳಿದೆ.

ಫ್ರೀಡಂ ಥಿಯೇಟರ್ ಮೇಲೆ ನಿರಂತರವಾಗಿ ದಾಳಿಗಳು ನಡೆಯುತ್ತಲೇ ಇವೆ. ಸಂಸ್ಥೆಯ ಮುಖ್ಯಸ್ಥರಲ್ಲಿ ಒಬ್ಬರಾದ ಜ್ಯೂಲಿಯಾನೋ 2011 ರಲ್ಲಿ ತಾಲೀಮು ಮುಗಿಸಿ ಹೊರಬರುತ್ತಲೇ ಗುಂಡೇಟಿಗೆ ಹತರಾಗಿದ್ದರು. ಅದಾಗ್ಯೂ ಧೃತಿಗೆಡದ ಫ್ರೀಡಂ ಥಿಯೇಟರ್ ಈಗಲೂ ಪ್ಯಾಲೆಸ್ಟೀನಿನ ಆ ಭಾಗದ ಸಮುದಾಯದ ನೋವಿಗೆ ದನಿಯಾಗಿ ನಿಂತಿದೆ. 2015 ರಲ್ಲಿ ಭಾರತಕ್ಕೆ ಬಂದಿದ್ದ ತಂಡವು ದೆಹಲಿಯ ಜನನಾಟ್ಯ ಮಂಚ್ ಜೊತೆಗೆ, ಸಮುದಾಯ ಕರ್ನಾಟಕವೂ ಭಾಗಿಯಾಗಿ ಬೆಂಗಳೂರಿನಲ್ಲಿ ಹಲವು ಪ್ರದರ್ಶನಗಳನ್ನು ಫ್ರೀಡಂ ಜಾಥಾ ಹೆಸರಿನಲ್ಲಿ ಆಯೋಜಿಸಿತ್ತು.

ಕುಂದಾಪುರದಲ್ಲಿ ನಡೆದ ಸಮುದಾಯ ಕರ್ನಾಟಕ 8ನೇ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾದ ನೂತನ ರಾಜ್ಯ ಸಮಿತಿಯ ಪದಾಧಿಕಾರಿಗಳು

ಅಧ್ಯಕ್ಷರು: **ಶಶಿಧರ ಜೆ.ಸಿ**

ಪ್ರಧಾನ ಕಾರ್ಯದರ್ಶಿ: **ಮನೋಜ್ ವಾಮಂಜೂರ**

ಖಜಾಂಚಿ: **ಎಸ್.ದೇವೇಂದ್ರಗೌಡ**

ಉಪಾಧ್ಯಕ್ಷರು: ಬಿ.ಐ.ಈಳಿಗೇರ, ಗುಂಡಣ್ಣ ಚಿಕ್ಕಮಗಳೂರ, ಕೆ.ಪ್ರಭಾಕರ್.

ಜಂಟಿ ಕಾರ್ಯದರ್ಶಿಗಳು: ಉದಯ ಗಾಂವಕರ, ಕಾವ್ಯ ಅಚ್ಯುತ್, ಜನಾರ್ದನ ಕೆ.ಜಿ.ಎಫ್, ಇವರನ್ನೂ ಸೇರಿದಂತೆ 21 ಜನರ ರಾಜ್ಯ ಸಮಿತಿ ಆಯ್ಕೆಯಾಗಿದೆ.

ಕೇರಳ ರಾಜ್ಯಪಾಲರು ಆ ಹುದ್ದೆಗೆ ಅನರ್ಹರು

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಚುನಾಯಿತ ರಾಜ್ಯ ಸರ್ಕಾರದ ಮೇಲಿನ ತನ್ನ ನಿರಂತರ ರಾಜಕೀಯ ದಾಳಿಗಳು ಮತ್ತು ಯದ್ವಾತದ್ವಾ ನಡವಳಿಕೆಯಿಂದಾಗಿ ಎಲ್ಲಾ ಗಡಿಗಳನ್ನೂ ದಾಟಿ ಹೋಗುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಕ್ರೋಶ ವ್ಯಕ್ತಪಡಿಸಿದೆ.ಇದಕ್ಕೆ ಇತ್ತೀಚಿನ ನಿದರ್ಶನವೆಂದರೆ "ರಾಜ್ಯದಲ್ಲಿ ಸಾಂವಿಧಾನಿಕ ವ್ಯವಸ್ಥೆಯ ಕುಸಿತದ ಆರಂಭ" ಎಂಬ ಅವರ ಹೇಳಿಕೆ, ರಾಜ್ಯ ಸರ್ಕಾರದ ವಿರುದ್ಧದ ಇಂತಹ ಬೆದರಿಕೆಗಳನ್ನು ರಾಜ್ಯದ ಜನತೆ ಸಾರಾಸಗಟಾಗಿ ತಿರಸ್ಕರಿಸುತ್ತಾರೆ ಎಂದು ಅದು ಹೇಳಿದೆ.

ಕೇರಳ ಮತ್ತು ಕೊಝಿಕೊಡ್ ವಿಶ್ವವಿದ್ಯಾನಿಲಯಗಳ ಸೆನೆಟ್‌ಗಳಲ್ಲಿ ಆ ವಿಶ್ವವಿದ್ಯಾಲಯಗಳ ಕುಲಪತಿಯೆಂಬ ತನ್ನ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು ನಾಮನಿರ್ದೇಶಿತ ಸ್ಥಾನಗಳಿಗೆ ಆರ್‌ಎಸ್‌ಎಸ್ ಮಂದಿಯನ್ನು ತುಂಬಿಸಿದ ನಂತರ ರಾಜ್ಯಪಾಲರು ವಿದ್ಯಾರ್ಥಿಗಳಿಂದ ಪ್ರತಿಭಟನೆಯನ್ನು ಎದುರಿಸುತ್ತಿದ್ದಾರೆ, ಶಾಂತಿಯುತವಾಗಿ ಪ್ರತಿಭಟಿಸುವ ಪ್ರಜಾಸತ್ತಾತ್ಮಕ ಹಕ್ಕನ್ನು ವಿದ್ಯಾರ್ಥಿಗಳಿಗೆ ಹೊಂದಿದ್ದರೂ, ರಾಜ್ಯಪಾಲರು ಈ ಪ್ರತಿಭಟನೆಗಳಿಗೆ ಮುಖ್ಯಮಂತ್ರಿಯನ್ನು ದೂಷಿಸಲು ಪ್ರಯತ್ನಿಸಿದ್ದಾರೆ, ಮತ್ತು ಅವರ ಬಗ್ಗೆ ಅವಮಾನಕರ ಉಲ್ಲೇಖಗಳನ್ನು ಮಾಡಿದ್ದಾರೆ.

ಇದು ರಾಜ್ಯಪಾಲರ ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವ ವ್ಯಕ್ತಿಗೆ ತಕ್ಕುದಾದ ವರ್ತನೆಯಲ್ಲ, ಅವರು ಆ ಹುದ್ದೆಯಲ್ಲಿ ಮುಂದುವರಿಯಲು ತಾನು ಅನರ್ಹರು ಎಂದು ಸಾಬೀತುಪಡಿಸಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ದಕ್ಷಿಣ ಕನ್ನಡ: ಜನಪರ ಅಭಿವೃದ್ದಿಯ ಪರ್ಯಾಯಕ್ಕಾಗಿ ಜನಾಂದೋಲನ... ಪುಟ 8 ರಿಂದ

ಇಂದಿನ ಸ್ಥಿತಿಗೆ ಬಿಜೆಪಿಯೇ ನೇರ ಹೊಣೆ.

ಈ ಪಕ್ಷದ ಸಂಸದರು, ಶಾಸಕರು ಇಲ್ಲಿನ ಆರೋಗ್ಯ, ಶಿಕ್ಷಣಕ್ಕೆ ಸಂಬಂಧಿಸಿದ ಗಂಭೀರ ಸಮಸ್ಯೆಗಳಿರಬಹುದು, ಸ್ಥಳೀಯರಿಗೆ ಉದ್ಯೋಗ ಒದಗಿಸುವ ಪ್ರಶ್ನೆಗಳಿರಬಹುದು, ಈ ಕುರಿತು ಎಷ್ಟೇ ದೊಡ್ಡ ವಿವಾದಗಳು ಉಂಟಾದಾಗಲೂ ಸಂಬಂಧ ಪಟ್ಟ ಜಿಲ್ಲಾ ಮಟ್ಟದ ಸಮಿತಿಗಳ ಸಭೆಯನ್ನು ಒಂದು ಭಾರಿಯೂ ಸೇರಿಸಿ ಚರ್ಚೆ ನಡೆಸಿಲ್ಲ. ಶಾಸನ ಸಭೆಗಳಲ್ಲೂ ಚರ್ಚಿಸಿಲ್ಲ. ಪಕ್ಷವಾಗಿಯೂ ಬಿಜೆಪಿ ಈ ಪ್ರಶ್ನೆಗಳನ್ನು ಎತ್ತಿಕೊಳ್ಳಲಿಲ್ಲ. ಕಳೆದ ಮೂರು ದಶಕಗಳಲ್ಲಿ ಬಡ ಜನರಿಗೆ ಮನೆ ನಿವೇಶನ, ವಸತಿಯೋಜನೆ ಜಾರಿಗೊಳ್ಳದಿದ್ದರೂ ಇಲ್ಲಿನ ಬಿಜೆಪಿ ಶಾಸಕರಾಗಲಿ, ಬಿಜೆಪಿ ಪಕ್ಷವಾಗಲಿ ತಲೆಕೆಡಿಸಿಕೊಂಡದ್ದು, ಸಭೆಗಳನ್ನು ನಡೆಸಿದ್ದು ಇಲ್ಲವೇ ಇಲ್ಲ.

ಸುರತ್ಕಲ್ ನಲ್ಲಿ ಟೋಲ್ ಗೇಟ್ ಸುಲಿಗೆಯ ವಿರುದ್ಧ ಸಂಘಟಿತಗೊಂಡ ಜನ ಚಳುವಳಿ, ಸತತ ಏಳು ವರ್ಷಗಳ ಕಾಲ ಟೋಲ್ ರದ್ದತಿಗೆ ಹೋರಾಟ ನಡೆಸಿ, ಕೊನೆಗೂ ಟೋಲ್ ಗೇಟ್ ಮುಚ್ಚಿಸಲು ಯಶಸ್ವಿಯಾಯ್ತು. ಅಂತಹ ಸಂದರ್ಭದಲೂ ಹೆದ್ದಾರಿ ಪ್ರಾಧಿಕಾರದ ಒಂದು ಸಭೆಯಲ್ಲಿಯೂ ಜಿಲ್ಲೆಯ ಸಂಸದ, ಶಾಸಕರು ಭಾಗಿಯಾಗಲಿಲ್ಲ, ಈಗ ನೋಡಿದರೆ ಜಿಲ್ಲೆಯ ವಿವಿಧ ಹೆದ್ದಾರಿಗಳಲ್ಲಿ ಆರೇಳು ಟೋಲ್ ಗೇಟ್ ಗಳನ್ನು ಅಳವಡಿಸುವ ಯೋಜನೆ ಸದ್ದಿಲ್ಲದೆ ನಡೆಯುತ್ತಿದೆ. ಹೆದ್ದಾರಿ ರಸ್ತೆ ಅಗಲೀಕರಣದ ಈ ಸಂದರ್ಭದಲ್ಲೂ ಸಂಸದ, ಶಾಸಕರುಗಳು ಹೆದ್ದಾರಿ ಪ್ರಾಧಿಕಾರದ ಸಭೆ ನಡೆಸುವುದಾಗಲಿ, ಟೋಲ್ ಗೇಟ್ ಅಳವಡಿಸುವ ಕುರಿತಾದ ಮಾಹಿತಿ ಪಡೆಯುವುದಾಗಲಿ, ಜನತೆಗೆ ಒದಗಿಸುವುದಾಗಲೀ ಮಾಡುತ್ತಿಲ್ಲ. ಬಿಜೆಪಿ ಪಕ್ಷವಂತು ಈ ಕುರಿತು ಗಾಢ ಮೌನ. ಜಿಲ್ಲೆಯ ಜನಸಾಮಾನ್ಯರ ಜ್ವಲಂತ ಪ್ರಶ್ನೆಗಳು ಪರಿಹಾರ ಕಾಣದೆ ಇರಲು ಬಿಜೆಪಿಯ ಸತತ ಗೆಲುವುಗಳು ಯಾವ ಪಾತ್ರವನ್ನು ವಹಿಸಿದೆ ಎಂದು ತಿಳಿಯಲು ಇದೊಂದು ಉದಾಹರಣೆಯೆ ಸಾಕು.

ಬಿಜೆಪಿ ದುರಾಡಳಿತ ಬಿಚ್ಚಿಟ್ಟ ಸಿಪಿಐ(ಎಂ) ನ "ಜನಸಾಮಾನ್ಯರ ನಡಿಗೆ, ಸಮಗ್ರ ಅಭಿವೃದ್ದಿಯ ಕಡೆಗೆ" ರ್‍ಯಾಲಿ

ಕಳೆದ ಮೂರುವರೆ ದಶಕಗಳ ಬಿಜೆಪಿ ಅಡಳಿತ ಜನಸಾಮಾನ್ಯರ ಬವಣೆಗಳನ್ನು ಹೇಗೆ ವಿಪರೀತವಾಗಿ ಹೆಚ್ಚಿಸಿದೆ, ಜಿಲ್ಲೆಯ ದುಡಿಯುವ ಜನರ, ಜನಸಾಮಾನ್ಯರ ನೈಜ ಸಮಸ್ಯೆಗಳೇನು, ಪರಿಹಾರದ ದಾರಿಗಳೇನು? ಎಂಬ ವಿಷಯಗಳನ್ನು ಮುಂದಿಟ್ಟು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ 'ಜನಸಾಮಾನ್ಯರ ನಡಿಗೆ ಸಮಗ್ರ ಅಭಿವೃದ್ದಿಯ ಕಡೆಗೆ' ಘೋಷಣೆಯಡಿ ನಡೆಸಿದ ಬೃಹತ್ ಮೆರವಣಿಗೆ, ಬಹಿರಂಗ ಸಭೆ, ಹಾಗೂ ಅದರ ಪೂರ್ವಭಾವಿಯಾಗಿ ನಡೆಸಿದ ಪ್ರಚಾರಾಂದೋಲನ ಜಿಲ್ಲೆಯ ರಾಜಕಾರಣದ ಮಟ್ಟಿಗೆ ಹೊಸ ಅನುಭವವನ್ನು ಉಂಟು ಮಾಡಿತು. ಮೂರುವರೆ ದಶಕಗಳ ಬಿಜೆಪಿಯ ಸತತ ಗೆಲುವು, ಜಿಲ್ಲೆಯ ಜನರನ್ನು ಸತತ ಉನ್ಮಾದದಲ್ಲಿಟ್ಟು ನಡೆಸಿದ ರಾಜಕಾರಣದ ಮರೆಯಲ್ಲಿ ಜನತೆ ಹೇಗೆ ಸಂಕಷ್ಟಗಳ ಸುಳಿಗೆ ಸಿಲುಕಿದರು, ಬಿಜೆಪಿ ಹೇಗೆ ಎಂಬತ್ತೈದು ಶೇಕಡಾ ಇರುವ ಜನಸಾಮಾನ್ಯರ ವಿರೋಧಿ ಎಂಬುದನ್ನು ವಿವರವಾಗಿ ಜನರ ಮುಂದಿಟ್ಟಿತು. ಸಾಮಾಜಿಕ ಜಾಲತಾಣದಲ್ಲೂ ಈ ಪ್ರಚಾರ ಶೈಲಿ ಗಮನ ಸೆಳೆಯಿತು. 2023ರ ಡಿಸೆಂಬರ್ 19 ರಂದು ನಡೆದ ರ್‍ಯಾಲಿ, ಬಹಿರಂಗ ಸಭೆಯಲ್ಲಿಯೂ ಸಾವಿರಾರು ಜನರು ಭಾಗಿಗಳಾಗಿರುವುದು ಜಿಲ್ಲೆಯ ಜನರಿಗೆ ಬಿಜೆಪಿ ದುರಾಡಳಿತದ ಕುರಿತು ಅರಿವು ಮೂಡುತ್ತಿರುವುದನ್ನು ಸ್ಪಷ್ಟಪಡಿಸಿತು.

ಜನರ ಬದಕಿನ ಪ್ರಶ್ನೆಗಳ ಚರ್ಚೆಗೆ ವೇದಿಕೆ ಒದಗಿಸಿದೆ

ಕೋಮು ಕದನ, ಭಾವನಾತ್ಮಕ ವಿಚಾರಗಳು, ಅಬ್ಬರದ ಉತ್ಸವಗಳಲ್ಲೆ ಕಳೆದು ಹೋಗಿರುವ ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ವಾಗ್ವಾದಕ್ಕೆ ಸಿಪಿಐ(ಎಂ) ಪಕ್ಷದ ಈ ರ್‍ಯಾಲಿ ಬೇರೆ ತಿರುವು ನೀಡಿದ್ದು, ಜನರ ಬದಕಿನ ಪ್ರಶ್ನೆಗಳ ಚರ್ಚೆಗೆ ವೇದಿಕೆ ಒದಗಿಸಿದೆ. ಇದು ಮುಂದಿನ ದಿನಗಳಲ್ಲಿ ಚಳವಳಿಯಾಗಿ ಪರಿವರ್ತನೆ ಹೊಂದಿದರೆ ಜಿಲ್ಲೆಯ ರಾಜಕಾರಣಕ್ಕೆ ಹೊಸ ತಿರುವು ದೊರಕುವುದು ನಿಶ್ಚಿತ. ಒಟ್ಟಾರೆಯಾಗಿ, ಬಿಜೆಪಿಯನ್ನು ಸೋಲಿಸದೆ ಜಿಲ್ಲೆಯ ಜನಸಾಮಾನ್ಯರನ್ನು ಒಳಗೊಂಡ ಅಭಿವೃದ್ಧಿ ಅಸಾಧ್ಯ ಎಂಬುದಂತು ಗೋಡೆಯ ಮೇಲಿನ ಬರಹದಂತೆ ಸ್ಪಷ್ಟವಾಗಿದೆ. ಆ ಸಂದೇಶ ಜನಸಾಮಾನ್ಯರ ಬಳಿಗೆ ಮತ್ತಷ್ಟು ವ್ಯಾಪಕವಾಗಿ ಕೊಂಡೊಯ್ಯುವುದು ಈಗಿನ ತುರ್ತು.

ಕೇರಳ ರಾಜ್ಯಪಾಲರ ವಿಕೃತ ಕ್ರಮಗಳು........ ಪುಟ 7 ರಿಂದ

ಮತ್ತು ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ. ಎಲ್ಲಕ್ಕಿಂತ ಕೆಟ್ಟದಾಗಿ, ವಿಶ್ವವಿದ್ಯಾನಿಲಯವು ಪ್ರಸ್ತಾಪಿಸಿದ, ಸಮಾಜ ವಿಜ್ಞಾನ, ವಿಜ್ಞಾನ, ಕಲೆ ಮತ್ತು ಕ್ರೀಡಾ ವಿಭಾಗಗಳಲ್ಲಿ ಮೆರಿಟ್‌ನಲ್ಲಿ ಆಯ್ಕೆಯಾದ ನಾಲ್ಕು ವಿದ್ಯಾರ್ಥಿಗಳ ಹೆಸರುಗಳನ್ನು ಕೈಬಿಟ್ಟು, ಸಂಘ ಪರಿವಾರದ ವಿದ್ಯಾರ್ಥಿ ಸಂಘಟನೆ 'ಎ.ಬಿ.ವಿ.ಪಿ.'ಯ ಪ್ರಮುಖ ಸದಸ್ಯರನ್ನು ತೆಗೆದುಕೊಳ್ಳಲಾಗಿದೆ.

ಅದೇ ಮಾದರಿಯ ನಾಮನಿರ್ದೇಶನಗಳನ್ನು ಕಲ್ಲಿಕೋಟೆ ವಿಶ್ವವಿದ್ಯಾಲಯದ ಸೆನೆಟ್‌ಗೂ ಸಹ ಮಾಡಲಾಗಿದೆ. ಇಲ್ಲಿಯೂ ಪರಿಚಿತ ಆರ್.ಎಸ್.ಎಸ್.–ಬಿಜೆಪಿ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲಾಗಿದೆ.

ಕೇರಳದ ಉನ್ನತ ಶಿಕ್ಷಣ ಸಂಸ್ಥೆಗಳ ಕೇಸರಿಕರಣದ ಈ ಲಜ್ಜೆಗೆಟ್ಟ ಪ್ರಯತ್ನವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಯುವಜನ ಮತ್ತು ಶಿಕ್ಷಕರ ಸಂಘಟನೆಗಳು ಖಂಡಿಸಿವೆ ಮತ್ತು ಎಡ ಪ್ರಜಾಸತ್ತಾತ್ಮಕ ರಂಗದಿಂದ ತೀವ್ರ ಪ್ರತಿಭಟನೆಗಳು ನಡೆದಿವೆ. ಎಸ್.ಎಫ್.ಐ. ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯ ಕ್ಯಾಂಪಸ್‌ಗಳಲ್ಲಿ ಪ್ರಬಲ ಪ್ರತಿಭಟನಾ ಚಳವಳಿಯನ್ನು ಪ್ರಾರಂಭಿಸಿದೆ. ಈಗಾಗಲೇ ಸೆನೆಟ್‌ಗೆ ನಾಲ್ವರು ಎ.ಬಿ.ವಿ.ಪಿ. ವಿದ್ಯಾರ್ಥಿಗಳ ಆಯ್ಕೆಗೆ ಹೈಕೋರ್ಟ್ ತಡೆ ನೀಡಿರುವುದು ಗಮನಾರ್ಹ.

ವಿದ್ಯಾರ್ಥಿಗಳ ಪ್ರತಿಭಟನೆಗೆ ರಾಜ್ಯಪಾಲರು ಆಕ್ರೋಶ ವ್ಯಕ್ತಪಡಿಸಿದ್ದಾರೆ ಮತ್ತು ಘರ್ಷಣೆಯನ್ನು ಸೃಷ್ಟಿಸಲು ಪ್ರಚೋದನಕಾರಿ ವರ್ತನೆಯನ್ನು ಆಶ್ರಯಿಸಿದ್ದಾರೆ. ಆರ್.ಎಸ್.ಎಸ್. ಪ್ರಾಯೋಜಿತ ಟ್ರಸ್ಟ್‌ನ ಕಾರ್ಯಕ್ರಮದಲ್ಲಿ ಭಾಗವಹಿಸಲು ಕಲ್ಲಿಕೋಟೆ–ಕೊಚ್ಚಿನ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವುದಾಗಿ ಅವರು ಘೋಷಿಸಿದರು. ಅವರು ನಗರದ ಸರ್ಕಾರಿ ಅತಿಥಿ ಗೃಹದ ಬದಲಿಗೆ ಕ್ಯಾಂಪಸ್‌ನಲ್ಲಿರುವ ವಿಶ್ವವಿದ್ಯಾಲಯದ ಅತಿಥಿ ಗೃಹದಲ್ಲಿ ಉಳಿಯಲು ನಿರ್ಧರಿಸಿದರು ಮತ್ತು ಮುಖ್ಯಮಂತ್ರಿಗಳ ಆಜ್ಞೆಯ ಮೇರೆಗೆ ಕಳುಹಿಸಲಾದ ಅಪರಾಧಿಗಳು ಎಂದು ವಿದ್ಯಾರ್ಥಿ ಪ್ರತಿಭಟನಾಕಾರರನ್ನು ನಿಂದಿಸಲು ಪ್ರಾರಂಭಿಸಿದರು.

ಅತಿಥಿ ಗೃಹದಲ್ಲಿ ಬಿಜೆಪಿ ನಾಯಕರೊಂದಿಗೆ ನಡೆದ ಸಭೆಯ ನಂತರ ಅವರು ರಾಜಭವನದ ಮೂಲಕ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಅವರು "ರಾಜ್ಯದಲ್ಲಿ ಸಾಂವಿಧಾನಿಕ ಯಂತ್ರದ ಪತನದ ಆರಂಭವಾಗಿದೆ" ಎಂದು ಹೇಳಿದ್ದಾರೆ. ಕೆಲವು ದಿನಗಳ ಹಿಂದೆ, ಅವರು ರಾಜ್ಯದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸುವ ಬಗ್ಗೆ ಮಾತನಾಡಿದ್ದರು.

ರಾಜ್ಯಪಾಲರಿಂದ ಉನ್ನತ ಶಿಕ್ಷಣದಲ್ಲಿ, ಕೋಮುವಾದ ಬಿತ್ತುವ ವಿರುದ್ಧ ಎಸ್.ಎಫ್.ಐ. ಮತ್ತು ಇತರೆ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಗಳು ನಿರಂತರ ಹೋರಾಟ ನಡೆಸುತ್ತಿರುವಾಗ, ಕಾಂಗ್ರೆಸ್ ಮತ್ತು ಅದರ ವಿದ್ಯಾರ್ಥಿ ಸಂಘಟನೆಯ ತಟಸ್ಥ ನಿಲುವನ್ನು ತೀವ್ರವಾಗಿ ಖಂಡಿಸಬೇಕಾಗಿದೆ. ನಾಮನಿರ್ದೇಶಿತ ಸೀಟುಗಳನ್ನು ಆರ್.ಎಸ್.ಎಸ್. ವ್ಯಕ್ತಿಗಳಿಂದ ಭರ್ತಿ ಮಾಡಿದ ರಾಜ್ಯಪಾಲರ ಕ್ರಮವನ್ನು ಖಂಡಿಸಿ ಕೇರಳ ವಿದ್ಯಾರ್ಥಿ ಸಂಘ ಮತ್ತು ಕಾಂಗ್ರೆಸ್ ಪಕ್ಷ ಯಾವುದೇ ಹೇಳಿಕೆಯನ್ನೂ ಸಹಾ ನೀಡಿಲ್ಲ. ಅವರ ಕುರುಡು ಮಾರ್ಕ್ಸ್‌ವಾದಿ–ವಿರೋಧಿ ಧೋರಣೆ, ಅವರು ಉನ್ನತ ಶಿಕ್ಷಣದಲ್ಲಿ ಆರ್.ಎಸ್.ಎಸ್. ಸಿಬ್ಬಂದಿಯ ಒಳ ನುಸುಳುವಿಕೆಯಿಂದ ಉಂಟಾಗುವ ಕೋಮುವಾದದ ಅಪಾಯವನ್ನು ಕಡೆಗಣಿಸುವಂತೆ ಮಾಡುತ್ತದೆ.

ರಾಜ್ಯಪಾಲರ ಹುದ್ದೆ ಸಾಂವಿಧಾನಿಕವಾದದ್ದು, ಆರಿಫ್ ಮೊಹಮ್ಮದ್ ಖಾನ್ ರವರ, ಇಂತಹ ನಡವಳಿಕೆಯು ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವ ವ್ಯಕ್ತಿಯು ಅನುಸರಿಸಬೇಕಾದ ನಿರೀಕ್ಷಿತ ನಡವಳಿಕೆಯ ಎಲ್ಲಾ ಮಾನದಂಡಗಳನ್ನು ಮುರಿದಿದೆ. ಮುಖ್ಯಮಂತ್ರಿ ಮತ್ತು ರಾಜ್ಯ ಸರ್ಕಾರದ ವಿರುದ್ಧ ಅವರು ಮಾಡಿರುವ ಅವಮಾನ, ಹಾಕಿರುವ ಬೆದರಿಕೆಗಳನ್ನು ಕೇರಳದ ಜನರು ಸಹಿಸುವುದಿಲ್ಲ. ರಾಜ್ಯಪಾಲರ ಮೂಲಕ ವಿಕೃತ ಕ್ರಮಗಳನ್ನು ಬಳಸಿಕೊಂಡು, ಕೇರಳ ರಾಜ್ಯದಲ್ಲಿ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಬಹುದು ಎಂಬುದು, ಬಿಜೆಪಿಯ ತಪ್ಪು ಗ್ರಹಿಕೆಯಾಗಿದೆ.

ಅನು: ನಾಗರಾಜ ನಂಜುಂಡಯ್ಯ

ಮೋದಿಯವರ 'ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ' ಭರವಸೆ ಏನಾಯ್ತು?

ಸಿ. ಸಿದ್ದಯ್ಯ



ಭಾರತೀಯ ಜನತಾ ಪಕ್ಷದ 2014ರ ಚುನಾವಣಾ ಆಶ್ವಾಸನೆಗಳಲ್ಲಿ "ದೇಶದಲ್ಲಿನ ನಿರುದ್ಯೋಗ ಸಮಸ್ಯೆ ಬಗೆಹರಿಸುತ್ತೇವೆ" ಎಂಬುದೂ ಒಂದು. ತಾನು ಅಧಿಕಾರಕ್ಕೆ ಬಂದರೆ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಅಂದು ಮೋದಿ ಜನತೆಗೆ ಭರವಸೆ ಕೊಟ್ಟಿದ್ದರು. ಅವರ ಈ ಭರವಸೆ ಈಡೇರಿದ್ದರೆ, ಅವರ ಆಡಳಿತದ 10 ವರ್ಷಗಳಲ್ಲಿ ಹೊಸದಾಗಿ 20 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಈ ರೀತಿ ಆಗಿದ್ದರೆ ಇಂದು ಜನರು ಉದ್ಯೋಗ ಹುಡುಕುತ್ತಾ ಅಲೆಯುವ ಸ್ಥಿತಿ ಇರುತ್ತಿರಲಿಲ್ಲ. ಮೋದಿ ಸರ್ಕಾರ ಮತ್ತಷ್ಟು ಉದ್ಯೋಗ ಸೃಷ್ಟಿಸುವ ಮಾತಿರಲಿ, ಅಂದು ಇದ್ದ ಬಹಳಷ್ಟು ಉದ್ಯೋಗಗಳನ್ನೇ ನಾಶ ಮಾಡುವಂತಹ ನೀತಿಗಳನ್ನು ಅನುಸರಿಸಿದರು. 2014ರಲ್ಲಿ 5.44 ರಷ್ಟು ನಿರುದ್ಯೋಗ ದರವು, ಇತ್ತೀಚಿನ ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (CMIE) ವರದಿಯ ಪ್ರಕಾರ, ಜುಲೈ 2023 ರ ಹೊತ್ತಿಗೆ ಭಾರತದಲ್ಲಿ ಒಟ್ಟಾರೆ ನಿರುದ್ಯೋಗ ದರವು ಶೇ. 7.95 ರಷ್ಟಿದೆ. 2023ರ ಅಕ್ಟೋಬರ್ ನಲ್ಲಿ ಇದು ಶೇ. 10.05 ರಷ್ಟಿತ್ತು.

ಮೋದಿ-9 ವರ್ಷಗಳು-ಭಾಗ-31

ದೇಶದ ಚುಕ್ಕಾಣಿ ಹಿಡಿದಿರುವ ಬಿಜೆಪಿ 2014ರ ಚುನಾವಣೆಗೂ ಮುನ್ನ ಆಡಿದ ಮಾತುಗಳೇನು? ಅದು ಜನರಿಗೆ ನೀಡಿದ ಭರವಸೆಗಳೇನು? ಇಂದು ತನ್ನ ಆಡಳಿತದಲ್ಲಿ ಅದು ಮಾಡುತ್ತಿರುವುದೇನು? ಮೊದಲೇ, ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿ, ಜನರು ಸಂಕಷ್ಟದಲ್ಲಿ ಸಿಲುಕಿದ್ದರು. ಇಂತಹ ಸಂಕಷ್ಟಗಳನ್ನೇ ಬಂಡವಾಳ ಮಾಡಿಕೊಂಡು, ತನಗೆ ಅಧಿಕಾರ ಕೊಟ್ಟರೆ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಜನರನ್ನು ನಂಬಿಸಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಇಂತಹ ಸಂದರ್ಭದಲ್ಲಿ ಉದ್ಯೋಗಾವಕಾಶಗಳ ಹೆಚ್ಚಳಕ್ಕೆ ಸರ್ಕಾರ ಯೋಜನೆಗಳನ್ನು ರೂಪಿಸಬೇಕಿತ್ತು. ಜನರ ಆದಾಯ ಹೆಚ್ಚಿಸುವ ಮೂಲಕ, ಹಣದ ಹರಿವು ಹೆಚ್ಚಿಸುವ ಮೂಲಕ, ಜನರ ಕೊಳ್ಳುವ ಶಕ್ತಿ ಹೆಚ್ಚಿಸಲು ಬೇಕಾದ ವಾತಾವರಣ ನಿರ್ಮಿಸಬೇಕು. ಇದರಿಂದ ಸರಕುಗಳ ಮಾರಾಟ ಹೆಚ್ಚಳವಾಗುತ್ತದೆ, ಸರಕುಗಳ ಬೇಡಿಕೆ ಹೆಚ್ಚಾಗುತ್ತದೆ, ಸರಕುಗಳನ್ನು ಉತ್ಪಾದಿಸುವ ಮತ್ತಷ್ಟು ಸಣ್ಣ ಮತ್ತು ದೊಡ್ಡ ಕಾರ್ಖಾನೆಗಳ ಸ್ಥಾಪನೆಯಾಗುತ್ತವೆ, ಹಲವರಿಗೆ ಸ್ವಂತ ಉದ್ಯೋಗ ಸೃಷ್ಟಿಸಿಕೊಳ್ಳುವ ವಾತಾವರಣ ನಿರ್ಮಾಣವಾಗುತ್ತದೆ. ಮತ್ತೊಂದೆಡೆ, ಜನರ ಪ್ರವಾಸ ಹೆಚ್ಚಾಗಿ ಪ್ರವಾಸೋದ್ಯಮದ ವೃದ್ಧಿಯ ಜೊತೆಗೆ ಸೇವಾ ವಲಯದಲ್ಲಿ ಬೇಡಿಕೆ ಹೆಚ್ಚಾಗುತ್ತದೆ, ಇದರಿಂದಾಗಿ ಸರಕು ಮತ್ತು ಸೇವಾ ವಲಯಗಳಲ್ಲಿ ಹೊಸ ಹೊಸ ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹ ಸಿಗುತ್ತದೆ.

ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (CMIE) ಲೆಕ್ಕಾಚಾರಗಳ ಪ್ರಕಾರ, ನಿರುದ್ಯೋಗವು 2019 ರಲ್ಲಿ ಶೇ. 5.27 ರಿಂದ 2020 ರಲ್ಲಿ ಶೇ. 8 ಕ್ಕೆ ಏರಿದೆ. ಆ ನಂತರದ ಎರಡು ವರ್ಷಗಳಲ್ಲಿ ಶೇ. 5.98 ಹಾಗೂ ಶೇ. 7.33ರಷ್ಟು ದಾಖಲಾಗಿದೆ. 2023 ರಲ್ಲಿ ಇದು ಮತ್ತಷ್ಟು ಹೆಚ್ಚಾಗಿದೆ. ಈಗ ದೇಶದಲ್ಲಿ ಉದ್ಯೋಗ ಅರಸಿ ಅಲೆಯುವವರ ಸಂಖ್ಯೆ ಹೆಚ್ಚುತ್ತಿದೆ. ಆದರೆ ಲಭ್ಯವಿರುವ ಉದ್ಯೋಗಗಳು ಯಾವುದೇ ಹೆಚ್ಚಳವಿಲ್ಲದೆ ಹಾಗೆಯೇ ಉಳಿದಿವೆ. ವರ್ಷದಿಂದ ವರ್ಷಕ್ಕೆ ಸೂಕ್ತ ವಯೋಮಾನದವರ ಸಂಖ್ಯೆ ಮತ್ತು ಉದ್ಯೋಗ ಅರಸಿ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಮತ್ತೊಂದೆಡೆ, ಉದ್ಯೋಗಾವಕಾಶಗಳ ಪ್ರಮಾಣದಲ್ಲಿ ಹೆಚ್ಚಾಗುತ್ತಿಲ್ಲ.

ಏಕಾಏಕಿ ನೋಟು ಅಮಾನ್ಯೀಕರಣ

ಮಾರುಕಟ್ಟೆಯಲ್ಲಿ ಹಣದ ಹರಿವು ಹೆಚ್ಚಿಸಬೇಕಾಗಿದ್ದ ಮೋದಿ ಸರ್ಕಾರ ಮಾಡಿದ್ದೇನು? 2016 ರ ನವೆಂಬರ್ 8ರ ರಾತ್ರಿ ಏಕಾಏಕಿ 500 ಮತ್ತು 1000 ರೂ ಮೌಲ್ಯದ ನೋಟುಗಳನ್ನು ಅಮಾನ್ಯೀಕರಣ ಮಾಡಿ ಘೋಷಣೆ ಮಾಡುವ ಮೂಲಕ, ಜನರ ಬಳಿ ಇದ್ದ ಅಲ್ಪ ಸ್ವಲ್ಪ ಹಣವನ್ನೂ ಹಿಂಪಡೆದು ಬಿಟ್ಟರು. ಇದರಿಂದ ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಜನರ ಕೊಳ್ಳುವ ಶಕ್ತಿ ಮಣ್ಣುಪಾಲಾಯಿತು. ಬಹುತೇಕ ಹಣ ಬ್ಯಾಂಕುಗಳ ಖಜಾನೆ ಸೇರಿ ಬೆಚ್ಚಗೆ ಮಲಗಿದವು. ಸರ್ಕಾರದ ಇಂತಹ ಅವೈಜ್ಞಾನಿಕ ನಿರ್ಧಾರವು ಆರ್ಥಿಕ ಅಡೆತಡೆಗಳನ್ನು ಉಂಟುಮಾಡಿತು. ಉತ್ಪಾದನಾ ಸಂಸ್ಥೆಗಳು ಉತ್ಪಾದಿಸಿದ ಸರಕುಗಳನ್ನು ಕೊಳ್ಳುವವರೇ ಇಲ್ಲದಂತಾಯಿತು. ಸರಕುಗಳ ಮಾರಾಟವಿಲ್ಲದೆ ಲಕ್ಷಾಂತರ ಸಂಖ್ಯೆಯಲ್ಲಿ ಸಣ್ಣ ಪುಟ್ಟ ಕಾರ್ಖಾನೆಗಳು ಬಾಗಿಲು ಮುಚ್ಚಿದವು. ಅತಿ ಸಣ್ಣ, ಸಣ್ಣ ಉದ್ಯಮಿಗಳು ಸಾಲದ ಸುಳಿಗೆ ಸಿಲುಕಿಕೊಂಡರು. ಇದರಿಂದ ಕೋಟ್ಯಾಂತರ ಕಾರ್ಮಿಕರು ಕೆಲಸ ಕಳೆದುಕೊಂಡರು. ಮತ್ತೊಂದೆಡೆ, ಮದುವೆ ಮತ್ತು ಇತರೆ ಶುಭ ಕಾರ್ಯಗಳಿಗೆ ಜನರ ಬಳಿ ಹಣವೇ ಇರದ ಪರಿಸ್ಥಿತಿ ನಿರ್ಮಾಣವಾಯಿತು. ಜನರ ಓಡಾಟ ನಿಂತುಹೋಯಿತು. ಪ್ರವಾಸೋದ್ಯಮ ನೆಲ ಕಚ್ಚಿತು. ಹೋಟೆಲ್, ಬಸ್ಸು, ಟ್ಯಾಕ್ಸಿ, ಆಟೋ, ಇಂತಹ ಸೇವಾ ವಲಯದಲ್ಲಿ ದುಡಿಯುವ ಜನರ ಆದಾಯ ಕುಸಿಯಿತು. ಇಲ್ಲಿಯೂ ಬಹಳಷ್ಟು ಉದ್ಯೋಗಗಳ ನಷ್ಟವಾಗಿ ಹೋಯ್ತು.

ಸರಕು ಮತ್ತು ಸೇವಾ ತೆರಿಗೆ (GST)

ನೋಟು ಅಮಾನ್ಯೀಕರಣದಂತಹ ಸರ್ಕಾರದ ಅವೈಜ್ಞಾನಿಕ ನಿರ್ಧಾರದಿಂದ ತೀವ್ರವಾಗಿ ಬಸವಳಿದಿದ್ದ ದೇಶದ ಆರ್ಥಿಕತೆ ಇನ್ನೇನು ಸುಧಾರಿಸಿಕೊಳ್ಳುತ್ತಿದೆ ಎನ್ನುವಾಗಲೇ, 2017ರಲ್ಲಿ ಸರಕು ಮತ್ತು ಸೇವಾ ತೆರಿಗೆ (GST) ಅನುಷ್ಠಾನ ಗೊಳಿಸುವ ಮೂಲಕ ಸಣ್ಣ, ಅತಿ ಸಣ್ಣ ಕೈಗಾರಿಕೆಗಳು ಹಾಗೂ ವ್ಯಾಪಾರಿಗಳಿಗೆ ಮತ್ತೊಂದು ಹೊಡೆತ ನೀಡಿದರು. ತೆರಿಗೆ ರಚನೆಯನ್ನು ಸರಳಗೊಳಿಸುವ ಗುರಿಯನ್ನು ಜಿ.ಎಸ್.ಟಿ. ಹೊಂದಿದೆಯಾದರೂ, ಇದು ಸಣ್ಣ ಉದ್ಯಮಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಅಡೆತಡೆಗಳನ್ನು ಉಂಟುಮಾಡಿತು ಮಾತ್ರವಲ್ಲ, ರಾಜ್ಯಗಳಿಗೆ ಬರುತ್ತಿದ್ದ ಆದಾಯಕ್ಕೂ ಕೊರತೆ ಉಂಟಾಗಿ, ರಾಜ್ಯಗಳ ಜನಪರ ಕಲ್ಯಾಣ ಯೋಜನೆಗಳಿಗೆ ಸಂಪನ್ಮೂಲದ ಕೊರತೆ ಉಂಟಾಯಿತು. ಇದು ಉದ್ಯೋಗದ ಮೇಲೆ ಪರಿಣಾಮ ಬೀರಿತು.

ಹಠಾತ್ ಲಾಕ್‌ಡೌನ್ ಘೋಷಣೆ

ಜನಸಾಮಾನ್ಯರ ಮೇಲಿನ ಪ್ರಭುತ್ವದ ಇಂತಹ ದಾಳಿಗಳ ಜೊತೆಗೆ, ಪ್ರಕೃತಿಯೂ ಸೇರಿಕೊಂಡಿತು. ಭಾರತವೂ ಸೇರಿದಂತೆ ಜಗತ್ತಿನ ಎಲ್ಲೆಡೆ ಕೊರೊನಾ ವೈರಸ್ ದಾಳಿ ಮಾಡಿತು. ಈ ಸಾಂಕ್ರಾಮಿಕ ಭಾರತವನ್ನು ಪ್ರವೇಶಿಸದಂತೆ ಆರಂಭದಲ್ಲೇ ತಡೆಯುವ ಪ್ರಯತ್ನವನ್ನು ಸರ್ಕಾರ ಮಾಡಲಿಲ್ಲ. ಪ್ರವೇಶಿದ ನಂತರವೂ ಅದು ಮತ್ತಷ್ಟು ಹರಡದಂತೆ ಸಾಕಷ್ಟು ಮಂಜಾಗ್ರತಾ ಕ್ರಮ ಕೈಗೊಳ್ಳಲಿಲ್ಲ. ಸಾಂಕ್ರಾಮಿಕ ಹರಡಿದ ಮೇಲೆ ಮತ್ತಷ್ಟು ಹರಡದಂತೆ ಸರ್ಕಾರ ತೆಗೆದುಕೊಂಡ ಕ್ರಮವೆಂದರೆ 2020 ರಲ್ಲಿ ಹಠಾತ್ ಲಾಕ್‌ಡೌನ್ ಘೋಷಣೆ. ಜನರು ಜೀವನ ಸಾಗಿಸಲು ಅವಶ್ಯಕವಾದ ಯಾವುದೇ ಪೂರ್ವ ಸಿದ್ದತೆಯನ್ನು ಸರ್ಕಾರ ಮಾಡದೆ, ಜನತೆ ತಾವೇ ಸ್ವತಃ ವ್ಯವಸ್ಥೆ ಮಾಡಿಕೊಳ್ಳಲು ಒಂದು ದಿನವೂ ಅವಕಾಶ ಕೊಡದೆ, ರಾತ್ರೋರಾತ್ರಿ ಹಠಾತ್ ಲಾಕ್‌ಡೌನ್ ಘೋಷಿಸಿ, ದೇಶದ 130 ಕೋಟಿ ಜನರನ್ನು ಗೃಹಬಂಧನದಲ್ಲಿ ಇರಿಸಿಬಿಟ್ಟರು. ಇದು ನಿರುದ್ಯೋಗವು ಗಗನಕ್ಕೇರಲು ಕಾರಣವಾಯಿತು. ಮೇ 2021 ರಲ್ಲಿ ಕರೋನಾವನ್ನು ನಿಯಂತ್ರಣಕ್ಕೆ ತಂದ ನಂತರ, ನಿರುದ್ಯೋಗ ಹೆಚ್ಚಳವು ಈಗ ಮತ್ತೆ ಗೋಚರಿಸುತ್ತಿದೆ.

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ

ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಶೇ. 100 ರಷ್ಟು ವಿದೇಶಿ ನೇರ ಹೂಡಿಕೆ (ಎಫ್‌ಡಿಐ)ಗೆ ಮೋದಿ ಸರ್ಕಾರ ಅನುಮತಿ ನೀಡಿದೆ. 10 ವರ್ಷಗಳ ಹಿಂದೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಈ ನಿರ್ಧಾರವನ್ನು ಬಿಜೆಪಿ ಬಲವಾಗಿ ವಿರೋಧಿಸಿತ್ತು.

ಎಫ್.ಡಿ.ಐ. ವಿರೋಧಿಸಿ ಬಿಜೆಪಿ ಅಂದು ಹೇಳಿದ್ದು ಹೀಗೆ: "ಸುಧಾರಣೆ ಹೆಸರಿನಲ್ಲಿ, ಸರ್ಕಾರವು ದೀರ್ಘಾವಧಿಯ ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಂಡಿದೆ, ಇದು ನಮ್ಮ ಆರ್ಥಿಕತೆಯ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಕಾಂಗ್ರೆಸ್ ನೇತೃತ್ವದ ಯುಪಿಎ ವಿದೇಶಿ ಒತ್ತಡಕ್ಕೆ ಮಣಿದಿದೆ, ಉದ್ಯೋಗ ಕಳೆದುಕೊಳ್ಳಲಿರುವ ಲಕ್ಷಾಂತರ ಸಣ್ಣ ವ್ಯಾಪಾರಿಗಳ ಮೇಲೆ ಈ ನಿರ್ಧಾರದ ಪರಿಣಾಮ ಬೀರುವುದು ಖಚಿತ. ಎಫ್‌ಡಿಐ ಅಡಿಯಲ್ಲಿ ಶೇಕಡಾ 60-70 ರಷ್ಟು ವ್ಯವಹಾರವು ಕೇವಲ ಎರಡು ಅಥವಾ ಮೂರು ಕಂಪನಿಗಳ ಕೈಗೆ ಹೋಗುತ್ತದೆ, ಇದು ರೈತರಿಗೆ ಹಾನಿಕಾರಕವಾಗಿದೆ. ರೈತರು ತಮ್ಮ ಉತ್ಪನ್ನಗಳನ್ನು ಅವರಿಗೆ ಮಾರಾಟ ಮಾಡುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಮಾರಾಟಗಾರರ ಸಂಖ್ಯೆ ಕಡಿಮೆಯಾದಾಗ, ರೈತರಿಗೆ ಹೇಗೆ ಪ್ರಯೋಜನವಾಗುತ್ತದೆ?". ಬಿಜೆಪಿ ಅಂದು ಹೇಳಿದ ಈ ಮಾತುಗಳು ಸತ್ಯ, ಆದರೆ, ಅದು ಅವರ ಒಡಲಾಳದ ಮಾತುಗಳಾಗಿರಲಿಲ್ಲ ಎಂಬುದೂ ಅಷ್ಟೇ ಸತ್ಯ.

ಆರ್ಥಿಕ ಬೆಳವಣಿಗೆ; ಉದ್ಯೋಗ ಬೆಳವಣಿಗೆಯಲ್ಲ

ದೇಶದಲ್ಲಿ ಆರ್ಥಿಕ ಬೆಳವಣಿಗೆ ದಾಖಲಾಗಿದ್ದರೂ ಅದು ಉದ್ಯೋಗ ಬೆಳವಣಿಗೆಗೆ ಕಾರಣವಾಗುವುದಿಲ್ಲ. ನವ ಉದಾರೀಕರಣ ನೀತಿಯಿಂದಾಗಿ ಸಣ್ಣ ಮತ್ತು ಮಧ್ಯಮ ಉದ್ಯಮ ವಲಯವು ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿದೆ. ಈ ಕ್ಷೇತ್ರಕ್ಕೆ ಸರ್ಕಾರ ನೀಡುತ್ತಿದ್ದ ಬೆಂಬಲವನ್ನು ಕ್ರಮೇಣ ಹಿಂತೆಗೆದುಕೊಳ್ಳಲಾಯಿತು. ಮೇಲಾಗಿ ವಿದೇಶಿ ಉತ್ಪನ್ನಗಳ ಆಮದಿಗೆ ಯಾವುದೇ ನಿರ್ಬಂಧಗಳಿಲ್ಲದೇ ಇರುವುದರಿಂದ ಈ ವಲಯಕ್ಕೆ ಪೈಪೋಟಿ ಹೆಚ್ಚಿದೆ. ಆ ಸ್ಪರ್ಧೆಯನ್ನು ಎದುರಿಸಲು ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಸರ್ಕಾರ ಬೆಂಬಲಿಸಬೇಕಿತ್ತು. ಆದರೆ ಅದಕ್ಕಿಂತ ಭಿನ್ನವಾಗಿ, ಹಿಂದೆ ಇದ್ದ ಬೆಂಬಲವನ್ನು ಹಿಂತೆಗೆದುಕೊಳ್ಳಲಾಯಿತು. ಕೋವಿಡ್ ನಂತರದ ಯುಗದಲ್ಲಿ ಆರ್ಥಿಕ ಬೆಳವಣಿಗೆಯ ದರವು ಏರಿದ್ದರೂ ಸಹ, ಅದು ಈ ವಲಯಕ್ಕೆ ಯಾವುದೇ ರೀತಿಯಲ್ಲಿ ಸಹಾಯ ಮಾಡಿಲ್ಲ. ಸಣ್ಣ ಮತ್ತು ಮಧ್ಯಮ ಉದ್ಯಮಗಳ ವಲಯವು ಅತ್ಯುನ್ನತ ಮಟ್ಟದ ಉದ್ಯೋಗಾವಕಾಶಗಳನ್ನು ಹೊಂದಿದೆ. ಅಂತಹ ವಲಯದ ಚೇತರಿಕೆಗೆ ಕೊಡುಗೆ ನೀಡದ ಆರ್ಥಿಕ ಬೆಳವಣಿಗೆಯ ಸ್ವರೂಪದಿಂದಾಗಿ, ಒಂದು ಕಡೆ ಆರ್ಥಿಕ ಬೆಳವಣಿಗೆಯ ದರವು ಹೆಚ್ಚುತ್ತಿರುವಂತೆ ತೋರುತ್ತಿದೆ, ಆದರೆ ಉದ್ಯೋಗಾವಕಾಶಗಳು ಹೆಚ್ಚಿಲ್ಲ.

ಸ್ಟಾರ್ಟಪ್ ಇಂಡಿಯಾ

ಸ್ಟಾರ್ಟಪ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಘೋಷಣೆಗಳು ಘೋಷಣೆಗಳಾಗಿಯೇ ಉಳಿದಿವೆ. ಇದುವರೆಗೆ ರೈತರು, ಕೃಷಿ ಕಾರ್ಮಿಕರ ಆತ್ಮಹತ್ಯೆ ಬಗ್ಗೆ ಕೇಳಿದ್ದೇವೆ. ಈಗ ನಿರುದ್ಯೋಗಿಗಳ ಆತ್ಮಹತ್ಯೆಗಳೂ ನಡೆಯುತ್ತಿವೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಅಂಕಿಅಂಶಗಳು ಹೇಳುತ್ತವೆ. ದೇಶವನ್ನು ಮುನ್ನಡೆಸಬೇಕಾದ ಯುವಕರು ನಿರುದ್ಯೋಗ ಅಥವಾ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸಮಾಜಕ್ಕೆ ತುಂಬಲಾರದ ನಷ್ಟ. ದೇಶದ ಜನಸಂಖ್ಯೆಯ ಶೇಕಡಾ 66 ರಷ್ಟು ಜನರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಎಂದು ಅಂದಾಜಿಸಲಾಗಿದೆ.

ಪುಟ 14 ಕ್ಕೆ

ಬಂಡವಾಳಶಾಹಿಯ ಬಿಕ್ಕಟ್ಟು

ಇಂದಿನ ಆರ್ಥಿಕ ಬಿಕ್ಕಟ್ಟು ಜಾಗತಿಕವಾಗಿದೆ ನಿಜ. ಅನೇಕ ಯುರೋಪಿಯನ್ ರಾಷ್ಟ್ರಗಳಲ್ಲಿ ತೀವ್ರ ಆರ್ಥಿಕ ಹಿಂಜರಿತವಿದೆ. ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಬಂಡವಾಳಶಾಹಿ ರಚನೆಯಲ್ಲಿ ಆರ್ಥಿಕ ಬಿಕ್ಕಟ್ಟು ಹಲವು ಬಾರಿ ಸಂಭವಿಸಿದೆ ಮತ್ತು ನಂತರ ಅದು ಚೇತರಿಸಿಕೊಂಡಿದೆ. ಆದರೆ, 2008ರಲ್ಲಿ ಉಂಟಾದ ಆರ್ಥಿಕ ಬಿಕ್ಕಟ್ಟು ಬಹುಕಾಲ ಮುಂದುವರಿದಿದೆ. ಮಾರ್ಕ್ಸ್‌ವಾದ ಪ್ರತಿಪಾದಿಸುವ ಮೂಲಭೂತ ಬದಲಾವಣೆಯನ್ನು ಮಾಡುವ ಮೂಲಕ ಮಾತ್ರ ಆರ್ಥಿಕ ಸಂಕಷ್ಟಗಳನ್ನು ಹೋಗಲಾಡಿಸಬಹುದು. ಬಂಡವಾಳಗಾರರು ಲಾಭ ಹೆಚ್ಚಿಸಿಕೊಳ್ಳಲು ತಮ್ಮ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಗಳನ್ನು ವಿಧಿಸುತ್ತಾರೆ. ಮತ್ತೊಂದೆಡೆ ಉತ್ಪಾದಕತೆಯನ್ನು ಹೆಚ್ಚಿಸಲು ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡಲು ಅವರು ಯಂತ್ರಗಳು ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸುತ್ತಾರೆ. ಇದು ಬಂಡವಾಳಶಾಹಿಗಳಿಗೆ ಲಾಭವನ್ನು ಹೆಚ್ಚಿಸುತ್ತದೆ. ಮತ್ತೊಂದೆಡೆ ಉದ್ಯೋಗ ನಷ್ಟ, ಆದಾಯ ನಷ್ಟ ಮತ್ತು ಜನರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತಿದೆ. ವಸ್ತುಗಳ ಮಾರಾಟವಾಗದಿದ್ದರೆ, ಇದು ಉತ್ಪಾದನೆಯನ್ನು ನಿಧಾನಗೊಳಿಸುತ್ತದೆ. ಕಾರ್ಖಾನೆಗಳು ಕಾರ್ಯನಿರ್ವಹಿಸುವುದಿಲ್ಲ. ಬಂಡವಾಳಶಾಹಿ ಈ ಸುಳಿದಲ್ಲಿ ಸಿಲುಕಿಕೊಂಡಿದೆ. ಇದು ಇಂದಿನ ಭಾರತದ ಸ್ಥಿತಿ. ಮೋದಿ ಸರ್ಕಾರ ಈ ಇದನ್ನೇ ಅನುಸರಿಸುತ್ತಿದೆ.

“ಲೈಂಗಿಕ ಕಿರುಕುಳದ ವಿರುದ್ಧ ಹೋರಾಟ ಮಾಡಿದರೂ ಬದಲಾವಣೆ ತರಲಾಗಲಿಲ್ಲ...”

ಇದು ಅಮೃತ ಕಾಲ

ಡಿಸೆಂಬರ್ 21ರಂದು ದಿಲ್ಲಿಯ ಪತ್ರಿಕಾ ಸಮ್ಮೇಳನವೊಂದರಲ್ಲಿ “ನಾನು ಕುಸ್ತಿಯಿಂದ ನಿವೃತ್ತಳಾಗುತ್ತಿದ್ದೇನೆ” ಎಂದು ಒಲಿಂಪಿಕ್ ಪದಕ ವಿಜೇತೆ ಸಾಕ್ಷಿ ಮಲಿಕ್ ಪ್ರಕಟಿಸಿದ್ದಾರೆ. ಅವರ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು, ಅವರ ಕುಸ್ತಿ ಬೂಟುಗಳು ಮೇಜಿನ ಮೇಲಿದ್ದವು.

ಅದೇ ವೇಳೆಯಲ್ಲಿ ಇನ್ನೊಂದು ಕಡೆ ದೇಶದ ಪ್ರಶಸ್ತಿ ವಿಜೇತ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪ ಹೊತ್ತಿರುವ ಬ್ರಿಜ್ ಭೂಷಣ್ ಶರಣ್ ಸಿಂಗ್, ತನ್ನ ಆಪ್ತ ಸಂಜಯ್ ಸಿಂಗ್ ಜತೆಗೆ, ಆತನಿಗಿಂತ ಹೆಚ್ಚು ಹೂಮಾಲೆಗಳನ್ನು ಹಾಕಿಕೊಂಡು ಆತ ಭಾರತದ ಕುಸ್ತಿ ಫೆಡರೇಶನ್ (ಡಬ್ಲ್ಯುಎಫ್ಐ) ಅಧ್ಯಕ್ಷ ಚುನಾವಣೆ ಗೆದ್ದುದರ ವಿಜಯೋತ್ಸವ ನಡೆಸುತ್ತಿದ್ದುದು ಕೇಂದ್ರ ಸರಕಾರದ “ಬೇಟಿ ಬಚಾವೋ–ಬೇಟಿ ಪಡಾವೋ’ ಘೋಷಣೆಯ ಹಿಂದಿರುವ ವ್ಯಂಗ್ಯಕ್ಕೆ ದ್ಯೋತಕದಂತಿತ್ತು ಎಂದು ಒಬ್ಬ ಪತ್ರಕರ್ತರು ವರ್ಣಿಸಿದ್ದಾರೆ.

ಡಬ್ಲ್ಯುಎಫ್ಐನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಂಜಯ್ ಸಿಂಗ್ ಲೈಂಗಿಕ ಕಿರುಕುಳದ ಆರೋಪಕ್ಕೆ ಒಳಗಾಗಿರುವ ಹಿಂದಿನ ಅಧ್ಯಕ್ಷರ ಬಂಟರು ಎಂದು ಹೇಳಲಾಗುತ್ತಿದೆ. ಉತ್ತರ ಪ್ರದೇಶದ ವಾರಣಾಸಿಯವರಾದ ಸಂಜಯ್ ಸಿಂಗ್ ಯುಪಿ ರೆಸ್ಲಿಂಗ್ ಅಸೋಸಿಯೇಷನ್ ಉಪಾಧ್ಯಕ್ಷರು. ಡಬ್ಲ್ಯುಎಫ್ಐ ಚುನಾವಣೆಯ ಅಧ್ಯಕ್ಷ ಸ್ಥಾನಕ್ಕೆ ಅವರ ವಿರುದ್ಧ ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ ಚಿನ್ನದ ಪದಕ ಗೆದ್ದ ಅನಿತಾ ಶೆರಾನ್ ಸ್ಪರ್ಧಿಸಿದ್ದರು.

“ಡಬ್ಲ್ಯುಎಫ್ಐ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧದ ಈ ಹೋರಾಟಕ್ಕೆ ನಾವು ಸಾಕಷ್ಟು ಧೈರ್ಯ ಮಾಡಿದ್ದೇವೆ. ಆದರೆ ಇಂದು ಅವರ ಬಲಗೈ ಬಂಟ ಹೊಸ ಡಬ್ಲ್ಯುಎಫ್ಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮಹಿಳೆಯನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಾವು ಒತ್ತಾಯಿಸಿದ್ದೆವು, ಆದರೆ ಅದು ಈಡೇರಿಲ್ಲ” ಎಂದು ಮಲಿಕ್ ಜತೆಗಿದ್ದ ಪದಕ ವಿಜೇತರಾದ ಬಜರಂಗ್ ಪೂನಿಯ, ವಿನೇಶ್ ಮತ್ತು ಸಂಗೀತಾ ಫೋಗಟ್ ಪತ್ರಿಕಾ ಸಮ್ಮೇಳನದಲ್ಲಿ ಹೇಳಿದರು. ಇವರುಗಳ 50 ದಿನಗಳ ಹೋರಾಟದ ಫಲವಾಗಿ ಕೊನೆಗೂ ದಿಲ್ಲಿ ಪೋಲೀಸಿನ ಲೈಂಗಿಕ ಕಿರುಕುಳದ ಆರೋಪ ಪಟ್ಟಿಯೊಂದಿಗೆ ಬ್ರಿಜ್ ಭೂಷಣ್ ಸಿಂಗ್ ಅಧ್ಯಕ್ಷ ಸ್ಥಾನದಿಂದ ಹೊರಹಾಕಲ್ಪಟ್ಟರು ಎಂದು ನೆನಪಿಸಿಕೊಳ್ಳಬಹುದು.

ಕುಸ್ತಿಪಟುಗಳಿಗೆ ನ್ಯಾಯ ಸಿಕ್ಕಿಲ್ಲ ಎಂದ ಸಂಗೀತಾ ಫೋಗಟ್ ಮುಂದುವರೆದು “ದೇಶದಲ್ಲಿ ಇಂತಹವರು ಇಂತಹ ಹುದ್ದೆಗಳಿಗೆ ಆಯ್ಕೆಯಾಗುತ್ತಿರುವುದು ದುರದೃಷ್ಟಕರ. ಈಗ ಮತ್ತೆ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತದೆ. ದೌರ್ಜನ್ಯದ ವಿರುದ್ಧ ಹೋರಾಟ ಮಾಡಿದರೂ ಬದಲಾವಣೆ ತರಲು ಸಾಧ್ಯವಾಗದಿರುವುದು ಬೇಸರದ ಸಂಗತಿ. ನಮ್ಮದೇ ದೇಶದಲ್ಲಿ ನ್ಯಾಯ ಪಡೆಯುವುದು ಹೇಗೋ ನನಗೆ ಗೊತ್ತಿಲ್ಲ” ಎಂದು ಖೇದ ವ್ಯಕ್ತಪಡಿಸಿದ್ದಾರೆ.

ಮಹಿಳಾ ಕುಸ್ತಿಪಟುಗಳು ಈಗ ಮತ್ತೆ ಶೋಷಣೆಯನ್ನು ಎದುರಿಸಬೇಕಾಗುತ್ತದೆ ಎಂದು ವಿನೇಶ್ ಫೋಗಟ್ ಕೂಡ ಭೀತಿ ವ್ಯಕ್ತಪಡಿಸಿದರು. ಬೃಹತ್ ಪ್ರತಿಭಟನೆಯನ್ನು ನೆನಪಿಸಿಕೊಂಡ ಇನ್ನೊಬ್ಬ ಕುಸ್ತಿಪಟು ಬಜರಂಗ್ ಪುನಿಯಾ, ಸರ್ಕಾರವು ತನ್ನ ಭರವಸೆಯನ್ನು ಈಡೇರಿಸಿಲ್ಲ ಎಂದು ಹೇಳಿದ್ದಾರೆ. “ನಾವು ಸತ್ಯಕ್ಕಾಗಿ ಮತ್ತು ಮಹಿಳೆಯರಿಗಾಗಿ ಹೋರಾಡುತ್ತಿದ್ದೆವು. ನಾವು ಸಕ್ರಿಯ ಕ್ರೀಡಾಪಟುಗಳಾಗಿದ್ದೆವು ಮತ್ತು ದೇಶಕ್ಕಾಗಿ ಪದಕಗಳನ್ನು ಗೆದ್ದಿದ್ದೇವೆ. ಹೆಣ್ಣುಮಕ್ಕಳಿಗೆ ನ್ಯಾಯ ಸಿಗುತ್ತದೆ ಎಂದು ನಾನು ಭಾವಿಸುವುದಿಲ್ಲ ಏಕೆಂದರೆ ಈ ವ್ಯವಸ್ಥೆಯು ಕೆಲಸ ಮಾಡಿದ ರೀತಿಯಲ್ಲಿ ಹೆಣ್ಣುಮಕ್ಕಳನ್ನು ಒಡೆಯುವ ಪ್ರಯತ್ನಗಳು ನಡೆಯುತ್ತಿವೆ. ನ್ಯಾಯಾಂಗದ ಮೇಲೆ ನಮಗೆ ನಂಬಿಕೆ ಇದೆ” ಎಂದು ಹೇಳಿದ್ದಾರೆ.

“ನಾವು ಅಂತಃಕರಣಪೂರ್ವಕವಾಗಿ ಹೋರಾಡಿದೆವು, ಆದರೆ ಬೃಜ್‌ಭೂಷಣ್‌ರಂತವರ ಬಿಸಿನೆಸ್ ಪಾರ್ಟನರ್ ಮತ್ತು ಆಪ್ತ ಸಹಾಯಕ ಡಬ್ಲ್ಯುಎಫ್ಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ನಾನು ಕುಸ್ತಿಯನ್ನು ಬಿಡುತ್ತಿದ್ದೇನೆ” –ಇದು 31 ವರ್ಷದ ಕಾಮನ್ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತೆ ಸಾಕ್ಷಿ ಮಲಿಕ್ ತನ್ನ ಕುಸ್ತಿ ಬೂಟುಗಳನ್ನು ತನ್ನ ಮುಂದಿದ್ದ ಮೇಜಿನ ಮೇಲೆ ಇಡುತ್ತ ಹೇಳಿದ ಮಾತು. “ನಾವು ಒಬ್ಬ ಮಹಿಳೆ ಅಧ್ಯಕ್ಷರಾಗಬೇಕೆಂದು ಬಯಸಿದ್ದೆವು, ಆದರೆ ಹಾಗಾಗಿಲ್ಲ” ಎಂದು ಆಕೆ ಹೇಳಿದರು.

“ಬೇಟಿ ಬಚಾವೋ–ಬೇಟಿ ಪಡಾವೋ’ ಎಂಬ ಘೋಷಣೆ ಕೊಟ್ಟ ಪ್ರಧಾನ ಮಂತ್ರಿಗಳು ಇದುವರೆಗೂ ಚಕಾರವೆತ್ತಿಲ್ಲ ಎಂಬುದನ್ನು ನೆನಪಿಸಿಕೊಳ್ಳುವ ಜತೆಗೆ, ಲೈಂಗಿಕ ಕಿರುಕುಳದ ಆರೋಪಪಟ್ಟಿ ಹೊತ್ತೇ ಡಬ್ಲ್ಯುಎಫ್ಐನ ಆ ಮಾಜೀ ಅಧ್ಯಕ್ಷ ಈಗಲೂ ನಿರ್ಭಿಡೆಯಾಗಿ ಸಂಸತಿನಲ್ಲಿ ರಾರಾಜಿಸುತ್ತಿದ್ದಾರೆ ಬಂದು ಹೋಗುತ್ತಿದ್ದಾರೆ.



ಭಾರತದ ಹೆಮ್ಮೆ– ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಫೇಸ್‌ಬುಕ್

“ಲೈಂಗಿಕ ಕಿರುಕುಳದೊಂದಿಗೆ ಬದುಕಲು ಕಲಿಯಿರಿ. ಇದು ನಮ್ಮ ಜೀವನದ ಸತ್ಯ”–ನ್ಯಾಯಾಧೀಶೆಯೊಬ್ಬರ ‘ಕಹಿ’ ಅನುಭವ

“ಲೈಂಗಿಕ ಕಿರುಕುಳದೊಂದಿಗೆ ಬದುಕಲು ಕಲಿಯಿರಿ. ಇದು ನಮ್ಮ ಜೀವನದ ಸತ್ಯ ಎಂದು ನಾನು ಭಾರತದಲ್ಲಿ ದುಡಿಯುವ ಮಹಿಳೆಯರಿಗೆ ಹೇಳಲು ಬಯಸುತ್ತೇನೆ” ಎಂದು ಉತ್ತರ ಪ್ರದೇಶದ ಬಂದಾ ಎಂಬ ಪಟ್ಟಣದ ಸಿವಿಲ್ ಮಹಿಳಾ ನ್ಯಾಯಾಧೀಶರೊಬ್ಬರು ಹೇಳಿದ್ದಾರೆ. ಅಷ್ಟೇ ಅಲ್ಲ, “ಲೈಂಗಿಕ ಕಿರುಕುಳ ತಡೆ ಕಾಯಿದೆ (ಪೋಷ್ ಕಾಯ್ದೆ– ಪಿಒಎಸ್‌ಹೆಚ್ ಆಕ್ಟ್, 2013) ಒಂದು ದೊಡ್ಡ ಸುಳ್ಳು” ಎಂದೂ ಅವರು ಹೇಳಿದ್ದಾರೆ.

ಇದು ತಾವು ಎದುರಿಸುತ್ತಿರುವ ಲೈಂಗಿಕ ಕಿರುಕುಳ ಮತ್ತು ಚಿತ್ರಹಿಂಸೆಯನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಗಮನಕ್ಕೆ ತರಬೇಕಾಗಿ ಬಂದ, ಸ್ವತಃ ನ್ಯಾಯಾಧೀಶರಾಗಿರುವ ಮಹಿಳೆಯ ಹತಾಶ ಮಾತು. ಆಕೆ ತನ್ನ ಜೀವನವನ್ನು ಅಂತ್ಯಗೊಳಿಸಲು ಅನುಮತಿ ಕೇಳುವಂತೆ ಮಾಡುವಷ್ಟು ಚಿತ್ರಹಿಂಸೆಯನ್ನು ಅನುಭವಿಸಿದ್ದಾರೆ. ಅವರನ್ನು ಜಿಲ್ಲಾ ನ್ಯಾಯಾಧೀಶರು ಮತ್ತು ಅವರ ಸಹಚರರು ನ್ಯಾಯಾಲಯದಲ್ಲಿ ಬಹಿರಂಗವಾಗಿಯೇ ನಿಂದನೆಗಳಿಗೆ ಗುರಿಮಾಡಿದರು. ಇದರ ಬಗ್ಗೆ ಸತತವಾಗಿ ದೂರುಗಳನ್ನು ನೀಡಿದರೂ, ವರ್ಗಾವಣೆಗೆ ಅರ್ಜಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಅವರು ಹೇಳಿದ್ದಾರೆ.

ಇದು ದುಡಿಯುವ ಮಹಿಳೆಯರು ಎದುರಿಸುತ್ತಿರುವ ಪರಿಸ್ಥಿತಿಯ ಚಿತ್ರಣವನ್ನು ನೀಡುತ್ತದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯಾಧೀಶರ ಸ್ಥಾನದಲ್ಲಿರುವವರೂ ಇದರಿಂದ ಹೊರತಾಗಿಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಸಿಐಟಿಯು ನ ಮಹಿಳಾ ಉಪಸಮಿತಿ, ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಎಐಸಿಸಿಡಬ್ಲ್ಯುಡಬ್ಲ್ಯು–ಸಿಐಟಿಯು) ಹೇಳಿದೆ.

ಇದು ಯೂನಿಯನ್‌ಗಳಲ್ಲಿ ಸಂಘಟಿತರಾಗದಿರುವ, ಮತ್ತು ತಮ್ಮ ಹೋರಾಟವನ್ನು ವೈಯಕ್ತಿಕವಾಗಿಯೇ ನಡೆಸಬೇಕಾಗಿರುವ ನಮ್ಮ ದೇಶದ ಬಹುಪಾಲು ದುಡಿಯುವ ಮಹಿಳೆಯರ ಅನುಭವವನ್ನು ಬಿಂಬಿಸುತ್ತದೆ ಎಂದು ಎಐಸಿಸಿಡಬ್ಲ್ಯುಡಬ್ಲ್ಯು ಹೇಳಿದೆ. ನ್ಯಾಯಾಧೀಶರ ಹುದ್ದೆಯಲ್ಲಿರುವ ಒಬ್ಬ ಮಹಿಳೆಯ ಸ್ಥಿತಿಯೇ ಹೀಗಾದರೆ, ಖಾಸಗಿ ವಲಯದ ಮತ್ತು ಅಸಂಘಟಿತ ವಲಯದ ಮಹಿಳಾ ಕಾರ್ಮಿಕರು ಮತ್ತು ನೌಕರರು ಏನನ್ನೆಲ್ಲಾ ಎದುರಿಸಬೇಕಾಗಿ ಬರುತ್ತಿದೆ ಎಂಬುದನ್ನು ಊಹಿಸಿಕೊಳ್ಳಬಹುದು.

ಅಸಂಘಟಿತ ವಲಯ ಸೇರಿದಂತೆ ಎಲ್ಲಾ ಕೆಲಸದ ಸ್ಥಳಗಳಲ್ಲಿ ಪೋಷ್ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಎಐಸಿಸಿಡಬ್ಲ್ಯುಡಬ್ಲ್ಯು ಮತ್ತು ಕಾರ್ಮಿಕ ಸಂಘಟನೆಗಳು ನಿರಂತರವಾಗಿ ಒತ್ತಾಯಿಸಿ ಹೋರಾಟ ನಡೆಸುತ್ತಿವೆ. ಕೇಂದ್ರ ಸರ್ಕಾರಿ ಕಚೇರಿಗಳು ಮತ್ತು ಸಚಿವಾಲಯಗಳು ಸೇರಿದಂತೆ ಹೆಚ್ಚಿನ ಸಂಸ್ಥೆಗಳಲ್ಲಿ, ಈ ಕಾಯ್ದೆಯ ಪ್ರಕಾರ ಆಂತರಿಕ ಸಮಿತಿ(ಐಸಿ)ಗಳು ಕಾನೂನು ಜಾರಿಯಾಗಿ ಹತ್ತು ವರ್ಷಗಳ ನಂತರವೂ ರಚನೆಯಾಗಿಲ್ಲ ಅಥವಾ ಕಾರ್ಯನಿರ್ವಹಿಸುತ್ತಿಲ್ಲ. ಬಹುತೇಕ ಜಿಲ್ಲೆಗಳಲ್ಲಿ ಸ್ಥಳೀಯ ಸಮಿತಿಗಳ ರಚನೆಯೂ ಆಗಿಲ್ಲ.

ಸಾಮೂಹಿಕ ಮತ್ತು ಸಂಘಟನಾತ್ಮಕ ಪ್ರಯತ್ನಗಳ ಮೂಲಕ ಕಾರ್ಮಿಕ ಆಂದೋಲನಕ್ಕೆ ಈ ಕಾನೂನನ್ನು ಜಾರಿಗೆ ತರುವಂತೆ ಮಾಡಬಹುದು ಎಂಬುದು ದೇಶದ ದುಡಿಯುವ ಮಹಿಳಾ ಚಳವಳಿಯ ಅನುಭವವಾಗಿದೆ. ಆಂತರಿಕ ಸಮಿತಿಗಳಲ್ಲಿ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳನ್ನೂ (ಮಹಿಳೆಯರು) ಸೇರಿಸಬೇಕು ಎಂಬುದು ಕಾರ್ಮಿಕ ಚಳವಳಿಯ ಬೇಡಿಕೆಯಾಗಿದೆ.

ಭಾರತದ ಮುಖ್ಯ ನ್ಯಾಯಾಧೀಶರು ಈ ಪ್ರಕರಣವನ್ನು ಗಣನೆಗೆ ತಗೊಂಡು ತನಿಖೆಗೆ ಆದೇಶಿಸಿದ್ದಾರೆ. ಸಂಬಂಧಿತ ಸಚಿವಾಲಯ ಮತ್ತು ವಿವಿಧ ಹಂತಗಳಲ್ಲಿನ ಅಧಿಕಾರಿಗಳು ಆಂತರಿಕ ಸಮಿತಿಗಳು ಮತ್ತು ಸ್ಥಳೀಯ ಸಮಿತಿಗಳ ಕಾರ್ಯನಿರ್ವಹಣೆಯ ಆಮೂಲಾಗ್ರ ಪರಿಶೀಲನೆ ನಡೆಸಬೇಕು ಮತ್ತು ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಈ ಕಾನೂನನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಎಂದು ಎಐಸಿಸಿಡಬ್ಲ್ಯುಡಬ್ಲ್ಯು ಒತ್ತಾಯಿಸಿದೆ.

ಇ.ಡಿ.ತಿಪ್ಪರಲಾಗ: ಥಾಮಸ್ ಐಸಾಕ್ ಮತ್ತು ಕೆಐಐಎಫ್‌ಬಿ ಗೆ ಸಮನ್ಸ್ ವಾಪಾಸ್

ಕೇರಳ ಇನ್ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಫಂಡ್ ಬೋರ್ಡ್ (ಕೆಐಐಎಫ್‌ಬಿ) ಅಂದರೆ ‘ಕೇರಳ ಮೂಲರಚನಾ ಹೂಡಿಕೆ ನಿಧಿ ಮಂಡಳಿ’ಯ ಹಣಕಾಸು ವ್ಯವಹಾರಗಳಲ್ಲಿ ಕಾನೂನು ಉಲ್ಲಂಘನೆಗಳಾಗಿವೆ ಎಂದು ಆರೋಪಿಸಿ ತನಿಖೆ ನಡೆಸುತ್ತಿರುವ ಕೇಂದ್ರ ಸರಕಾರದ ಜಾರಿ ನಿರ್ದೇಶನಾಲಯ(ಇ.ಡಿ.) ತನ್ನ ತನಿಖೆಯ ಭಾಗ ಎಂದು ಕೇರಳದ ಮಾಜಿ ಹಣಕಾಸು ಸಚಿವರು ಮತ್ತು ಹಿರಿಯ ಸಿಪಿಐ(ಎಂ) ನಾಯಕ ಟಿಎಂ ಥಾಮಸ್ ಐಸಾಕ್ ರಿಗೆ ಮತ್ತು ಕೆಐಐಎಫ್‌ಬಿ ಅಧಿಕಾರಿಗಳಿಗೆ ತಮ್ಮ ಮುಂದೆ ಹಾಜರಾಗುವಂತೆ ಕಳೆದ ಜುಲೈನಲ್ಲಿ ಸಮನ್ಸ್ ನೀಡಿತ್ತು. ಅವನ್ನು ಹಿಂಪಡೆಯಲು ಈಗ ನಿರ್ಧರಿಸಿರುವುದಾಗಿ ಇ.ಡಿ. ಕೇರಳ ಹೈಕೋರ್ಟ್‌ಗೆ ಡಿಸೆಂಬರ್ 14ರಂದು ತಿಳಿಸಿದೆ.

ಸುಮಾರು ಎರಡು ವರ್ಷಗಳ ಕಾನೂನು ಸಮರದ ನಂತರ ಇ.ಡಿ. ಸಮನ್ಸ್ ಗಳನ್ನು ವಾಪಾಸು ಪಡೆಯುವಂತಾಗಿದೆ ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತ ಪ್ರೊ. ಥಾಮಸ್ ಐಸಾಕ್ ಹೇಳಿದ್ದಾರೆ.

ಮೂಲರಚನಾ ಯೋಜನೆಗಳಿಗೆ ಹೂಡಿಕೆಗಳಿಗಾಗಿ ಹಿಂದಿನ ಎಲ್‌ಡಿಎಫ್ ಸರಕಾರ ರಚಿಸಿದ್ದ ಕೆ.ಐ.ಐ.ಎಫ್.ಬಿ. ಯ ‘ಮಸಾಲಾ ಬಾಂಡ್’ಗಳ ನೀಡಿಕೆಯಲ್ಲಿ ಕಾನೂನಿನ ಉಲ್ಲಂಘನೆ ಯಾಗಿದೆ ಎಂಬ ಆರೋಪದ ತನಿಖೆಯನ್ನು ಜಾರಿ ನಿರ್ದೇಶನಾಲಯ ಆರಂಭಿಸಿತ್ತು.

ಮಸಾಲಾ ಬಾಂಡ್‌ಎಂದರೆ ವಿದೇಶಿ ಮಾರುಕಟ್ಟೆಗಳಲ್ಲಿ ಭಾರತೀಯ ಸಂಸ್ಥೆಗಳು ನೀಡಬಹುದಾದ ರೂಪಾಯಿ ಬಾಂಡ್‌ಗಳು, ಅಂದರೆ ಸಾಲಪತ್ರಗಳು. ಕೆ.ಐ.ಐ.ಎಫ್.ಬಿ. ದೊಡ್ಡ ಮತ್ತು ಅಗತ್ಯ ಮೂಲರಚನಾ ಪ್ರಾಜೆಕ್ಟುಗಳಿಗೆ ಹಣಕಾಸು ಸಂಗ್ರಹಿಸಲು ರಚಿಸಿದ ರಾಜ್ಯ ಸರಕಾರದ ಪ್ರಧಾನ ಸಂಸ್ಥೆಯಾಗಿದ್ದು, 2021ರಲ್ಲಿ ಮಸಾಲಾ ಬಾಂಡ್ ಮೂಲಕ 2150 ಕೋಟಿ ರೂ.ಗಳನ್ನು ಸಂಗ್ರಹಿಸಿತ್ತು. ಒಟ್ಟು ಸುಮಾರು 50,000 ಕೋಟಿ ರೂ.ಗಳನ್ನು ಸಂಗ್ರಹಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಇದರಲ್ಲಿ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ(ಎಫ್‌ಇಎಂಎ–ಫೆಮ)ಯ ಉಲ್ಲಂಘನೆಯಾಗಿದೆ ಎಂಬುದು ಆರೋಪ.

ಇ.ಡಿ. ಸಮನ್ಸ್ ನೋಟೀಸು ಕೇಂದ್ರದ ಬಿಜೆಪಿ ಸರ್ಕಾರದ ‘ರಾಜಕೀಯ ನಡೆ’, ಅದು ತನ್ನ ರಾಜಕೀಯ ಲಾಭಕ್ಕಾಗಿ ಎಲ್ಲಾ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಎಂದು ಐಸಾಕ್ ಆರೋಪಿಸಿದ್ದರು. ಕೆಐಐಎಫ್‌ಬಿ ಮತ್ತು ‘ಕೇರಳ ರಾಜ್ಯ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಲಿಮಿಟೆಡ್’ (ಕೆಎಸ್‌ಐಟಿಐಎಲ್) ಅಧಿಕಾರಿಗಳಿಗೆ ಇ.ಡಿ. ಸಮನ್ಸ್ ನೀಡಿರುವ ರೀತಿ ಮತ್ತು ಮಾಧ್ಯಮಗಳ ಮೂಲಕ ಅದಕ್ಕೆ ಪ್ರಚಾರ ನೀಡುತ್ತಿರುವುದು ಭೀತಿ ಹರಡಿಸುವ ಮತ್ತು ಮಸಿ ಬಳಿಯುವ ಅಭಿಯಾನದ ಭಾಗ, ಕೇರಳ ಸರ್ಕಾರೀ ಯಂತ್ರಕ್ಕೆ ಅಪಖ್ಯಾತಿ ತರಲು “ಪಟ್ಟಭದ್ರ ರಾಜಕೀಯ ಹಿತಾಸಕ್ತಿಗಳು” ಇದನ್ನು ನಡೆಸುತ್ತಿವೆ ಎಂದೂ ಹೇಳಿದ್ದರು.

ಪುಟ 15 ಕ್ಕೆ

ನವ-ಉದಾರವಾದವು ಹಾಲಿನ ಹೊಳೆ-ಜೇನಿನ ಮಳೆ ಸುರಿಸಿದೆಯೇ?



ಆರ್ಥಿಕ ನಿಯಂತ್ರಣಗಳಿದ್ದ ಕಾಲಕ್ಕೆ ಹೋಲಿಸಿದರೆ, ನಿಯಂತ್ರಣ-ಮುಕ್ತ ನವ-ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಜಿಡಿಪಿ ಬೆಳವಣಿಗೆ ದರ ಏರಿದ್ದರಿಂದ ಇದು ಎಲ್ಲರಿಗೂ ಹಾಲು-ಜೇನಿನ ಅವಧಿಯಾಗಿದೆ ಎಂದು ಸಾಬೀತುಪಡಿಸಲು ನವ-ಉದಾರವಾದದ ಪ್ರಚಾರಕರು ಹೆಣಗುತ್ತಿದ್ದಾರೆ. ಅದಕ್ಕಾಗಿ ಅಪ್ರಾಮಾಣಿಕವಾಗಿ, ಹಲವಾರು ಕುತಂತ್ರಗಳನ್ನೂ ಬಳಸುತ್ತಾರೆ. ಏಕೆಂದರೆ ಜನರ ಜೀವನಮಟ್ಟ ಸಂಬಂಧವಾಗಿ ಹೇಳುವುದಾದರೆ, ಆ ಅವಧಿಗೆ ಹೋಲಿಸಿದರೆ, ನವ-ಉದಾರವಾದವು ಪ್ರಗತಿಯತ್ತ ಸಾಗಿದೆ ಎಂದು ಹೇಳುವುದು ಶುದ್ಧ ಅವಿವೇಕವಾಗುತ್ತದೆ. ಸ್ಥೂಲ ಚಿತ್ರವನ್ನು ತೆಗೆದುಕೊಳ್ಳಲಿ ಅಥವಾ ಎನ್ಎಸ್ಎಸ್ ನಡೆಸಿದ ಗ್ರಾಹಕ ವೆಚ್ಚ ಸಮೀಕ್ಷೆಯ ಫಲಿತಾಂಶಗಳನ್ನು ತೆಗೆದುಕೊಳ್ಳಲಿ, ಅದರಿಂದ ಸುಸಂಗತವಾಗಿ ಹೊರಹೊಮ್ಮುವ ಸಂಗತಿಯೆಂದರೆ ಸಂಪೂರ್ಣ ಬಡತನದಲ್ಲಿರುವವರ ಪ್ರಮಾಣವು ಏರಿಕೆಯಾಗಿದೆ ಎಂಬುದು. ಈ ಸತ್ಯಾಂಶವನ್ನು ಸರಕಾರ ಮತ್ತು ನವ-ಉದಾರವಾದದ ಸಮರ್ಥಕರು ಬಚ್ಚಿಡಲು ಪ್ರಯತ್ನಿಸುತ್ತಿದ್ದಾರೆ.

ಪ್ರೊ.ಪ್ರಭಾತ್ ಪಟ್ನಾಯಕ್ **ಅನು:ಕೆ.ಎಂ.ನಾಗರಾಜ್**

ಭಾರತದ ಹಿಂದಿನ ನಿಯಂತ್ರಣ ನೀತಿಯ(ಡಿರಿಜಿಸ್ಟ್) ಆಳ್ವಿಕೆಯೊಂದಿಗೆ ಹೋಲಿಸಿದರೆ, ತನ್ನ ಆಳ್ವಿಕೆಯೇ ಉತ್ತಮವಾದದ್ದು ಎಂದು ಬಿಂಬಿಸಲು ನವ-ಉದಾರವಾದವು ಒಂದು ಸುಳ್ಳಿನ ಕಂತೆಯನ್ನು ಮುಚ್ಚುಮರೆಯಿಲ್ಲದೆ ಪ್ರಚುರಪಡಿಸುತ್ತದೆ. ಅದರ ಉದ್ದೇಶವೆಂದರೆ, ನವ-ಉದಾರವಾದದ ಅಡಿಯಲ್ಲಿ ವೇಗವಾಗಿ ಬೆಳೆಯುತ್ತಿರುವ ಜಿಡಿಪಿಯಿಂದಾಗಿ ಇಡೀ ಜನತೆಯ ಜೀವನ ಮಟ್ಟ ಸುಧಾರಿಸಿದೆ ಮತ್ತು ಅವರಲ್ಲಿ ಬಹು ದೊಡ್ಡ ಸಂಖ್ಯೆಯ ಜನರು ಬಡತನದಿಂದ ಹೊರಬಂದಿದ್ದಾರೆ (ನವ-ಉದಾರವಾದದ ಒಬ್ಬ ಭ್ರಮಾಧೀನ ಉತ್ಸಾಹಿಯಂತೂ ಬಡತನವು ಈಗ ಕೇವಲ ಶೇ. 2ರಷ್ಟು ಜನರನ್ನು ಮಾತ್ರ ಬಾಧಿಸುತ್ತಿದೆ ಎಂದು ಹೇಳಿದ್ದಾನೆ) ಎಂಬ ಅಭಿಪ್ರಾಯವನ್ನು ಮೂಡಿಸುವುದೇ ಆಗಿದೆ. ಆದರೆ, ಜನರ ಜೀವನಮಟ್ಟ ಸಂಬಂಧವಾಗಿ ಹೇಳುವುದಾದರೆ, ಆ ಅವಧಿಗೆ ಹೋಲಿಸಿದರೆ, ನವ-ಉದಾರವಾದವು ಪ್ರಗತಿಯತ್ತ ಸಾಗಿದೆ ಎಂದು ಹೇಳುವುದು ಶುದ್ಧ ಅವಿವೇಕವಾಗುತ್ತದೆ. ಹಾಗೆ ನೋಡಿದರೆ, ಡಿರಿಜಿಸ್ಟ್ ಆಳ್ವಿಕೆಯಲ್ಲಿ ಹಾಲು-ಜೇನು ಹರಿಯುತ್ತಿತ್ತು ಎಂದಲ್ಲ ಎಂಬುದನ್ನು ಮತ್ತು ಅದನ್ನು ಎಡಪಕ್ಷಗಳಿಗಿಂತ ಹೆಚ್ಚು ಕಟುವಾಗಿ ಯಾರೂ ಟೀಕಿಸಿಲ್ಲ ಎಂಬುದನ್ನು ಸಾಂದರ್ಭಿಕವಾಗಿ ಹೇಳಬೇಕಾಗುತ್ತದೆ.

ನವ-ಉದಾರವಾದ ಪ್ರಸಕ್ತ ಫ್ಯಾಸಿಸ್ಟ್-ತೆರನ ಆಳ್ವಿಕೆ ಬರುವ ಮೊದಲು ಕೂಡ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಮೂಲಕ, ಲಂಗುಲಗಾಮಿಲ್ಲದ ಬಂಡವಾಳಶಾಹಿಯ ಅಡಿಯಲ್ಲಿ ನಿರೀಕ್ಷಿಸಬಹುದಾದಂತೆ, ಸಮಾಜದಲ್ಲಿ ಸ್ವಾರ್ಥಪರತೆ ಮತ್ತು ಸ್ವಹಿತಾಸಕ್ತಿಯನ್ನು ಮೊದಲಿಗಿಂತಲೂ ಹೆಚ್ಚು ವ್ಯಾಪಕಗೊಳಿಸುವ ಮೂಲಕ, ತಮ್ಮನ್ನು ತಾವೇ ಶ್ರೇಷ್ಠರೆಂದು ಹೇಳಿಕೊಳ್ಳುವ ಮತ್ತು ಬಡವರ ಬಗ್ಗೆ ತಿರಸ್ಕಾರವನ್ನಲ್ಲದೆ ಬೇರೆ ಯಾವ ಭಾವನೆಯನ್ನೂ ಹೊಂದಿರದ ಒಂದು ವಿಭಾಗ ಎದ್ದು ಬರುವಂತೆ ಮಾಡುವ ಮೂಲಕ ಭೀಕರ ಪರಿಣಾಮವನ್ನು ಉಂಟು ಮಾಡಿದೆ. ಅದು ರಾಷ್ಟ್ರದ ನೈತಿಕತೆಯನ್ನು ಎಷ್ಟೊಂದು ಮಟ್ಟದ ವರೆಗೆ ಧ್ವಂಸಮಾಡಿದೆಯೆಂದರೆ, ಇತ್ತೀಚಿನ ವರ್ಷಗಳಲ್ಲೇ ಕಾಣದಂತಹ ನರಸಂಹಾರ ನಡೆಯುತ್ತಿದ್ದು, ಅದರ ವಿರುದ್ಧ ಯಾವುದೇ ಸಾರ್ವಜನಿಕ ಕ್ರೋಧದ ಪ್ರದರ್ಶನಕ್ಕೆ ಸರಕಾರ ಅವಕಾಶ ನಿರಾಕರಿಸಿದರೂ, ಅದರ ವಿರುದ್ಧ ಮಾಧ್ಯಮಗಳಲ್ಲಿ ಯಾವುದೇ ಆಕ್ರೋಶ ವ್ಯಕ್ತವಾಗುತ್ತಿಲ್ಲ. ಆದರೆ ನಾನಿಲ್ಲಿ ಅವನ್ನೆಲ್ಲ ಪರಿಶೀಲಿಸುತ್ತಿಲ್ಲ. ನನ್ನನ್ನು ಕೇವಲ ನವ-ಉದಾರವಾದದ ಕೆಲವು ಆರ್ಥಿಕ ಸೂಚಕಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳುತ್ತೇನೆ.

ರೈತರ ಆತ್ಮಹತ್ಯೆಗಳು

ನವ-ಉದಾರವಾದದ ಒಂದು ಅತ್ಯಂತ ಸ್ಪಷ್ಟವೂ ಮತ್ತು ದುರಂತಮಯವೂ ಆದ ಆರ್ಥಿಕ ಸೂಚಕವೆಂದರೆ, ಕಳೆದ ಮೂರು ದಶಕಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮಂದಿ ರೈತರ ಮತ್ತು ಕೃಷಿ ಕಾರ್ಮಿಕರ ಆತ್ಮಹತ್ಯೆ. ಇಂಥಹ ಆತ್ಮಹತ್ಯಾ ಪ್ರಕರಣಗಳಿಗೆ ಸ್ವಾತಂತ್ರೋತ್ತರ ಭಾರತದಲ್ಲಿ ಪೂರ್ವನಿದರ್ಶನಗಳಿಲ್ಲ. ಈ ಆತ್ಮಹತ್ಯೆಗಳ ಬೇರುಗಳನ್ನು ನವ-ಉದಾರವಾದದ ಆಳ್ವಿಕೆಯಲ್ಲಿ ಬೆಲೆ-ಬೆಂಬಲವನ್ನು ಸರ್ಕಾರವು ನಿಲ್ಲಿಸಿದ ಪರಿಣಾಮವಾಗಿ ಉಂಟಾದ ಕೃಷಿ ಸಂಕಷ್ಟಗಳೊಂದಿಗೆ ಗುರುತಿಸಬಹುದು. ವಿಶೇಷವಾಗಿ, ರೊಕ್ಕದ ಬೆಳೆಗಳಿಗೆ ಹಿಂದೆ ಲಭ್ಯವಿದ್ದ ಬೆಲೆ-ಬೆಂಬಲವನ್ನು ನಿಲ್ಲಿಸಿದ ಪರಿಣಾಮವಾಗಿ ಈ ಬೆಳೆಗಳ ದೇಶೀಯ ಬೆಲೆಗಳು ವಿಶ್ವ ಮಾರುಕಟ್ಟೆ ಬೆಲೆಗಳಿಗೆ ಅನುಸಾರವಾಗಿ ಹುಚ್ಚಾಬಟ್ಟೆ ಏರಿಳಿತಗಳಿಗೆ ಒಳಗಾದವು. ಪರಿಣಾಮವಾಗಿ ರೈತರ ಸಂಕಷ್ಟಗಳು ಹೆಚ್ಚುತ್ತಾ ಹೋದವು.

ಈ ಕೃಷಿ ಸಂಕಷ್ಟದಿಂದಾಗಿ, 1991ರ ಮತ್ತು 2011ರ ಜನಗಣತಿಗಳ ನಡುವಿನ ಅವಧಿಯಲ್ಲಿ, ಒಂದೂವರೆ ಕೋಟಿ ಸಂಖ್ಯೆಯ "ಬೇಸಾಯಗಾರರು" ಕೃಷಿ ಚಟುವಟಿಕೆಗಳಿಂದ ಹೊರದಬ್ಬಲ್ಪಟ್ಟರು. ಅವರಲ್ಲಿ ಕೆಲವರು ಕೃಷಿ ಕೂಲಿಕಾರರ ದರ್ಜೆಗೆ ಇಳಿದರು ಮತ್ತು ಇನ್ನೂ ಕೆಲವರು ಉದ್ಯೋಗಗಳನ್ನು ಅರಸಿ ನಗರಗಳಿಗೆ ವಲಸೆ ಹೋದರು. ಡಿರಿಜಿಸ್ಟ್ ಅವಧಿಗೆ ಹೋಲಿಸಿದರೆ, ನವ-ಉದಾರವಾದದ ಅಡಿಯಲ್ಲಿ ಉದ್ಯೋಗಗಳ ಬೆಳವಣಿಗೆ ಅಲ್ಪವೇ. ಅಲ್ಪ-ಜಿಡಿಪಿ-ಬೆಳವಣಿಗೆಯ ಡಿರಿಜಿಸ್ಟ್ ಯುಗದಲ್ಲಿ ಉದ್ಯೋಗ ಬೆಳವಣಿಗೆಯ ವಾರ್ಷಿಕ ದರ ಸರಿಸುಮಾರು ಶೇ.2 ಎಂದು ಅಂದಾಜಿಸಲಾಗಿದೆ. ಉದ್ಯೋಗಗಳ ಈ ಅಲ್ಪ ಬೆಳವಣಿಗೆಯು, ವಸಾಹತುಶಾಹಿಯ ಬಳುವಳಿಯಾಗಿ ಅಸ್ತಿತ್ವದಲ್ಲಿದ್ದ ಶ್ರಮ ಮೀಸಲುಗಳ ಗಾತ್ರವನ್ನು ಸ್ವಲ್ಪವೂ ಕಡಿಮೆ ಮಾಡಿರಲಿಲ್ಲ. ನವ-ಉದಾರವಾದಿ ಆಳ್ವಿಕೆಯಲ್ಲಿ ಪರಿಸ್ಥಿತಿ ಉತ್ತಮಗೊಳ್ಳುವ ಬದಲು ಉದ್ಯೋಗಗಳ ಬೆಳವಣಿಗೆಯು ಮತ್ತಷ್ಟು ಕುಂಠಿತಗೊಂಡು ವಾರ್ಷಿಕ ಕೇವಲ ಶೇ. 1ರ ಮಟ್ಟಕ್ಕೆ ಇಳಿದಿದೆ. ಇದು, ಈ ಅವಧಿಯ ಜನಸಂಖ್ಯೆಯ ಬೆಳವಣಿಗೆಯ ಸರಾಸರಿ ದರಕ್ಕಿಂತಲೂ ಕಡಿಮೆ. ಹಾಗಾಗಿ, ಶ್ರಮ ಮೀಸಲುಗಳ ಗಾತ್ರ ಹೆಚ್ಚಿತು. ಅಷ್ಟೇ ಅಲ್ಲ, ಸಿಎಂಐಇ ಅಂದಾಜಿನ ಪ್ರಕಾರ, ಉದ್ಯೋಗಿಗಳ ಒಟ್ಟು ಸಂಖ್ಯೆಯು ಕಳೆದ ಐದು ವರ್ಷಗಳಲ್ಲಿ ಹೆಚ್ಚು ಕಡಿಮೆ ಬದಲಾಗದೇ ಉಳಿದಿದೆ.

ಜಿಡಿಪಿಯೊಂದಿಗೇ ಅಸಮಾನತೆಯ ವೇಗದ ಬೆಳವಣಿಗೆ

ಜಿಡಿಪಿ ವೇಗವಾಗಿ ಬೆಳೆಯುತ್ತಿದ್ದ ಸನ್ನಿವೇಶದಲ್ಲಿ, ಉದ್ಯೋಗ ಬೆಳವಣಿಗೆಯ ದರ ಇಳಿಕೆಯ ವಿದ್ಯಮಾನಕ್ಕೆ ಶ್ರಮ ಉತ್ಪಾದಕತಾ ಬೆಳವಣಿಗೆಯ ದರ ಹಠಾತ್ತನೆ ಏರಿದ್ದು ಕಾರಣ ಎಂದು ವಿವರಿಸಬಹುದು. ನವ-ಉದಾರವಾದವು ದೇಶದ ಅರ್ಥವ್ಯವಸ್ಥೆಯನ್ನು ಒಂದು ತೀವ್ರ ಸ್ವರೂಪದ ವಿದೇಶಿ ಸ್ಪರ್ಧೆಗೆ ಒಡ್ಡಿದ್ದರಿಂದಾಗಿ, ಶ್ರಮ ಉತ್ಪಾದಕತಾ ಬೆಳವಣಿಗೆಯ ದರ ಹಠಾತ್ತನೆ ಏರಿತು. ಪರಿಣಾಮವಾಗಿ ಹೆಚ್ಚಿದ ಶ್ರಮ ಮೀಸಲುಗಳ ಗಾತ್ರವು, ಕಾರ್ಮಿಕ-ಪಡೆಯ ತಲಾವಾರು



ನೈಜ ವರಮಾನವನ್ನು ಜೀವನಾಧಾರ ಮಟ್ಟಕ್ಕೆ ಕಟ್ಟಿಹಾಕಿತು. ಏರಿಕೆಯಾಗದ ಕಾರ್ಮಿಕರ ನೈಜ ವೇತನ ಮತ್ತು ಶ್ರಮ ಉತ್ಪಾದಕತೆ ಉನ್ನತವಾಗಿದ್ದ ಸನ್ನಿವೇಶದಲ್ಲಿ, ಜಿಡಿಪಿಯಲ್ಲಿ ಆರ್ಥಿಕ ಮಿಗುತಾಯದ ಪಾಲು ಹೆಚ್ಚಿತು. ಈ ರೀತಿಯಲ್ಲಿ ನವ-ಉದಾರವಾದಿ ಅವಧಿಯಲ್ಲಿ ಹೆಚ್ಚಿದ ಮಿಗುತಾಯವು ವರಮಾನದ ಅಸಮಾನತೆಗಳನ್ನು ಹೆಚ್ಚಿಸಿತು ಮತ್ತು ದೊಡ್ಡ ಬಂಡವಾಳಗಾರರು ಮಾತ್ರವಲ್ಲದೆ ನವ-ಉದಾರವಾದದ "ಬೆಂಬಲಿಗರ" ಮೇಲುಸ್ತರದ ಒಂದು ಸಣ್ಣ ಗುಂಪಿನ ಜನರು ಒಂದು ಅಭೂತಪೂರ್ವ ಮಟ್ಟದ ಐಶ್ವರ್ಯವನ್ನು ಬಾಚಿಕೊಂಡರು.

ವರಮಾನಗಳ ಅಸಮಾನತೆಯನ್ನು ಥಾಮಸ್ ಪಿಕೆಟ್ಟಿ ಮತ್ತು ಲ್ಯೂಕಾಸ್ ಚಾನ್ಸೆಲ್ ಎಂಬ ಇಬ್ಬರು ಫ್ರೆಂಚ್ ಅರ್ಥಶಾಸ್ತ್ರಜ್ಞರು ಅಧ್ಯಯನಕ್ಕೊಳಪಡಿಸಿದ್ದಾರೆ. ಈ ಉದ್ದೇಶಕ್ಕಾಗಿ ಅವರು ಭಾರತದ ಆದಾಯ ತೆರಿಗೆ ಇಲಾಖೆಯ ದತ್ತಾಂಶಗಳನ್ನು ಬಳಕೆ ಮಾಡಿಕೊಂಡಿದ್ದಾರೆ. ವರಮಾನಗಳ ಅಸಮಾನತೆಗಳು ಹೆಚ್ಚಿವೆ ಎಂಬುದನ್ನು ಅವರ ಅಂದಾಜುಗಳು ಹೇಳುತ್ತವೆ. ದೇಶದ ಒಟ್ಟು ಆದಾಯದಲ್ಲಿ ಎಷ್ಟು ಪಾಲನ್ನು ಮೇಲ್ತುದಿಯ ಶೇ. 1ರಷ್ಟು ಮಂದಿ ಹೊಂದಿದ್ದಾರೆ ಎಂಬುದನ್ನು ಅವರು ಗಮನಿಸುತ್ತಾರೆ. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ, 1982 ರಲ್ಲಿ, ಈ ಮಂದಿಯು ಹೊಂದಿದ್ದ ಪಾಲು ಶೇ. 6ರಷ್ಟು ಇಳಿಕೆಯಾಗಿತ್ತು. ಆನಂತರ, ವಿಶೇಷವಾಗಿ ನವ-ಉದಾರವಾದಿ ಅವಧಿಯಲ್ಲಿ, ಲಭ್ಯವಿರುವ ಇತ್ತೀಚಿನ 2014-15 ವರ್ಷದ ದತ್ತಾಂಶಗಳ ಪ್ರಕಾರ, 2013-14ರಲ್ಲಿ ಅವರು ಹೊಂದಿದ ಪಾಲು ಸುಮಾರು ಶೇ. 22ರ ಗರಿಷ್ಠ ಮಟ್ಟವನ್ನು ತಲುಪಿದೆ. ಈ ಪಾಲು, 1922ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಆದಾಯ ತೆರಿಗೆಯನ್ನು ಜಾರಿ ಮಾಡಿದ ಸಮಯದಿಂದ ಹಿಡಿದು 2013-14ರವರೆಗಿನ ಅವಧಿಯಲ್ಲಿ ಈ ಮಂದಿಯು ಹೊಂದಿದ ಪಾಲಿನಲ್ಲಿ ಅತಿ ಹೆಚ್ಚಿನದು. ಆರ್ಥಿಕ ಮಿಗುತಾಯದ ಪಾಲಿನ ಏರಿಕೆಯು ಭಾರತದಲ್ಲಿ ಮಾತ್ರವಲ್ಲದೆ ಇಡೀ ವಿಶ್ವದಲ್ಲಿ ಒಂದು ಅತಿ-ಉತ್ಪಾದನೆಯ ಬಿಕ್ಕಟ್ಟು ಸೃಷ್ಟಿಯಾಗಲು ಕಾರಣವಾಗಿದೆ ಮತ್ತು ನವ-ಉದಾರವಾದಿ ಆಳ್ವಿಕೆಯನ್ನು ಮುಂದಿನ ದಾರಿ ಕಾಣದ ಒಂದು ಹಂತಕ್ಕೆ ತಂದು ನಿಲ್ಲಿಸಿದೆ.

ಉದ್ಯೋಗಿ-ಪಡೆಯ **(work-force)** ನೈಜ ತಲಾ ಆದಾಯವು ವೃದ್ಧಿಸದಿರುವ ಪರಿಸ್ಥಿತಿಯಲ್ಲಿ, ಶ್ರಮ ಮೀಸಲು ಪಡೆಯ ಹೆಚ್ಚಳದಿಂದಾಗಿ, ಉದ್ಯೋಗಿ-ಪಡೆಯ (ಅಂದರೆ. ಉದ್ಯೋಗಿಗಳು, ಅರೆ-ಕಾಲಿಕ ಉದ್ಯೋಗಿಗಳು, ನಿರುದ್ಯೋಗಿಗಳು ಮತ್ತು ಅರೆ-ಉದ್ಯೋಗಿಗಳು ಇವರೆಲ್ಲರನ್ನೂ ಒಳಗೊಂಡ ಪಡೆ) ನೈಜ ತಲಾ ಆದಾಯವು ಒಟ್ಟಾರೆಯಾಗಿ ಕುಸಿದಿದೆ. ಹಾಗಾಗಿ, ಬಡತನಕ್ಕೆ ಜಾರಿದವರ ಸಂಖ್ಯೆ ಹೆಚ್ಚಿರುವುದರಲ್ಲಿ ಆಶ್ಚರ್ಯವೇನಿಲ್ಲ. ಖಚಿತವಾಗಿ ಹೇಳುವುದಾದರೆ, ರಸ್ತೆಗಳ ಮತ್ತು ಬೀದಿದೀಪಗಳ ರೂಪದಲ್ಲಿ ಉತ್ತಮವಾದ ಮೂಲಸೌಕರ್ಯ-ಸೌಲಭ್ಯಗಳು ಅವರಿಗೆ ಈಗ ಲಭಿಸಿವೆ, ನಿಜ. ಆದರೆ, ಅವರ ಅತ್ಯಂತ ಮೂಲಭೂತ

ಪುಟ 14 ಕ್ಕೆ

ನವ–ಉದಾರವಾದವು ಹಾಲಿನ ಹೊಳೆ–ಜೇನಿನ ಮಳೆ ಸುರಿಸಿದೆಯೇ......

ಪುಟ 13 ರಿಂದ

ಅವಶ್ಯಕತೆಯಾದ ಆಹಾರಧಾನ್ಯಗಳ ತಲಾ ಸೇವನೆ ಇಳಿಕೆಯಾಗಿರುವುದೂ ನಿಜ.

ಬಡತನದ ಪ್ರಮಾಣ–ಕ್ಯಾಲೊರಿ ಲೆಕ್ಕಾಚಾರದಲ್ಲಿ

ಭಾರತದಲ್ಲಿ ಬಡತನ ಕುರಿತ ಅಧ್ಯಯನವು, 1973–74ಅನ್ನು ಮೂಲ ವರ್ಷವಾಗಿ ಪರಿಗಣಿಸುವುದರೊಂದಿಗೆ ಮತ್ತು ಗ್ರಾಮೀಣ ಭಾರತದಲ್ಲಿ ಪ್ರತಿ ವ್ಯಕ್ತಿಯ ದೈನಿಕ 2200 ಕ್ಯಾಲೊರಿಗಳಿಗಿಂತ ಕಡಿಮೆ ಮಟ್ಟದ ಆಹಾರ ಸೇವನೆಯನ್ನು ಮತ್ತು ನಗರ ಭಾರತದಲ್ಲಿ ದೈನಿಕ 2100 ಕ್ಯಾಲೊರಿಗಳ ಆಹಾರ ಸೇವನೆಯನ್ನು, ಯೋಜನಾ ಆಯೋಗವು ಬಡತನವನ್ನು ವ್ಯಾಖ್ಯಾನಿಸುವ ಒಂದು ಮಾನದಂಡವಾಗಿ ಒಪ್ಪಿಕೊಳ್ಳುವ ಮೂಲಕ ಆರಂಭವಾಯಿತು. ಅಂದಿನಿಂದಲೂ ಈ ವ್ಯಾಖ್ಯಾನವನ್ನು ಬದಲಿಸಲು ಮತ್ತು ಬಡತನ ಇಳಿಕೆಯಾಗಿದೆ ಎಂಬುದನ್ನು ಬಿಂಬಿಸಲು, ಸರ್ಕಾರ ಮತ್ತು ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳು ಎಲ್ಲಾ ರೀತಿಯ ಕುತಂತ್ರಗಳನ್ನು ಅಳವಡಿಸಿಕೊಂಡಿವೆ. ಆದರೆ, ಯೋಜನಾ ಆಯೋಗವು ಒಪ್ಪಿರುವ ಈ ಮೂಲಭೂತ ಮತ್ತು ಸ್ಪಷ್ಟವಾದ ವ್ಯಾಖ್ಯಾನವನ್ನೇ ನಾವು ಅನುಸರಿಸೋಣ.

1973–74ರಲ್ಲಿ 2200 ಕ್ಯಾಲೋರಿಗಳಿಗಿಂತ ಕಡಿಮೆ ಆಹಾರ ಸೇವನೆಯ ಗ್ರಾಮೀಣ ಜನಸಂಖ್ಯೆಯ ಅನುಪಾತವು ಶೇ. 56.4ರಷ್ಟಿತ್ತು ಮತ್ತು 2100 ಕ್ಯಾಲೋರಿಗಳಿಗಿಂತ ಕಡಿಮೆ ಆಹಾರ ಸೇವನೆಯ ನಗರ ಜನಸಂಖ್ಯೆಯ ಅನುಪಾತವು ಶೇ. 49.2ರಷ್ಟಿತ್ತು. 1993–94ರ ವೇಳೆಗೆ ಗ್ರಾಮೀಣ ಭಾರತದಲ್ಲಿ ಈ ಅನುಪಾತವು ಶೇ. 58ಕ್ಕೆ ಏರಿತು ಮತ್ತು ನಗರ ಭಾರತದಲ್ಲಿ ಶೇ. 57ಕ್ಕೆ ಏರಿತು. ಆ ವೇಳೆಗೆ ನವ–ಉದಾರವಾದಿ ನೀತಿಗಳನ್ನು ಅದಾಗಲೇ ಅಳವಡಿಸಿಕೊಳ್ಳಲಾಗಿತ್ತು (ಈ ಅಳವಡಿಕೆಯು ಎಂಭತ್ತರ ದಶಕದ ಮಧ್ಯಭಾಗದಲ್ಲೇ ಆಗಿತ್ತು ಎಂದು ಕೆಲವರು ಹೇಳುತ್ತಾರೆ). ಆನಂತರ, 2011–12ರ ಹೊತ್ತಿಗೆ, ಎನ್‌ಎಸ್‌ಎಸ್ ಬಳಕೆ ಸಮೀಕ್ಷೆಯ (ರಾಷ್ಟ್ರೀಯ ಮಾದರಿ ಬಳಕೆ ಸಮೀಕ್ಷೆ) ಪ್ರಕಾರ, ಈ ಎರಡೂ ಪ್ರದೇಶಗಳಲ್ಲಿ ಏರಿಕೆಯಾದ ಬಡತನವು ಗಮನಾರ್ಹವಾಗಿತ್ತು – ಬಡವರ ಸಂಖ್ಯೆಯು ಗ್ರಾಮೀಣ ಭಾರತದಲ್ಲಿ ಶೇ. 68ಕ್ಕೆ ಮತ್ತು ನಗರ ಭಾರತದಲ್ಲಿ ಶೇ. 65ಕ್ಕೆ ಏರಿಕೆಯಾಗಿತ್ತು.

ಬಳಕೆ ವೆಚ್ಚ ಸಮೀಕ್ಷೆಯಲ್ಲಿ

ಮುಂದಿನ ಎನ್‌ಎಸ್‌ಎಸ್ ಬಳಕೆ ಸಮೀಕ್ಷೆಯನ್ನು 2017–18ರಲ್ಲಿ ನಡೆಸಲಾಯಿತು. ಆದರೆ, ಈ ಸಮೀಕ್ಷೆಯ ಅಂಕಿಅಂಶಗಳು, 2011ರ ಸಮೀಕ್ಷೆಗೆ ಹೋಲಿಸಿದರೆ, ತೋರಿಸಿದ ಪರಿಸ್ಥಿತಿ ಎಷ್ಟು ಭಯಾನಕವಾಗಿತ್ತು ಎಂದರೆ, ಮೋದಿ ಸರ್ಕಾರವು ಈ ಸಮೀಕ್ಷೆಯ ವರದಿಯನ್ನೇ ಬಚ್ಚಿಟ್ಟಿತು. ಅದನ್ನು ಬಚ್ಚಿಡುವ ಮೊದಲು ಸೋರಿಕೆಯಾದ ಅಂಕಿ ಅಂಶಗಳು 2011–12 ಮತ್ತು 2017–18ರ ನಡುವೆ ಗ್ರಾಮೀಣ ಭಾರತದಲ್ಲಿ ಸರಕು ಮತ್ತು ಸೇವೆಗಳ ನೈಜ ತಲಾ ಬಳಕೆಯ ವೆಚ್ಚಗಳು ಶೇ. 9ರಷ್ಟು ಅಭೂತಪೂರ್ವ ಕುಸಿತವನ್ನು ತೋರಿಸಿದವು. 2200 ಕ್ಯಾಲೊರಿಗಳಿಗಿಂತ ಕಡಿಮೆ ಆಹಾರ ಸೇವನೆಯ ಗ್ರಾಮೀಣ ಜನಸಂಖ್ಯೆಯ ಅಂದಾಜು ಅನುಪಾತವು 2017–18ರ ವರ್ಷದಲ್ಲಿ ಶೇ. 80ಕ್ಕೆ ಬರುತ್ತದೆ ಎಂದು ತೋರಿಸಿದವು. (ಈ ಅಂಕಿ ಅಂಶಗಳನ್ನು ಉತ್ಸಾ ಪಟ್ನಾಯಕ್ ಅವರ 'ಬಡತನ ಪ್ರಶ್ನೆಯ ಅನ್ವೇಷಣೆ' ಎಂಬ ಈ ಹಿಂದೆ ಐಸಿಎಸ್‌ಎಸ್‌ಆರ್‌ಗೆ ಸಲ್ಲಿಸಿದ, ನಂತರ ನವೀಕರಿಸಿದ ವರದಿಯಿಂದ ತೆಗೆದುಕೊಳ್ಳಲಾಗಿದೆ).

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕವು, ಈ ಸೂಚ್ಯಂಕದಲ್ಲಿರುವ 125 ದೇಶಗಳಲ್ಲಿ, 111ನೇ ಸ್ಥಾನದಲ್ಲಿದೆ. ಭಾರತದ ಈ ಶ್ರೇಯಾಂಕವು ನೆರೆಯ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ನೇಪಾಳಗಳಿಗಿಂತ ಕೆಳಗಿದೆ ಎಂಬುದು ಆಶ್ಚರ್ಯವಲ್ಲ.

ಆಹಾರಧಾನ್ಯಗಳ ತಲಾ ಲಭ್ಯತೆಯಲ್ಲಿ

ಬಡತನದ ಈ ಅಂಕಿಅಂಶಗಳು, ಆಹಾರಧಾನ್ಯಗಳ ತಲಾ ಲಭ್ಯತೆಯ ಅಂಕಿ ಅಂಶಗಳು ಒಟ್ಟಾರೆಯಾಗಿ ಏನನ್ನು ಸೂಚಿಸುತ್ತವೆಯೊ ಅದನ್ನು ಸಮರ್ಥಿಸುತ್ತವೆ. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಬ್ರಿಟಿಷ್ ಭಾರತದಲ್ಲಿ ಆಹಾರಧಾನ್ಯಗಳ ತಲಾ ಲಭ್ಯತೆಯು ವಾರ್ಷಿಕ ಸುಮಾರು 200 ಕೆಜಿಯಷ್ಟಿತ್ತು. ಇದು ಸ್ವಾತಂತ್ರ್ಯದ ಸಮಯದ ವೇಳೆಗೆ ಸುಮಾರು 138 ಕೆಜಿಗೆ ಒಂದೇ ಸಮನಾಗಿ ಇಳಿಯಿತು. ಅಥವಾ, 1946–47ಕ್ಕೆ ಅಂತ್ಯಗೊಂಡ ಐದು ವರ್ಷಗಳ ಸರಾಸರಿಯನ್ನು ತೆಗೆದುಕೊಂಡರೆ, ತಲಾ ಲಭ್ಯತೆಯು ವಾರ್ಷಿಕ 150 ಕೆಜಿಗಿಂತ ತುಸು ಕಡಿಮೆ ಇತ್ತು. ಸ್ವಾತಂತ್ರ್ಯಾನಂತರದಲ್ಲಿ, ಈ ಇಳಿಮುಖ ಪ್ರವೃತ್ತಿಯನ್ನು ಸುಮಾರು 1980ರ ದಶಕದ ಅಂತ್ಯದ ವೇಳೆಗೆ ತಿರುಗುಮುರುಗು ಮಾಡಲಾಯಿತು. ಅಂದಿನಿಂದ ತಲಾ ಆಹಾರಧಾನ್ಯದ ಲಭ್ಯತೆಯು ಹೆಚ್ಚು ಕಡಿಮೆ (ಒಂದು ಇಳಿಕೆಯ ನಂತರದ ಚೇತರಿಕೆಯೊಂದಿಗೆ) ಸ್ಥಿರವಾಗಿಯೇ ಉಳಿದಿದೆ. ಆದರೆ, ಜನಸಂಖ್ಯೆಯ ಮೇಲ್ತುದಿಯ ಶೇ. 10ರಷ್ಟು ಮಂದಿ (ಅವರು ಶ್ರೀಮಂತರು ಮತ್ತು ಅವರ ಶ್ರೀಮಂತಿಕೆ ಹೆಚ್ಚುತ್ತಾ ಹೋದದ್ದನ್ನು ನಾವು ಗಮನಿಸಿದ್ದೇವೆ) ಬಳಸುವ ಸಂಸ್ಕರಿತ ಆಹಾರಗಳಿಗೆ ಮತ್ತು ಧಾನ್ಯ–ರೂಪದ ಪಶು ಆಹಾರ ಉತ್ಪನ್ನಗಳಿಗೆ ಬೇಕಾಗುವ ಧಾನ್ಯಗಳ ಪರೋಕ್ಷ ಬಳಕೆಯ ಪ್ರಮಾಣವನ್ನು ನಾವು ಸರಿಯಾಗಿ ಊಹಿಸಿ ಲೆಕ್ಕಹಾಕಿದರೆ, ಆಗ ಧಾನ್ಯಗಳ ತಲಾ ಬಳಕೆಯ ಮಟ್ಟದಲ್ಲಿ ಏರಿಕೆ ಕಂಡುಬರುತ್ತದೆ. ಆಗ, ಉಳಿದ ಜನರ ತಲಾ ಲಭ್ಯತೆ ಕಡಿಮೆಯಾಗಿರಲೇಬೇಕು.

ಹಾಗಾಗಿ, ನಾವು ಸ್ಥೂಲ ಚಿತ್ರವನ್ನು ತೆಗೆದುಕೊಳ್ಳಲಿ ಅಥವಾ ಎನ್‌ಎಸ್‌ಎಸ್ ನಡೆಸಿದ ಗ್ರಾಹಕ ವೆಚ್ಚ ಸಮೀಕ್ಷೆಯ ಫಲಿತಾಂಶಗಳನ್ನು ತೆಗೆದುಕೊಳ್ಳಲಿ, ಅದರಿಂದ ಸುಸಂಗತವಾಗಿ ಹೊರಹೊಮ್ಮುವ ಸಂಗತಿ ಏನೆಂದರೆ, ಸಂಪೂರ್ಣ ಬಡತನದಲ್ಲಿರುವವರ ಅನುಪಾತವು ಏರಿಕೆಯಾಗಿದೆ ಎಂಬುದು. ಡಿರಿಜಿಸ್ಟ್ ಅವಧಿಯಲ್ಲಿ ಬಹುಶಃ ಇಳಿಯುತ್ತಿದ್ದಿರಬಹುದಾದ ಈ ಪ್ರಮಾಣವು ನವ–ಉದಾರವಾದದ ಅಡಿಯಲ್ಲಿ ಏರಿಕೆಯಾಗಿದೆ.

ಈ ಸತ್ಯಾಂಶವನ್ನು ನವ–ಉದಾರವಾದದ ಪ್ರಚಾರಕರು ಅಡಗಿಸುವುದು ಮಾತ್ರವಲ್ಲದೆ, ನವ–ಉದಾರವಾದಿ ಯುಗವು ಎಲ್ಲರಿಗೂ ಹಾಲು–ಜೇನಿನ ಅವಧಿಯಾಗಿದೆ ಎಂದು ಸಾಬೀತುಪಡಿಸಲು, ಅಪ್ರಾಮಾಣಿಕವಾಗಿ, ಹಲವಾರು ಕುತಂತ್ರಗಳನ್ನು ಬಳಸುತ್ತಾರೆ.

ಮೋದಿಯವರ 'ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ'.......

ಪುಟ 11 ರಿಂದ

ಬೇಡಿಕೆ ಹೆಚ್ಚಳವಾಗದೆ ಹೂಡಿಕೆ ಬರುವುದಿಲ್ಲ

ಹೂಡಿಕೆದಾರರನ್ನು ಹೆಚ್ಚು ಹೂಡಿಕೆ ಮಾಡಲು ಉತ್ತೇಜಿಸುವುದು ಮೋದಿ ಸರ್ಕಾರದ ನೀತಿಗಳ ಮುಖ್ಯ ತತ್ವವಾಗಿದೆ. ಉದ್ಯೋಗಾವಕಾಶ ಸೃಷ್ಟಿಸುವ ಹೆಸರಿನಲ್ಲಿ ದೊಡ್ಡ ಹೂಡಿಕೆದಾರರಿಗೆ ಸರ್ಕಾರ ಹಲವು ಅನುದಾನಗಳನ್ನು ನೀಡುತ್ತಿದ್ದರೂ ಉದ್ಯೋಗಗಳನ್ನು ಸೃಷ್ಟಿಸುವ ಜವಾಬ್ದಾರಿಯನ್ನು ಈ ಸರ್ಕಾರ ಈಡೇರಿಸುತ್ತಿಲ್ಲ. ವಿದೇಶಿ ಹೂಡಿಕೆದಾರರಿಗೂ ಸಾಕಷ್ಟು ರಿಯಾಯಿತಿ ಕೊಡುತ್ತಿದೆ. ಹೂಡಿಕೆ ಹೆಚ್ಚಾದಷ್ಟೂ ಆರ್ಥಿಕ ಬೆಳವಣಿಗೆ ದರ ಹೆಚ್ಚುತ್ತದೆ ಎಂಬುದು ಇದರ ಹಿಂದಿರುವ ವಿಚಾರ. ಆದಾಗ್ಯೂ, ಈ ವಿಧಾನಗಳು ನಿಷ್ಪ್ರಯೋಜಕವಾಗಿವೆ. ಮೊದಲ ಕಾರಣ: ಮಾರುಕಟ್ಟೆಯಲ್ಲಿ ಕೆಲವು ಏಕಸ್ವಾಮ್ಯದಾರರು ಪ್ರಾಬಲ್ಯ ಹೊಂದಿರುವಾಗ, ಮಾರುಕಟ್ಟೆಯಲ್ಲಿ ಕೊಳ್ಳುವ ಶಕ್ತಿ ಅಥವಾ ಬೇಡಿಕೆ ಎಷ್ಟು ಹೆಚ್ಚಾಗಬಹುದು ಎಂಬ ನಿರೀಕ್ಷೆಯ ಆಧಾರದ ಮೇಲೆ ಹೂಡಿಕೆಯ ಮೊತ್ತವನ್ನು ನಿರ್ಧರಿಸಲಾಗುತ್ತದೆ. ಅಂದರೆ ಮಾರುಕಟ್ಟೆಯಲ್ಲಿ ಕೊಳ್ಳುವ ಶಕ್ತಿ ಹೆಚ್ಚಿಸಲು ಕ್ರಮಕೈಗೊಂಡರೆ ಮಾತ್ರ ಹೆಚ್ಚುವರಿ ಹೂಡಿಕೆ ಬರುತ್ತದೆ. ಬೇಡಿಕೆಯನ್ನು ಹೆಚ್ಚಿಸಲು ಯಾವುದೇ ಕ್ರಮಗಳಿಲ್ಲದಿದ್ದರೆ, ಹೂಡಿಕೆದಾರರು ಹೆಚ್ಚಿನ ಹೂಡಿಕೆ ಮಾಡುವುದಿಲ್ಲ. ಸರ್ಕಾರ ಹೂಡಿಕೆದಾರರಿಗೆ ಹೆಚ್ಚುವರಿ ಪ್ರೋತ್ಸಾಹ ನೀಡುವುದರಿಂದ ಕಲ್ಯಾಣ ಯೋಜನೆಗಳ ಮೇಲಿನ ವೆಚ್ಚ ಕಡಿಮೆಯಾಗುತ್ತದೆ. ಪರಿಣಾಮವಾಗಿ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಗುತ್ತದೆ. ಇದು ಉದ್ಯೋಗ ಕಡಿತಕ್ಕೆ ಮತ್ತಷ್ಟು ಕಾರಣವಾಗುತ್ತದೆ.

ಖಾಲಿ ಹುದ್ದೆಗಳನ್ನು ತುಂಬುತ್ತಿಲ್ಲ

ಲಾಭದಲ್ಲಿರುವ ಸಾರ್ವಜನಿಕ ವಲಯದ ಕಂಪನಿಗಳನ್ನೂ ಮಾರಾಟ ಮಾಡಲಾಗುತ್ತಿದೆ. ಇದರಿಂದಾಗಿ ಹೊಸ ಉದ್ಯೋಗಗಳು ಮಾತ್ರವಲ್ಲ, ಇರುವ ಉದ್ಯೋಗಗಳೂ ನಷ್ಟವಾಗುತ್ತಿವೆ. ಜಗತ್ತಿನ ಅತಿ ದೊಡ್ಡ ಸಾರಿಗೆ ವ್ಯವಸ್ಥೆಯಾಗಿರುವ ರೈಲ್ವೇಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಖಾಲಿ ಬಿದ್ದಿರುವುದು ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂಬುದು ಸ್ಪಷ್ಟವಾಗಿದೆ. ಸಾರ್ವಜನಿಕ ವಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಯತ್ನ ನಡೆಯುತ್ತಿಲ್ಲ. ಆರ್ಥಿಕ ಸಂಪನ್ಮೂಲಗಳ ಕೊರತೆಯೇ ಕಾರಣ ಎಂದು ಅದು ಹೇಳಿದೆ. ಆದರೆ ಆರ್ಥಿಕ ಸಂಪನ್ಮೂಲಗಳ ಕೊರತೆಗೆ ಕಾರಣವೇನು? ಹೂಡಿಕೆದಾರರಿಗೆ ಹೆಚ್ಚುವರಿ ರಿಯಾಯಿತಿಗಳು ಕಾರಣವೇ? ಒಂದೆಡೆ ನಿರುದ್ಯೋಗ ಹೆಚ್ಚುತ್ತಿರುವುದು ಅಂಕಿಅಂಶಗಳಿಂದ ಬಹಿರಂಗವಾದರೆ, ಇನ್ನೊಂದೆಡೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಖರ್ಚು ಮಾಡಬೇಕಾದ ಹಣವನ್ನು ಸರ್ಕಾರ ಕಡಿತಗೊಳಿಸುತ್ತಿದೆ. ಜನತೆ ಎಚ್ಚೆತ್ತುಕೊಂಡು, ಮೋದಿ ಸರ್ಕಾರದ ಸ್ವದೇಶಿ ಮತ್ತು ವಿದೇಶಿ ಬಂಡವಾಳಗಾರರ ಪರವಾದ ನವ ಉದಾರವಾದಿ ನೀತಿಗಳ ವಿರುದ್ಧ ಧ್ವನಿ ಎತ್ತದಿದ್ದರೆ, ಈ ನೀತಿಗಳನ್ನು ಹಿಮ್ಮೆಟ್ಟಿಸದಿದ್ದರೆ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಗಲಾರದು.

ಆದಷ್ಟು ಬೇಗ ಜಾತಿ ಜನಗಣತಿ ವರದಿ ಪ್ರಕಟಗೊಳ್ಳಲಿ.....

ಪುಟ 16 ರಿಂದ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರಾದ ಯು.ಬಸವರಾಜ್ ರವರು ಮಾತನಾಡಿ, ಜಾತಿ ಜನಗಣತಿ ಮಾಹಿತಿಯಿಂದ ನಮ್ಮ ಜಾತಿಗೆ ಎಂ.ಎಲ್.ಎ., ಎಂ.ಎಲ್.ಸಿ. ಅಧಿಕಾರ ಸಿಗುತ್ತದೆ ಎಂಬ ಪೈಪೋಟಿ ನಡೆಯುತ್ತಿರುವುದನ್ನು ಕಾಣುತ್ತೇವೆ. ಜನಸಂಖ್ಯೆಗೆ ಅನುಗುಣವಾಗಿ ನಾವು ಪ್ರಾಧಾನ್ಯತೆ ನೀಡಬೇಕು. ಹಿಂದುಳಿದ ಸಮುದಾಯಗಳು ಒಟ್ಟಾಗಿ ಈ ಸವಾಲನ್ನು ಸ್ವೀಕರಿಸಿ ಜನರನ್ನು ಜಾಗೃತಿಗೊಳಿಸುವ ಕೆಲಸವನ್ನು ಮಾಡಬೇಕು ಎಂದು ಕರೆ ನೀಡಿದರು. ಚರ್ಚೆ ವಿಮರ್ಶೆಯ ಮೂಲಕ ಕೊರತೆಗಳಿದ್ದರೆ ಸರಿಪಡಿಸಿ ಜಾರಿಗೊಳಿಸುವ ಕೆಲಸ ಆಗಬೇಕು. ಯಾವುದೇ ಕಾರಣಕ್ಕೂ ವರದಿಯನ್ನು ತಡೆಹಿಡಿಯಬಾರದು ಎಂದು ಅಭಿಪ್ರಾಯಪಟ್ಟರು.

ಅತಿ ಹಿಂದುಳಿದ ಜಾತಿಗಳ ಮುಖಂಡರಾದ ಎಂ. ನಾಗರಾಜ್‌ರವರು ಮಾತನಾಡಿ, ಕಾಂತರಾಜ್ ವರದಿ ಜಾರಿಯಾದರೆ ಇರುವ ಆತಂಕಗಳೇನು? ಅರ್ಜಿ ಹಾಕದ, ಚಳುವಳಿ, ಹೋರಾಟ ಮಾಡದ ಬ್ರಾಹ್ಮಣ ಸಮುದಾಯಕ್ಕೆ 10 ಶೇಕಡಾ ಮೀಸಲು ನೀಡಿರುವುದು, ನಿಗಮಗಳಿಗೆ ಹಣ ಬಿಡುಗಡೆ ಮಾಡಿರುವುದು ಸರಿಯಾದ ಕ್ರಮವಲ್ಲ. ಅವಕಾಶದಿಂದ ವಂಚಿತರಾದ ಹಲವು ಹಿಂದುಳಿದ ಜಾತಿಗಳಿಗೆ ಸರ್ಕಾರ ಪ್ರಾಧಾನ್ಯತೆ ನೀಡಬೇಕು. ಅಲೆಮಾರಿ ಸಮುದಾಯಕ್ಕೆ ಕೇವಲ ರೂ. 5 ಕೋಟಿಯನ್ನು ಸರ್ಕಾರ ನೀಡಿದೆ ಎಂದು ಹೇಳಿದರು.

ದಲಿತ ಮುಖಂಡರಾದ ಡಾ. ಆರ್ ಮೋಹನ್ ರಾಜ್ ಅವರು ಮಾತನಾಡಿ, ➚



ಬಳ್ಳಾರಿ ಮಹಾ ನಗರಪಾಲಿಕೆ ಮೇಯರ್ ಚುನಾವಣೆ ಯನ್ನು ಪದೇ ಪದೇ ಮುಂದೂಡಿಕೆ – ಸಿಪಿಐ(ಎಂ) ಖಂಡನೆ

ಬಳ್ಳಾರಿ ಮಹಾ ನಗರಪಾಲಿಕೆ ಮೇಯರ್ ಚುನಾವಣೆ ಯನ್ನು ಪದೇ ಪದೇ ಮುಂದೂಡುವುದು ಸರಿಯಾದ ಕ್ರಮವಲ್ಲ,

ಅದು ಪ್ರಜಾಪ್ರಭುತ್ವ ವಿರೋಧಿ ಕ್ರಮ ಎಂದು ಟೀಕಿಸಿರುವ ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್ವಾದಿ – ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿಯು ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದೆ.


ಪ್ರಜಾಪ್ರಭುತ್ವ ವ್ಯವಸ್ಥೆ ಯಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತ ದ ಮೂಲಕ ಅಧಿಕಾರವಿಕೇಂದ್ರೀಕರಣ ಮತ್ತು ಜನತೆಗೆ ಹತ್ತಿರವಾದ ಆಡಳಿತ ಎನ್ನುವುದು ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಸಂವಿಧಾನ – ಶಾಸನ ಬದ್ಧವಾಗಿ ಜನರಿಂದ ಆಯ್ಕೆ ಯಾಗಿರುವ ಮಹಾನಗರ ಪಾಲಿಕೆಗೆ ಅಧಿಕಾರ ನಡೆಸದಿರುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ ಎಂದಿದೆ.

ಬಳ್ಳಾರಿ ಎನ್. ಐ. ಇ. ನಡೆಸಿದ ತನಿಖಾ ದಾಳಿ ಯನ್ನೇ ನೆಪಮಾಡಿಕೊಂಡು ಮತ್ತು ಗಲಾಟೆ ಗಲಭೆ ಉಂಟಾಗುವ ಸಂಭವ ಇದೆ ಎಂದು ಬಳ್ಳಾರಿ ಜಿಲ್ಲಾಧಿಕಾರಿಗಳು ಮತ್ತು ಬಳ್ಳಾರಿ ಜಿಲ್ಲಾ ಪೊಲೀಸ್ ಅಧೀಕ್ಷಕರ ವರದಿ ಆಧರಿಸಿ ಗುಲ್ಬರ್ಗ ವಿಭಾಗದ ಪ್ರಾದೇಶಿಕ ಆಯುಕ್ತರು ಬಳ್ಳಾರಿ ಮಹಾನಗರ ಪಾಲಿಕೆಯ 22ನೇ ಮೇಯರ್ ಮತ್ತು ಉಪ ಮೇಯರ್ ಚುನಾವಣೆಯನ್ನು ಮುಂದೂಡಲು ದಿನಾಂಕ 18–12–2023 ರಂದು ಅದೇಶ ನೀಡಿರುತ್ತಾರೆ. ವಾಸ್ತವದಲ್ಲಿ ಕಾಂಗ್ರೆಸ್ ಪಕ್ಷದ ಒಳಗಿನ ಗುಂಪುಗಾರಿಕೆಯಿಂದ ಒಮ್ಮತದ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗದಿರುವುದೇ ಚುನಾವಣೆ ಮುಂದೂಡುವುದಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾದ ಪಾಲಿಕೆ ಸದಸ್ಯರ ನಡುವೆ ಪ್ರಭಾವಿ ನಾಯಕರ ಗುಂಪುಗಾರಿಕೆಯಿಂದ ಒಮ್ಮತದ ಅಭ್ಯರ್ಥಿ ಆಯ್ಕೆ ಮಾಡಲು ವಿಫಲ ವಾಗಿರುವುದು ಕಾರಣ ಎಂದು ಜನ ಸಾಮಾನ್ಯರು ಸಹ ಮಾತನಾಡಿ ಕೊಳ್ಳುತಿದ್ದಾರೆ.

ಮಹಾನಗರ ಪಾಲಿಕೆ ಚುನಾವಣೆ ಅಧಿಕಾರಿಗಳು ಪ್ರಭಾವಿ ನಾಯಕರ ಪ್ರಭಾವಕ್ಕೆ ಒಳಪಟ್ಟು ಈ ರೀತಿ ಕ್ರಮವನ್ನು ಜಾರಿ ಮಾಡಿರುವುದು, ಆಡಳಿತವನ್ನು ದುರ್ಬಳಕೆ ಮಾಡಿಕೊಂಡಿರುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ ವಾಗಿದೆ. ಆದ್ದರಿಂದ ಕೂಡಲೇ ಮಹಾನಗರ ಪಾಲಿಕೆ ಮೇಯರ್ ಗಳ ಚುನಾವಣೆ ನಡೆಸಲುಲು ಕ್ರಮ ವಹಿಸ ಮುಂದಾಗಬೇಕು ಎಂದು ಸಿಪಿಐ(ಎಂ) ಪಕ್ಷದ ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಜೆ. ಸತ್ಯಬಾಬು ಒತ್ತಾಯಿಸಿದ್ದಾರೆ.

ಭಗತ್ ಸಿಂಗ್



ಸ್ವಾತಂತ್ರ್ಯ ಸಮರದ
ಹೂ ಬನದಲ್ಲಿ
ಅರಳಿದ ಹೂ ನೀನು

ಆಂಗ್ಲರ ಎದೆಯಲಿ
ನಡುಕ ಹುಟ್ಟಿಸಿದ
ಸಿಂಹದ ಮರಿ ನೀನು

ದೇಶ ಪ್ರೇಮದ
ಉತ್ಕಟ ಭಾವದ
ಭಾವಗೀತೆ ನೀನು

ಸಮತೆಯ ತೋಟದ
ಗುಲಾಬಿ ಹೂಗಳ
ಕನಸುಗಾರ ನೀನು

ಲೋಕವನರಿಯಲು
ಪುಸ್ತಕ ಹಿಡಿದ
ಮಹಾಜ್ಞಾನಿ ನೀನು

ಶೋಷಣೆ ಬೇರನು
ಕಿತ್ತೆಸೆಯಲು
ಆಯುಧ ಹಿಡಿದವನು

ಯುವಕರ ಎದೆಯಲಿ
ಕ್ರಾಂತಿ ಬೀಜವ
ಬಿತ್ತಿದವನು ನೀನು

ಗುರಿ ಸಾಧನೆಗೆ
ಬಂದೂಕು ಹಿಡಿದು
ಘರ್ಜಿಸಿದವ ನೀನು

ಸೂರ್ಯ ಮುಳುಗದ
ಸಾಮ್ರಾಜ್ಯವನು
ನಡುಗಿಸಿದವ ನೀನು

ನಗುತಲಿ ನೇಣಿಗೆ
ಕೊರಳನೊಡ್ಡಿದ
ಕೆಚ್ಚೆದೆಕಲಿ ನೀನು

ದೇಶಕ್ಕಾಗಿ
ದೇಹ ಅರ್ಪಿಸಿದ
ಮಹಾತ್ಯಾಗಿ ನೀನು

ಮಹಾಸಮರದಲಿ
ಮಿಂಚಿ ಬೆಳಗಿದ
ಅಮರಜ್ಯೋತಿ ನೀನು

ಎದೆಯ ಬಾನಿನಲಿ
ನಿತ್ಯ ಬೆಳಗುವ
ಬೆಳ್ಳಿ ಚುಕ್ಕಿ ನೀನು

–ಹುಲಿಕಟ್ಟಿ ಚನ್ನಬಸಪ್ಪ

ಸಾವಿರಾರು ಸಂಖ್ಯೆಯ ಮುಸ್ಲಿಂ ಹೆಣ್ಣುಮಕ್ಕಳನ್ನು ಶಿಕ್ಷಣದ ಕಕ್ಷೆಯಿಂದ ಹೊರತಳ್ಳಿದ ಹಿಜಾಬ್ ವಿವಾದಕ್ಕೆ ತೆರೆ ಎಳೆಯುವ ಕರ್ನಾಟಕದ ಮುಖ್ಯಮಂತ್ರಿಗಳ ಹೇಳಿಕೆಗೆ ಸ್ವಾಗತ

ಹಿಜಾಬ್ ನಿಷೇಧ ವಾಪಸ್ ಪಡೆಯಲು ಕರ್ನಾಟಕದ ಮುಖ್ಯಮಂತ್ರಿಗಳು ಸೂಚನೆ ಮಾಡಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ಇದನ್ನು ಸ್ವಾಗತಿಸುತ್ತದೆ. ಶಿರವಸ್ತ್ರದ ವಿವಾದ ಎದ್ದಾಗಿನಿಂದಲೂ ಮಹಿಳೆಯರ ಶಿಕ್ಷಣದ ಹಕ್ಕನ್ನು ಕಿತ್ತುಕೊಳ್ಳುವ ಯಾವ ಕ್ರಮವನ್ನೂ ಬೆಂಬಲಿಸುವುದಿಲ್ಲ ಎಂದು ಸಂಘಟನೆ ಪ್ರತಿಪಾದಿಸುತ್ತ ಬಂದಿದೆ. ವಸ್ತ್ರ ಸಂಹಿತೆಯೂ ಸೇರಿದಂತೆ ಮಹಿಳೆಯರ ಆಯ್ಕೆ ಸ್ವಾತಂತ್ರ್ಯಕ್ಕೆ ತಡೆಯೊಡ್ಡುವ ಯಾವ ಕ್ರಮವನ್ನೂ ಜನವಾದಿ ಮಹಿಳಾ ಸಂಘಟನೆ ಬೆಂಬಲಿಸುವುದಿಲ್ಲ. ಅದೇ ಸಂದರ್ಭದಲ್ಲಿ ಯಾವುದೇ ಕಾರಣದಿಂದ ಶಿಕ್ಷಣದ ಅವಕಾಶದಿಂದ ವಂಚಿತರಾಗುವ ಸ್ಥಿತಿ ಇದೆ ಎಂದರೆ ಶಿಕ್ಷಣ ಪಡೆಯುವುದು ಮೊದಲ ಆದ್ಯತೆಯಾಗಬೇಕು ಎಂದು ಪ್ರತಿಪಾದಿಸುತ್ತದೆ. ಆ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ಈ ನಿರ್ಧಾರವನ್ನು ಸ್ವಾಗತಿಸುತ್ತ, ಶಿಕ್ಷಣ ಇಲಾಖೆಯು ಈ ಮೊದಲು ಹೊರಡಿಸಿದ ಸಮವಸ್ತ್ರ ಕಡ್ಡಾಯದ ವಿವಾದಿತ ಸುತ್ತೋಲೆಯ ಬಗ್ಗೆ ಕೂಡ ಗಮನ ಹರಿಸಬೇಕೆಂದು ಒತ್ತಾಯಿಸುತ್ತದೆ. ಅದೇ ಸಂದರ್ಭದಲ್ಲಿ ಮುಸ್ಲಿಂ ಮೂಲಭೂತವಾದಿಗಳಿಗೆ ಇದು ಶಿರವಸ್ತ್ರ ಕಡ್ಡಾಯಗೊಳಿಸಲು ಸಿಕ್ಕ ಅವಕಾಶವಾಗಬಾರದೆಂದೂ ಬಯಸುತ್ತೇವೆ ಎಂದು ಹೇಳಿದೆ.

ಹಿಂದಿನ ಬಿ.ಜೆ.ಪಿ.ಸರಕಾರದ ಅವಧಿಯಲ್ಲಿ ಇದ್ದಕ್ಕಿದ್ದಂತೆ ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಶಿರವಸ್ತ್ರ ಕುರಿತು ವಿವಾದ ಎಬ್ಬಿಸಲಾಯಿತು. ಎದ್ದಲ್ಲಿಯೇ ಅದನ್ನು ಸಮಾಧಾನಕರವಾಗಿ ಪರಿಹರಿಸುವ ಬದಲು ಉರಿಯುವ ಬೆಂಕಿಗೆ ತುಪ್ಪ ಸುರಿದು ಗದ್ದಲ ಎಬ್ಬಿಸಲಾಯಿತು. ಹೀಗೊಂದು ನಡೆಯುವ ಪೂರ್ವ ಸೂಚನೆಯಿದ್ದಂತೆ ತತ್ ಕ್ಷಣವೇ ಲೋಡ್ ಗಟ್ಟಲೇ ಕೇಸರಿ ಶಾಲುಗಳು ಸರಬರಾಜಾಗಿ ಚಿಕ್ಕದೊಂದು ತಲೆವಸ್ತ್ರದ ಸಂಗತಿಯನ್ನು ದೂಷಣೆ ಪ್ರತಿದೂಷಣೆಗಳಾಗಿ ಮಾರ್ಪಡಿಸಿ ಅದರ ರಾಜಕೀಯ ಲಾಭಕ್ಕಾಗಿ ಧರ್ಮಗಳ ನೆಲೆಯ ವಿವಾದವನ್ನಾಗಿ ಪರಿವರ್ತಿಸಲಾಯಿತು. ಅದನ್ನೊಂದು ಧಾರ್ಮಿಕ ವಿಷಯವನ್ನಾಗಿಸಿ ಇಡೀ ರಾಜ್ಯಕ್ಕೆ ಹಬ್ಬಿಸಿ ಲಾಭಕ್ಕೆ ಯತ್ನಿಸಲಾಯಿತು.

ಸಂವಿಧಾನದ ಅಡಿಯಲ್ಲಿ ಕೆಲಸ ಮಾಡಬೇಕಾದ ರಾಜ್ಯ ಸರಕಾರ ಯುವತಿಯರ ಶಿಕ್ಷಣದ ಹಕ್ಕನ್ನು ಖಾತ್ರಿಗೊಳಿಸುವ ಗಟ್ಟಿ ನಿರ್ಧಾರ ತೆಗೆದುಕೊಳ್ಳುವ ಬದಲು ತಮ್ಮ ಮೂಲಗುಣವಾದ ಧರ್ಮದ್ವೇಷದ ಬೆಂಕಿ ಹಚ್ಚಲು ಇದನ್ನೂ ಬಳಸಿಕೊಂಡ ಅವಿವೇಕತನಕ್ಕೆ ನಾವೆಲ್ಲ ಸಾಕ್ಷಿಗಳಾದೆವು. ರಾಜ್ಯದ ವಿವಿಧ ಭಾಗಗಳಲ್ಲಿ ಬಡ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಯಾವಾಗಿನಂತೆ ಈ ಪ್ರಕರಣಕ್ಕೂ ದಾಳವಾಗಿ ಬಳಸಿಕೊಳ್ಳಲಾಯಿತು. ಪ್ರಕರಣವು ನ್ಯಾಯಾಲಯದ ಮೆಟ್ಟಿಲೇರಿದರೂ ನ್ಯಾಯದ ದಾರಿ ಇನ್ನೂ ದೂರವಿದೆ. ಶಿಕ್ಷಣಕ್ಕೆ ತೆರೆದುಕೊಂಡ ಮೊದಲ ತಲೆಮಾರಿನ ಸಾವಿರಾರು ಯುವತಿಯರು ಆಧುನಿಕ ಆಲೋಚನಾ ಕ್ರಮಕ್ಕೆ ತೆರೆದುಕೊಳ್ಳುವ ಅವಕಾಶದಿಂದ ವಂಚಿತರಾಗಿ ಧರ್ಮದ ಕಟ್ಟು ಕಟ್ಟಳೆಯ ಒಳಗೆ ಇನ್ನಷ್ಟು ಸಿಲುಕಿಕೊಳ್ಳುವ ಸ್ಥಿತಿ ನಿರ್ಮಾಣವಾಯಿತು.

ಈಗ ಸರಕಾರ ತೆಗೆದುಕೊಂಡಿರುವ ನಿರ್ಧಾರದಿಂದ ಮುಸ್ಲಿಂ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಕಾಶ ಅಬಾದಿತವಾಗಿ ದೊರೆಯಬೇಕು. ಶಿಕ್ಷಣದಿಂದ ಪಡೆದ ವಿವೇಕದ ಮೂಲಕ ಸಂವಿಧಾನದತ್ತ ಆಯ್ಕೆ ಸ್ವಾತಂತ್ರ್ಯದ ಹಕ್ಕನ್ನು ಅವರು ಪಡೆಯುವಂತಾಗಬೇಕು.

ಅಂದಿನ ಆಡಳಿತ, ಇಂದಿನ ವಿರೋಧ ಪಕ್ಷವಾಗಿರುವ ಭಾರತೀಯ ಜನತಾ ಪಕ್ಷ ಮಹಿಳೆಯರ ಶಿಕ್ಷಣದ, ಸ್ವಾತಂತ್ರ್ಯ, ಸಮಾನತೆಯ ಪರವಾಗಿ ತಾವೆಂದೂ ಇಲ್ಲ ಎಂಬುದನ್ನು ಮತ್ತೆ ಮತ್ತೆ ಸಾಬೀತು ಪಡಿಸುತ್ತಿದ್ದಾರೆ. ಈಗ ಮತ್ತೆ ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದೆಂದು ಎಐಡಿಡಬ್ಲ್ಯೂಎ ಸಂಘಟನೆ ಹೇಳಿದೆ.

➘ ಸಾವಿರಾರು ವರ್ಷಗಳಿಂದ ದಲಿತರನ್ನು ವಂಚಿತರನ್ನಾಗಿ ಮಾಡಲಾಗುತ್ತಿದೆ. ಮಿಲ್ಲರ್ ಆಯೋಗ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ತಂದ ಮೀಸಲು. ನಂತರ ಬಂದ ವೆಂಕಟಸ್ವಾಮಿ ಆಯೋಗ, ಮಂಡಲ್ ಆಯೋಗ ರಚನೆಯ ಸಂದರ್ಭದಲ್ಲಿ ಕೂಡ ಮುಂದುವರಿದ ಜಾತಿಗಳು, ತಳ ಸಮುದಾಯಗಳ ಮೀಸಲಾತಿಯನ್ನು ವಿರೋಧ ಮಾಡುತ್ತಾ ಬಂದಿವೆ. ಸದಾಶಿವ ಆಯೋಗದ ವರದಿಗೂ ಕೂಡ ವಿರೋಧ ಬಂದಿದೆ. ಈ ಎಲ್ಲಾ ಬೆಳವಣಿಗೆಯ ನಡುವೆ ನಮ್ಮಲ್ಲೇ ಅಪ ನಂಬಿಕೆಗಳು ಪ್ರಾರಂಭವಾಗಿದೆ. ಕಾಂತರಾಜ್ ವರದಿ ಪ್ರಕಟವಾಗಬೇಕು ಎನ್ನುವಾಗ, ಅದರ ವಿರುದ್ಧ ರಾಜ್ಯ ಸರ್ಕಾರದ ಕೆಲ ಸಚಿವರು ಸಹಿ ಮಾಡಿದ್ದು ಏಕೆ? ಎಂದು ಪ್ರಶ್ನಿಸಿದರು.

ಹೆಣ್ಣನ್ನೇ ನೋಡದೆ, ಹೆಣ್ಣಿನ ಬಗ್ಗೆ ಗೊತ್ತಿಲ್ಲದೆ ನಾನು ಮದುವೆಯಾಗುವುದಿಲ್ಲ ಎಂದು ತಿರಸ್ಕರಿಸಿದಂತಾಗಿದೆ ಈ ವರದಿ ಮೇಲಿನ ವಿರೋಧ ಎಂದು ಸರ್ಕಾರಿ ಎಸ್.ಸಿ., ಎಸ್.ಟಿ. ನೌಕರರ ಸಂಘದ ಅಧ್ಯಕ್ಷ ಡಿ ಶಿವಶಂಕರ್ ಆರೋಪಿಸಿದರು. ಸಮಾಜ ಒಡೆಯುವ ಕೆಲಸ ಮಾಡದೆ ಒಗ್ಗೂಡಿಸುವ ಕೆಲಸ ಮಾಡಬೇಕು ಎಂದರು.

ಕರ್ನಾಟಕ ಆದಿವಾಸಿ ಸಮನ್ವಯ ಸಮಿತಿಯ ರಾಜ್ಯ ಮುಖಂಡ ಡಾ. ಎಸ್. ವೈ. ಗುರುಶಾಂತ್, ಕೃಷಿ ಕೂಲಿಕಾರ ಸಂಘದ ಚಂದ್ರಪ್ಪ ಹೊಸ್ಕೆರ, ಅತಿ ಹಿಂದುಳಿದ ಜಾತಿಗಳ ಮುಖಂಡ ವೇಣುಗೋಪಾಲ್, ಬಿ.ಎಚ್.ಇ.ಎಲ್. ನ ಕಾರ್ಮಿಕ ಸಂಘದ ಮುಖಂಡರು, ನೀರು ಸರಬರಾಜು ಒಳಚರಂಡಿ ಮಂಡಳಿ ನೌಕರರ ಮುಖಂಡರು, ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಮುಖಂಡರು, ಆದಿ ಜಾಂಬವ ಚಲವಾದಿ ಹೋರಾಟ ಸಮಿತಿ ಮುಖಂಡರು ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಕಾಂತರಾಜ್ ಆಯೋಗದ ವರದಿಯನ್ನು ಶೀಘ್ರದಲ್ಲಿ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿ ದುಂಡು ಮೇಜಿನ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಸಂಘಟನೆಯ ವಿವಿಧ ತಾಲೂಕು, ಜಿಲ್ಲೆಗಳಿಂದ ಮುಖಂಡರು ಭಾಗವಹಿಸಿದ್ದರು.

ವರದಿ. ಎನ್.ರಾಜಣ್ಣ

ಇ.ಡಿ.ತಿಪ್ಪರಲಾಗ: ಥಾಮಸ್ ಐಸಾಕ್ ಮತ್ತು ಕೆಐಐಎಫ್‌ಬಿ ಗೆ ಸಮನ್ಸ್ ವಾಪಾಸ್............ ಪುಟ 12 ರಿಂದ

ಈ ಬಗ್ಗೆ ತನಿಖೆಗೆ ಸಂಬಂಧಪಟ್ಟಂತೆ ಆಗ ಹಣಕಾಸು ಮಂತ್ರಿಯಾಗಿದ್ದ ಥಾಮಸ್ ಐಸಾಕ್ ಹಾಗೂ ಕೆ.ಐ.ಐ.ಎಫ್.ಬಿ.ಯ ಸಿಇಒ ಸೇರಿದಂತೆ ಉನ್ನತ ಅಧಿಕಾರಿಗಳಿಗೆ ಪದೇಪದೇ ಅನಗತ್ಯವಾಗಿ ಇ.ಡಿ. ಸಮನ್ಸ್ ಕಳಿಸುತ್ತಿದ್ದುದರ ವಿರುದ್ಧ ಅವರುಗಳು ಹೈಕೋರ್ಟಿಗೆ ಅರ್ಜಿ ಹಾಕಿದ್ದರು.

"ಈ ಪ್ರಕರಣವು ಫೆಮ ಗೆ ಸಂಬಂಧಿಸಿದೆ ಎಂದು ಹೇಳಲಾಗಿದೆ. ನಾನು ಅಥವಾ ಕೆ.ಐ.ಐ.ಎಫ್.ಬಿ. ಕಾನೂನನ್ನು ಉಲ್ಲಂಘಿಸಿದೇವೆಯೇ? ಅದು ಅವರ ವಾದವಾಗಿದ್ದರೆ, ಮಸಾಲಾ ಬಾಂಡ್‌ಗಳಿಗೆ ಎನ್‌ಒಸಿ ಮತ್ತು ನೋಂದಣಿ ಸಂಖ್ಯೆಯನ್ನು ನೀಡಿದ್ದು ಆರ್‌ಬಿಐ ಆಗಿರುವುದರಿಂದ ಅದನ್ನು ಮೊದಲು ಆರ್‌ಬಿಐಗೆ ಸೂಚಿಸಬೇಕು" ಎಂದು ಐಸಾಕ್ ಹೇಳಿದ್ದರು.

ಇದಕ್ಕೆ ಸಂಬಂಧಪಟ್ಟಂತೆ , ಕೆ.ಐ.ಐ.ಎಫ್.ಬಿ. ಗೆ ವಿದೇಶಗಳಲ್ಲಿ ಈ ಮಸಾಲಾ ಬಾಂಡ್‌ಗಳ ಮೂಲಕ ನಿಧಿ ಸಂಗ್ರಹಿಸಲು ತಾನು ಎನ್‌ಒಸಿ (ಆಕ್ಷೇಪಣೆಯೇನೂ ಇಲ್ಲ ಎಂಬ) ಪತ್ರವನ್ನು ನೀಡಿರುವುದಾಗಿ ಭಾರತೀಯ ರಿಝರ್ವ್ ಬ್ಯಾಂಕ್ ಹೈಕೋರ್ಟಿಗೆ ಈಗಾಗಲೇ ತಿಳಿಸಿದೆ.

ಈಗ ಹೈಕೋರ್ಟ್ ಇದನ್ನು ಕೈಗೆತ್ತಿಕೊಳ್ಳುವ ಸಂದರ್ಭದಲ್ಲಿ ಇ.ಡಿ. ತಿಪ್ಪರಲಾಗ ಹಾಕಿ ಸಮನ್ಸ್ ಗಳನ್ನೇ ವಾಪಾಲು ಪಡೆಯಲು ನಿರ್ಧರಿಸಿರುವುದು ಈ ಪ್ರಕರಣ ಒಂದು 'ರಾಜಕೀಯ ನಡೆ' ಎಂಬುದನ್ನು ಬಲಪಡಿಸಿದೆ.

ಇ.ಡಿ. ಸಮನ್ಸ್ ಹಿಂಪಡೆದಿರುವ ಹಿನ್ನೆಲೆಯಲ್ಲಿ ಹೈಕೋರ್ಟ್ ಐಸಾಕ್ ಮತ್ತು ಕೆ.ಐ.ಐ.ಎಫ್.ಬಿ. ಅರ್ಜಿಗಳನ್ನು ವಿಲೇವಾರಿ ಮಾಡಿದೆ. ಅದೇ ಸಮಯದಲ್ಲಿ, ಈ ವಿಷಯದ ಬಗ್ಗೆ ತನ್ನ ತನಿಖೆಯನ್ನು ಮುಂದುವರಿಸಲು ಇ.ಡಿ. ಮುಕ್ತವಾಗಿದೆ ಎಂದು ನ್ಯಾಯಾಲಯ ಹೇಳಿದೆ. ತನಿಖೆ ನಡೆಯಲೇ ಬಾರದು ಎಂದೇನೂ ತಾವು ಕೇಳುತ್ತಿಲ್ಲ, ಅಕಾರಣವಾದ, ಗಾಳ ಹಾಕುವ ತನಿಖೆಯನ್ನು ಮಾತ್ರ ವಿರೋಧಿಸುವುದಾಗಿ ಪ್ರೊ. ಥಾಮಸ್ ಐಸಾಕ್ ಹೇಳಿದ್ದಾರೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE December 25-31, 2023 Price: Rs. 10/- Date of Publication: 22 December 2023 RNI No. KARKAN /2006/17926 Posted on 27-12-2023
Posted at BG PSO, BG - 560026 **Posted at Periodical Rate -** Rs. 2

ಕಪ್ಪು ಮನುಜರು ನಾವು ಕಪ್ಪು ಮನುಜರು
ಈ ಮಣ್ಣ ಕರಿಯೊಡಲ ಕೆಸರಲ್ಲಿ ಮಿಂದು ಬಂದವರು...

ಹಾಡಿಲ್ಲದ ದಲಿತ ಚಳುವಳಿಯನ್ನು ಊಹಿಸಲು ಸಾಧ್ಯವೇ? ಇಲ್ಲ...!

ಲಿಂಗರಾಜು ಮಳವಳ್ಳಿ



ಕಳ್ಳುಬಳ್ಳಿ ಸಂಬಂಧದಂತೆ ಹೋರಾಟದ ಹಾಡುಗಳೊಂದಿಗೆ ದಲಿತ ಚಳುವಳಿ ಬೆಸೆದು ಬೆಳೆದು ಬಂದಿದೆ. ದಲಿತ ಸಂಘಟನೆಗಳ ಯಾವುದೇ ಹೋರಾಟ, ಕಾರ್ಯಕ್ರಮಗಳಲ್ಲಿ ಈಗಲೂ ಹೋರಾಟದ ಹಾಡಿನೊಂದಿಗೆ ಶುರುವಾಗುವ ಪ್ರತೀತಿ ಮುಂದುವರಿದಿದೆ.

ಇಂಥದ್ದೊಂದು ಪರಂಪರೆಯನ್ನು ಆಧರಿಸಿ ಹಾಡುಗಳೊಂದಿಗೆ ದಲಿತ ಚಳುವಳಿ ಬೆಳೆದುಬಂದ ಕಥನವನ್ನು ರಂಗಭೂಮಿ ಮೂಲಕ ನಿರೂಪಿಸುವ ಪ್ರಯತ್ನ ನಡೆದಿರುವುದು ವರ್ತಮಾನದ ದೃಷ್ಟಿಯಿಂದ ಮಹತ್ವದ್ದು.

ಶಂಕರ್ ನಾಗ್ ಪ್ರಶಸ್ತಿ ಪುರಸ್ಕೃತ ಉದಯೋನ್ಮುಖ ರಂಗಕರ್ಮಿ ಕೆ.ಪಿ.ಲಕ್ಷ್ಮಣ್ ವಿನ್ಯಾಸಗೊಳಿಸಿರುವ 'ಪಂಚಮ ಪದ' ಎಂಬ ನಾಟಕ, ಚಂದ್ರಶೇಖರ್ ನಿರ್ದೇಶನದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ಕಂಡಿದೆ. ದಲಿತ ಚಳುವಳಿಯ ಚರಿತ್ರೆಗೆ ಮಹತ್ವದ ದಾಖಲೆಯಾಗಿರುವ ಪಂಚಮ ಪತ್ರಿಕೆ ಮತ್ತು ಹಾಡುಗಳು, ಈ ಎರಡನ್ನೂ ಒಟ್ಟು ತಂದು 'ಪಂಚಮ ಪದ' ಆಗಿದೆ.

ರಾಜ್ಯದ ಜನಚಳುವಳಿಗಳ ಇತಿಹಾಸದಲ್ಲಿ ಎಪ್ಪತ್ತು ಮತ್ತು ಎಂಬತ್ತರ ದಶಕದ ಅವಧಿ ಗುರುತರವಾದುದು. ಎಡ ಚಳುವಳಿ, ರೈತ ಚಳುವಳಿಯ ಜತೆಗೆ ದಲಿತ ಚಳುವಳಿಯೂ ಸಂಘಟಿತ ರೂಪದಲ್ಲಿ ಎದ್ದು ಬಂದ ಮಹತ್ವದ ಘಟ್ಟವೂ ಹೌದು. ದಲಿತ ಚಳುವಳಿಯ ಒಂದು ವೈಶಿಷ್ಟ್ಯ ಎಂದರೆ ಅದು ಹಾಡುಗಳೊಂದಿಗೆ ಬೆಳೆದದ್ದು. ಇದಕ್ಕೆ ಕಾರಣಗಳು ಹಲವಿದ್ದರೂ, ಹೆಸರಾಂತ ಕವಿ ಲೇಖಕರಾದ ಸಿದ್ದಲಿಂಗಯ್ಯ, ದೇವನೂರು ಮಹಾದೇವ, ಕೆ.ಬಿ.ಸಿದ್ದಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಇಂದೂಧರ ಹೊನ್ನಾಪುರರಂತಹ ಹಲವು ಬರಹಗಾರರು ದಲಿತ ಚಳುವಳಿಯ ಮುಖ್ಯ ಭೂಮಿಕೆಯಲ್ಲಿದ್ದುದು ಮತ್ತೊಂದು ಮಹತ್ವದ ಕಾರಣ ಎನಿಸುತ್ತದೆ.

ನೆನ್ನೆ ದಿನ ನನ್ನ ಜನ, ಬರುತಿಹೆವು ನಾವು ಬರುತಿಹೆವು, ಕೋಟಿ ಕೋಟಿ ತಾರೆಗಳಲ್ಲಿ ಲಕ್ಷಾಂತರ ನೋವುಗಳಲ್ಲಿ ನೀ ಹುಟ್ಟಿ ಬೆಳೆದೆಯಮ್ಮ ನನ್ನ ತಂಗಿ ಅನುಸೂಯ, ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆಯ, ಕಪ್ಪು ಮನುಜರು ಎಂಬ ಹಾಡುಗಳು ಭಾರಿ ಜನಪ್ರಿಯತೆಯನ್ನು ಗಳಿಸಿದ್ದವು. ಅಂದು ಹರಿದು ಬಂದ ಅದೇ ಹಾಡುಗಳು ಇಂದಿಗೂ ಯುವ ತಲೆಮಾರಿನ ಕಂಠದಲ್ಲೂ ಹೊಮ್ಮುತ್ತಿವೆ. ಹೊಸ ಹಾಡುಗಳು ಹುಟ್ಟುತ್ತಿಲ್ಲ ಎಂಬ ಕೊರಗು ಆಗಾಗ ಎಲ್ಲಿಂದಲೋ ತೂರಿ ಬರುತ್ತದೆ. ನನ್ನ ಕೇಳಿದರೆ 'ಆಗ ಪ್ರಬಲವಾದ ಚಳುವಳಿ ಜತೆಗೆ ಹಾಡು ಹುಟ್ಟಿತ್ತು, ಈಗ ಅಂತಹ ಪ್ರಬಲವಾದ ಚಳುವಳಿ ಇಲ್ಲ, ಹಾಡು ಹುಟ್ಟುವುದಾದರೂ ಹೇಗೆ? ಎಂದು ಹೇಳುವೆ.



ಜಂಗಮ ತಂಡ ಪ್ರಸ್ತುತಪಡಿಸಿದ 'ಪಂಚಮ ಪದ' ನಿರೀಕ್ಷೆಯಂತೆ ಹಾಡಿನೊಂದಿಗೆ ಆರಂಭಗೊಂಡು ದಲಿತ ಚಳುವಳಿಯ ಪ್ರಮುಖ ಘಟ್ಟಗಳನ್ನು ನರೇಟ್ ಮಾಡುತ್ತಾ, ದಲಿತ ಚಳುವಳಿಯ ಚರಿತ್ರೆಯನ್ನು 90 ನಿಮಿಷದಲ್ಲಿ ಪಕ್ಷಿನೋಟದಂತೆ ಕಟ್ಟಿಕೊಡುತ್ತದೆ. ಒಟ್ಟು ನಾಟಕದಲ್ಲಿ ಪಾತ್ರಗಳೇ ಇಲ್ಲ! ಬದಲಾಗಿ ನರೇಟ್ ಮತ್ತು ಹಾಡುಗಳೇ ಇಲ್ಲಿ ಪಾತ್ರಗಳು. ಅಭಿನಯಕ್ಕೆ ಇಲ್ಲಿ ಹೆಚ್ಚು ಜಾಗವಿಲ್ಲ. ಚರಿತ್ರೆಯನ್ನು ಪರಿಣಾಮಕಾರಿಯಾಗಿ ನರೇಟ್ ಮಾಡುವುದೇ ಇಲ್ಲಿ ಮುಖ್ಯ. ಹೀಗಾಗಿ ಇದು ಬೀದಿನಾಟಕಕ್ಕೆ ಹೇಳಿ ಮಾಡಿಸಿದ ವಿನ್ಯಾಸದಂತಿದೆ.

ನಾಟಕದಲ್ಲಿ ತುಮಕೂರಿನ ದಲಿತ ಚಿಕ್ಕತಿಮ್ಮಯ್ಯನ ಕೊಲೆ ಆಧರಿಸಿ ಕೆ.ಬಿ.ಸಿದ್ದಯ್ಯನವರು ಬರೆದ 'ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆಯ' ಹಾಡು ಕಣ್ಣಾಲಿಗಳನ್ನು ಒದ್ದೆಯಾಗಿಸುತ್ತದೆ. ಅನುಸೂಯ ಪ್ರಕರಣ ಸೇರಿದಂತೆ ದಲಿತ ಚಳುವಳಿಯ ಆಯ್ದ ಪ್ರಮುಖ ಪ್ರಕರಣಗಳನ್ನು ನರೇಟ್ ಮಾಡುತ್ತಲೇ ಎಲ್ಲಿಯೂ ಬೋರು ಹೊಡೆಸದೇ, ಪ್ರೇಕ್ಷಕರನ್ನು ಭಾವುಕರನ್ನಾಗಿಸುತ್ತಲೇ ಕ್ಲೈಮ್ಯಾಕ್ಸ್ ತಲುಪುತ್ತದೆ.

ಕ್ಲೈಮ್ಯಾಕ್ಸ್‌ನಲ್ಲಿ ದಲಿತರ ವಿಮೋಚನೆ ಅಂಬೇಡ್ಕರ್ ವಾದದಲ್ಲೇ ಇದೆ ಎಂಬಲ್ಲಿಗೆ ತಂದು ನಿಲ್ಲಿಸುತ್ತಾರೆ. 'ಮಲಗಿದವರ ಕೂರಿಸಿದೆ, ನಿಲ್ಲಿಸುವವರು ಯಾರು?' ಎಂಬ ಸಿದ್ದಲಿಂಗಯ್ಯನವರ ಪ್ರಶ್ನೆಗೆ, ಅಂಬೇಡ್ಕರ್ ಅವರೇ 'ಎದ್ದು ನಿಲ್ಲುವುದು ಹೇಗೆಂದು ಹೇಳಿ ಹೋಗಿದ್ದಾರೆ, ಛಲದ ಜೊತೆಗೆ ಬಲದ ಪಾಠವನ್ನೂ ಹೇಳಿಕೊಟ್ಟು ಹೋಗಿದ್ದಾರೆ', ಹೀಗಾಗಿ ದಲಿತರ ವಿಮೋಚನೆ ಅಂಬೇಡ್ಕರ್ ವಾದದಲ್ಲೇ ಇದೆ' ಎಂಬುದನ್ನು ಗಟ್ಟಿದನಿಯಲ್ಲಿ ಹೇಳಲು ಪ್ರಯತ್ನಿಸಲಾಗಿದೆ.

ರಾಜ್ಯದ ದಲಿತ ಚಳುವಳಿ ಒಡೆದೊಡೆದು ಬಲಹೀನಗೊಂಡಿರುವ ಈ ಸಮಯದಲ್ಲಿ ಅಂಬೇಡ್ಕರ್ ವಾದವೇ ಅಂತಿಮ ಅಂದುಕೊಂಡಾದರೂ ದಲಿತ ಚಳುವಳಿ ಪುಟಿದೆದ್ದು ನಿಲ್ಲಬೇಕೆಂದು ಎಲ್ಲ ಪ್ರಗತಿಪರ ಚಳುವಳಿಗಳು ಬಯಸುತ್ತಿವೆ. ಹೀಗಾಗಿ ಈ ನಾಟಕವನ್ನು ಆರಂಭದಿಂದಲೂ ದಲಿತ ಚಳುವಳಿಗೆ ನಾಯಕತ್ವ ನೀಡಿದ/ನೀಡುತ್ತಿರುವ ನಾಯಕರುಗಳು ಹಾಗೂ ಬುದ್ಧಿಜೀವಿ ವಲಯ ಹೊಸ ತಲೆಮಾರಿನವರೊಂದಿಗೆ ಕುಳಿತು ಈ ನಾಟಕ ನೋಡಬೇಕಿತ್ತು ಅನಿಸಿತು. ಇದು ಮುಂದಾದರೂ ಆಗುವ ಆಸೆಯಂತೂ ಇದೆ!

ಕೊನೆಯದಾಗಿ, ಅಂಬೇಡ್ಕರ್ ವಾದ ಆಧರಿಸಿದ ದಲಿತರ ವಿಮೋಚನೆಯ ಸಮರದಲ್ಲಿ ನಮ್ಮ ಜತೆ ನಿಲ್ಲುವ ಮಿತ್ರರು ಯಾರು? ಜತೆಗಿದ್ದಂತೆ ನಟಿಸಿ ನಮ್ಮ ವಿರುದ್ಧವೇ ಕತ್ತಿ ತಲವಾರು ಝಳಪಿಸುವ ಶತ್ರುಗಳು ಯಾರು? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳುವ ಜಾಣ್ಮೆಯ ನಡೆಯ ಕುರಿತು ಹೊಸತಲೆಮಾರಿನ ದಲಿತ ಮಿತ್ರರು ಚಿಂತಿಸುವುದು ಒಳಿತು. ಈ ಅಂಶವನ್ನೂ ಒಳಗೊಂಡು ನಾಟಕ ಮೂಡಿಬರುವುದಾದಲ್ಲಿ ಇದು ಇನ್ನಷ್ಟು ಸತ್ವಯುತವಾಗಲಿದೆ.

ಒಟ್ಟಾರೆ 'ಪಂಚಮ ಪದ' ಶ್ಲಾಘನೀಯ ಪ್ರಯೋಗ. ಇದು ಥಿಯೇಟರ್‌ಗೆ ಸೀಮಿತವಾಗದೇ ಬೀದಿ ನಾಟಕವಾಗಿ ಕೇರಿ ಕೇರಿಗಳಲ್ಲಿ ಪ್ರದರ್ಶನ ಆದಲ್ಲಿ ದಲಿತ ಪ್ರಜ್ಞೆಯ ಕಿಚ್ಚಿನ ಕಿಡಿಯೊಂದು ಹೊತ್ತಬಹುದೇನೋ...?!

ಸುರಿ ಮಳೆಯು ಸುರಿಯುವಾಗ ನಾವೆದ್ದು ಕುಣಿಯಬೇಕು
ಮಾನವರಾಗಬೇಕು!

(ಇದು ನಾಟಕ ವಿಮರ್ಷೆ ಅಲ್ಲ, ಕೇವಲ ಅನಿಸಿಕೆಯಷ್ಟೇ)

ಆದಷ್ಟು ಬೇಗ ಜಾತಿ ಜನಗಣತಿ ವರದಿ ಪ್ರಕಟಗೊಳ್ಳಲಿ:

–ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್

ಸರ್ಕಾರದ ನೀತಿ ಕಾರ್ಯಕ್ರಮಗಳು, ಯೋಜನೆಗಳನ್ನು ರೂಪಿಸಲು ಜಾತಿ ಜನಗಣತಿಯ ಅಂಕಿ ಅಂಶದ ಅವಶ್ಯಕತೆ ಇದೆ. ಆದರೆ, 1881ರ ಬ್ರಿಟಿಷ್ ಆಳ್ವಿಕೆಯಲ್ಲಿ ಜಾತಿ ಜನಗಣತಿ ಆರಂಭಗೊಂಡು 1931 ರಲ್ಲಿ ಜಾತಿ ಜನಗಣತಿ ನಡೆದ ನಂತರ ಇದುವರೆಗೂ ಆಗಿರುವುದಿಲ್ಲ. ಈ ಕಾರಣಕ್ಕಾಗಿ ಜಾತಿ ಜನಗಣತಿಯ ವರದಿ ಪ್ರಕಟಿಸುವುದು ಮುಖ್ಯ. ಪ್ರಕಟಣೆಯ ನಂತರ ಅದರ ಬಗ್ಗೆ ವೈಜ್ಞಾನಿಕವಾಗಿ ಇದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಬಹುದು. ಆದಷ್ಟು ಬೇಗ ವರದಿ ಪ್ರಕಟಗೊಳ್ಳಲಿ ಎಂಬುದು ಎಲ್ಲರ ಆಶಯವಾಗಿದೆ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹೇಳಿದರು.

ಅವರು, 2023ರ ಡಿಸೆಂಬರ್ 19ರಂದು ಬೆಂಗಳೂರಿನಲ್ಲಿ ದಲಿತ ಹಕ್ಕುಗಳ ಸಮಿತಿ ಏರ್ಪಡಿಸಿದ್ದ 'ಸಾಮಾಜಿಕ ಶೈಕ್ಷಣಿಕ ಜಾತಿ ಜನಗಣತಿ ಸುತ್ತಮುತ್ತ' ದುಂಡು ಮೇಜಿನ ಸಭೆಯನ್ನು ಉದ್ಘಾಟನೆ ಮಾಡಿ ಮಾತನಾಡಿದರು.

ಸರ್ಕಾರದ ತಾರತಮ್ಯ ಸರಿಯಲ್ಲ

ಹಿರಿಯ ನಿವೃತ್ತ ಐಎಎಸ್ ಅಧಿಕಾರಿ ಎನ್.ಸಿ. ಮುನಿಯಪ್ಪನವರು ಮಾತನಾಡಿ, ಸಾಮಾಜಿಕ ನ್ಯಾಯ ಅಳವಡಿಕೆ ಆಗಿದೆಯೇ ಎಂಬುದನ್ನು ನಾವು ಪರಿಗಣಿಸಬೇಕಾಗಿದೆ. ನಾನು ಕೂಡ ಕಾಂತರಾಜ್ ಆಯೋಗದ ವರದಿ ತಯಾರಿಕೆಯಲ್ಲಿ ಪಾಲ್ಗೊಂಡವನು ಅದನ್ನು ವೈಜ್ಞಾನಿಕ ರೀತಿಯಲ್ಲಿ ಸಿದ್ಧಗೊಳಿಸುವ ಪ್ರಯತ್ನ ಮಾಡಲಾಗಿದೆ. ಒಂದೆಡೆ ಬ್ರಾಹ್ಮಣ, ಲಿಂಗಾಯಿತ, ಒಕ್ಕಲಿಗ ಅಭಿವೃದ್ಧಿ ನಿಗಮಗಳಿಗೆ ಸುಮಾರು 500 ಕೋಟಿ ರೂ.ಗಳ ಅನುದಾನವನ್ನು ಸರ್ಕಾರಗಳು ನೀಡುತ್ತವೆ, ಮತ್ತೊಂದೆಡೆ ಮ್ಯಾನುಯೆಲ್ ಸ್ಕ್ಯಾವೆಂಜರ(ಮಲದ ಗುಂಡಿ ಸ್ವಚ್ಛಗೊಳಿಸುವ ಕೆಲಸ) ನಿಗಮಕ್ಕೆ ರೂ. 5 ಕೋಟಿ ಮಾತ್ರ ನೀಡಲಾಗಿದೆ. ಈ ರೀತಿಯ ತಾರತಮ್ಯ ಸರ್ಕಾರ ನಡೆಸುತ್ತಿರುವುದು ಸರಿಯಲ್ಲ ಎಂದರು.

ತಡೆಹಿಡಿಯಬಾರದು

ಪುಟ 14 ಕ್ಕೆ



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**